2. Notification No. HD 183 CNA 78, dated 22nd June 1979.

Exemption from the provisions of Section 20 of the Karnataka Cinemas (Regulation) Act, 1964 for exhibition of 35 mm. feature films by M/s K.E.B, and S.V.P. Club, Jog Falls.

3. Notification No. HD 38 CNA 79, dated 21st/23rd June, 1979.

Exemption from the provisions of Section 20 of the Karnataka Cinemas (Regulation) Act, 1964 for exhibition of 35 mm feature films of a cultural Education and Fine Arts Club, Bangalore.

Under Section 22 of the Karnataka Cinemas (Regulation) Act, 1964.

4. SRI L. G. HAVANUR (Minister for Law and Social Welfare and Backward Classes).—I lay a copy of the statement under sub-rule (2) of rule 70 of the Rules of Procedure and Conduct of Business in the Legislative Assembly in respect of the Bangalore City Civil Court Ordinance, 1979.

MR. SPEAKER.—All papers are laid on the Table.

REPORTS

1. The Anunal Report of the Karnataka Public Service Commission and Government Memorandum for the year 1972-73.

2. 11th Annual Report of the Karnataka Agro Industries Corporation Limited for the year 1977-78.

3. The Third Annual Report of the Karnataka Food and Civil Supplies Corporation Limited, for the year 1975-76.

4. The Fifth Annual Report of the Karnataka State Forest Industries Corporation Limited for the year 1977-78.

5. The Annual Administration Report of the Karnataka Secondary Education Examination Board for the year 1978-79.

6. The Annual Administration Report of the Karnataka Electricity Board, Bangalore for the year 1976-77.

Police firing at Yadgir.

Notice of Adjournment Motion.

†ಶ್ರೀ ಜಿ. ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ೮ನೇ ತಾರೀಖು ಸೆಪ್ಟೆಂಬರ್ ಮಾಹೆಯಲ್ಲಿ ಯಾದಗಿರಿ ಟೌನ್‌ನಲ್ಲಿ ಪೋಲೀಸರ ಗೋಲಿಬಾರ್‌ನಿಂದಾಗಿ ೩ ಜನರು ಸತ್ತಿದ್ದಾರೆ. ಆದಕ್ಕಾಗಿ ಈ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮವನ್ನು ಕೈಕೊಳ್ಳಬೇಕು. ಈ ವಿಷಯದಲ್ಲಿ ಇಲ್ಲಿ ಚರ್ಚೆಯಾಗಬೇಕು ಎನ್ನುವ ಉದ್ದೇಶದಿಂದ ನಾನು ಮತ್ತು ನನ್ನ ಸ್ನೇಹಿತರು ಒಂದು ನಿಲುವಳಿ ಸೂಚನೆಯನ್ನು ಕಳಿಸಿ

ದ್ದೇವೆ. ಅದು ಬಹಳ ಮುಖ್ಯವಾದ ನಿಲುವಳಿ ಸೂಚನೆಯಾಗಿದೆ. ಆದ್ದರಿಂದ ಇವತ್ತು ತಾವು ಈ ಸದನದ ಕಾರ್ಯಕಲಾಪಗಳನ್ನು ಮುಂದುವರಿಸಿ ಈ ಒಂದು ಮಹತ್ವವಾದ ಘಟನೆಯ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈ ಮಹತ್ವದ ಘಟನೆಯಿಂದಾಗಿ ಇಬ್ಬರು ಮುಸ್ಲಿಮರು, ಒಬ್ಬರು ಹರಿಜನರು ಸತ್ತುಹೋಗಿದ್ದಾರೆ. ೬ ಜನರಿಗೆ ತೀವ್ರವಾದ ಗಾಯಗಳಾಗಿವೆ. ಈ ವಿಷಯ ಬಹಳ ಮಹತ್ವದ ವಿಷಯವಾಗಿರುವುದರಿಂದ, ಇದು ಡೆಫನೆಟ್ ಆಗಿರುವುದರಿಂದ ಅಲ್ಲದೇ ಇದು ಪಬ್ಲಿಕ್ ಇಂಪಾರ್ಟೆನ್ಸ್ ಹೊಂದಿರುವುದರಿಂದ ಮತ್ತು ಇದು ಇತ್ತೀಚೆಗೆ ನಡೆದ ಘಟನೆಯಾಗಿರುವುದರಿಂದ ಸರ್ಕಾರ ಈ ವಿಷಯದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಸತ್ತವರ ಕುಟುಂಬವರ್ಗದವರಿಗೆ ಸೂಕ್ತವಾದ ಕಾಂಪನ್‌ಸೇಷನ್ ಕೊಡಬೇಕು ಮತ್ತು ಯಾರಿಗೆ ತೀವ್ರತರವಾದ ಗಾಯಗಳಾಗಿವೆ ಅವರಿಗೂ ಸಹ ಮತ್ತಷ್ಟು ಕಾಂಪನ್‌ಸೇಷನ್ ಕೊಡಬೇಕೆಂಬ ಉದ್ದೇಶದಿಂದ ನಾವು ಈ ನಿಲುವಳಿ ಸೂಚನೆಯನ್ನು ತಮಗೆ ಕಳಿಸಿದ್ದೇವೆ. ಇದು ಸೆಪ್ಟೆಂಬರ್ ತಿಂಗಳ ೮ನೇ ತಾರೀಖಿನಂದು ನಡೆದ ಘಟನೆಯಾಗಿರುವುದರಿಂದ ತಾವು ದಯಮಾಡಿ ಇವತ್ತಿನದಿವಸ ಈ ಸಭೆಯ ಕಾರ್ಯಕಲಾಪಗಳನ್ನು ಮುಂದುವರಿಸಿ ಈ ವಿಷಯ ವನ್ನು ಚರ್ಚೆ ಮಾಡುವುದಕ್ಕೆ ಆಸ್ಪದ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈಗ ತಾನೇ ಹೇಳಿದಹಾಗೆ...

ಅಧ್ಯಕ್ಷರು.—ಮಾನ್ಯ ಒಡೆಯರಾಜ್‌ರವರೇ ತಾವು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. Sriyuths Prabhakar Telkar, P. Ramdev, Manik Rao Patil, Sawoor Shivanna and Dharamsingh have given a call attention notice and it is included in today's Agenda and the Chief Minister is going to make a statement. After that I will permit you to speak.

(ಈ ಸಂದರ್ಭದಲ್ಲಿ ಒಮ್ಮೆಲೆ ೪-೫ ಜನ ಮಾನ್ಯಸದಸ್ಯರು ಎದ್ದು ನಿಂತು ಮಾತನಾಡಲು ಪ್ರಾರಂಭ ಮಾಡಿದರು.)

ಶ್ರೀ ಧರ್ಮಸಿಂಗ್.—ಸ್ವಾಮಿ, ಇವತ್ತು ರಾಜ್ಯದಲ್ಲಿ ಗೋಲಿಬಾರ್‌ಗಳು ಆಗುತ್ತಿವೆ. ಜನರು ಸಾಯುತ್ತಿದ್ದಾರೆ. ಇದು ರಾಜ್ಯ ಸರ್ಕಾರಕ್ಕೆ ನಿಜವಾಗಿ ನಾಚಿಕೆ ತರುವ ವಿಷಯ. ಈ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಅದಕ್ಕೋಸ್ಕರ ಇದನ್ನು ಪರಿವರ್ತನೆ ಮಾಡಿ ಮಾತ ನಾಡುವುದಕ್ಕೆ ಅವಕಾಶ ಕೊಡಿ.

(ಇಂಟರಪ್‌ಷನ್ಸ್)

MR. SPEAKER.—If you persist like this I am going to order that it should not be recorded. The hon. member must first of all obey the rules.

ಶ್ರೀ ಧರ್ಮಸಿಂಗ್.—ಸ್ವಾಮಿ, ಇದು ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂಥ ವಿಚಾರ. ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಇಂಟರಪ್‌ಷನ್ಸ್)

MR. SPEAKER.—Don't record.

ಶ್ರೀ ಧರ್ಮಸಿಂಗ್.—ಸ್ವಾಮಿ, ಅಲ್ಲಿ ಇಬ್ಬರು ಮುಸ್ಲಿಂಸ್ ಮತ್ತು ಒಬ್ಬ ಹರಿಜನರು ಸತ್ತಿದ್ದಾರೆ. ಈ ವಿಷಯವನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ ಅದಕ್ಕೋಸ್ಕರ ತಾವು ಅದನ್ನು ಪರಿವರ್ತನೆ ಮಾಡಿ ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ. ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ,

---

*Matter not recorded as directed by the Hon. Speaker.

MR. SPEAKER.—You have to speak within the ambit of rules. If more than one member rise and speak it is not possible to understand. Let Sri Vadeyaraj say what he wants. Whether consent should be given or not is a matter to be decided later.

SRI MALLIKARJUNA KHARGE.—The hon. members have given a call attention notice but they are not willing to hear the reply.

MR. SPEAKER.—As I have said earlier the call Attention Notice is included in the Agenda. Sri G. P. Vadeyaraj and about 23 others have given notice of adjournment motion. I have said that the matter is put on the Agenda and the Chief Minister will make a statement and if any clarifications are required on any point not covered in the reply, members may ask. That is my suggestion

ಶ್ರೀ ಜಿ. ಪಿ. ಒಡೆಯರಾಜ್.—ಸ್ವಾಮಿ, ತಾವು ಹೇಳಿದ್ದನ್ನು ನಾನು ಗಮನಕೊಟ್ಟು ಹೇಳಿದ್ದೇನೆ. ಈ ನಿಲುವಳಿ ಸೂಚನೆಯನ್ನು ನಾವು ಇಲ್ಲಿ ಏತಕ್ಕೆ ತಂದಿದ್ದೇವೆ ಎಂದರೆ ಇದು ಬಹಳ ಗಂಭೀರವಾದ ವಿಷಯ ಮತ್ತು ಸಾರ್ವಜನಿಕ ದೃಷ್ಟಿಯಿಂದ ಬಹಳ ಮಹತ್ವವಾದ ವಿಷಯವಾಗಿದೆ. ಇಂತಹ ಒಂದು ಮಹತ್ವವಾದ ವಿಷಯ ಕೇವಲ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ, ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಸ್ಟೇಟ್‌ಮೆಂಟ್ ಮಾಡುತ್ತಾರೆ, ಆಮೇಲೆ ಕೆಲವು ಕ್ಲಾರಿಫಿಕೇಷನ್ ಕೇಳಿ ಮುಗಿಸತಕ್ಕಂಥ ವಿಷಯವಲ್ಲ. ಅಲ್ಲಿ ಪೋಲೀಸರ ಗೋಲೀಬಾರ್‌ನಿಂದ ೩ ಜನರು ಸತ್ತಿದ್ದಾರೆ. ಕೆಲವರಿಗೆ ಬ್ರೈನ್ ಇನ್‌ಜ್ಯೂರ್ ಆಗಿದೆ. ೬ ಜನರಿಗೆ ತೀವ್ರವಾದ ಗಾಯಗಳಾಗಿ ತುಂಬಾ ಸೀರಿಯಸ್ ಆಗಿದೆ. ಈ ವಿಷಯವನ್ನು ತಾವು ಅಷ್ಟು ಸುಲಭವಾಗಿ ತೆಗೆದುಕೊಳ್ಳತಕ್ಕಂಥಾದ್ದು ಸರಿಯಲ್ಲ ಎಂಬುದೇ ನಮ್ಮ ಕೋರಿಕೆ. ಮತ್ತೊಂದು ವಿಚಾರವೇನೆಂದರೆ an adjournment motion will have precedence over the call attention notice. ಈ ದೃಷ್ಟಿಯಿಂದ ತಾವು ಇದನ್ನು ಒಂದು ಪರಿಮಿತಿಯಲ್ಲಿ ಅಷ್ಟು ಸುಲಭವಾಗಿ ಡಿಸ್‌ಪೋಸ್ ಮಾಡತಕ್ಕಂಥಾದ್ದು ಸಾಧುವಲ್ಲ. ಈ ವಿಷಯ ಕೇವಲ ಯಾದಗಿರಿಗೆ ಅಷ್ಟೇ ಅಲ್ಲ, ಚರ್ಚೆ ಮಾಡಬೇಕಾದ ಪ್ರಸಂಗ ಬಂದಾಗ ಇಡೀ ರಾಜ್ಯಕ್ಕೆ ಸಂಬಂಧ ಪಡುತ್ತದೆ ಎನ್ನುವ ವಿಚಾರವನ್ನು ನಾನು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಅರಿಕೆ ಮಾಡಿಕೊಳುತ್ತೇನೆ. ಅದಕ್ಕಾಗಿ ಸಾರ್ವಜನಿಕ ದೃಷ್ಟಿಯಿಂದ ಬಹಳ ಮಹತ್ವವಾದ ವಿಷಯವಾದ್ದರಿಂದ ಇದಕ್ಕೆ ತಮ್ಮ ಕನ್‌ಸೆಂಟ್ ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ತಾವು ಏತಕ್ಕಾಗಿ ಇದಕ್ಕೆ ಕನ್‌ಸೆಂಟ್ ಕೊಡಬೇಕೆಂಬುದರ ಬಗ್ಗೆ ತಮ್ಮ ಮನ ಒಲಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು.—ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಬಂಗಾರಪ್ಪನವರು ಏನನ್ನೋ ಹೇಳಬೇಕೆಂದಿದ್ದಾರೆ. ಅವರು ಅದನ್ನು ಹೇಳಲಿ.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಸದನದ ಕೆಲವು ಮಾನ್ಯ ಸದಸ್ಯರುಗಳು ರೂಲ್ ೬೩ರ ಪ್ರಕಾರ ಗಮನ ಸೆಳೆಯುವ ಸೂಚನೆಯನ್ನು ಕಳಿಸಿಕೊಟ್ಟಿರುವುದನ್ನು ತಾವು ಈ ದಿವಸದ ಕಾರ್ಯಕಲಾಪಗಳಲ್ಲಿ ಹಾಕಿದ್ದೀರಿ, ಇಲ್ಲಿ ಅವರು ರುಜು ಹಾಕಿ ಕಳಿಸಿರತಕ್ಕಂಥ ಈ ಒಂದು ಸೂಚನೆಯಲ್ಲದೆ ನಿಲುವಳಿ ಸೂಚನೆಯನ್ನೂ ಸಹ ಕೆಲವರು ರುಜು ಹಾಕಿ ಈ ಸೂಚನೆಯನ್ನು ನಾವೆಲ್ಲಾ ಕಳಿಸಿಕೊಟ್ಟಿದ್ದೇವೆ. ಈ ವಿಷಯದಲ್ಲಿ ಒಬ್ಬೊಬ್ಬರ ಅಭಿಪ್ರಾಯ ಒಂದೊಂದು ರೀತಿ ಆಗಬಹುದು. ಇಲ್ಲಿ ಗಮನ ಸೆಳೆಯುವ ಸೂಚನೆ ಇದ್ದರೆ ಈ ವಿಷಯ ಇಲ್ಲಿ ಇತ್ಯರ್ಥ ಆಗಬಹುದು ಅಥವಾ ಹಾಗೆಯೇ ಇರಬಹುದು. ಆದರೆ...

೨-೮೦ ಪಿ.ಎಂ.

ನನಗೆ ಗೊತ್ತಿರುವ ಹಾಗೆ, ಸಭೆಯ ಹಿಂದಿನ ಕಲಾಪ ಅಥವಾ ನಡವಳಿಕೆಗಳನ್ನು ವಿಚಾರಮಾಡಿ ನೋಡುವುದಾದರೆ, ನಿಯಮ ೬೩ರ ಕೆಳಗೆ ಈ ವಿಷಯವನ್ನು ತೆಗೆದುಕೊಂಡರೆ ಇದನ್ನು ವಿಶದವಾಗಿ ಚರ್ಚೆ ಮಾಡಲು ಕೆಲವು ಅಡಚಣೆಗಳಿವೆ. ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ಚರ್ಚೆಗೆ ತೆಗೆದುಕೊಂಡರೆ. ಗಮನ ಸೆಳೆಯುವ ಸೂಚನೆಗೆ ಸಹಿ ಮಾಡಿರುವ ಸದಸ್ಯರು ಸರ್ಕಾರದ ಗಮನ ಸೆಳೆದಾಗ ಅದಕ್ಕೆ ಸಂಬಂಧಪಟ್ಟ ಸಚಿವರು ಅಂದರೆ ಗೃಹಖಾತೆಯನ್ನು ವಹಿಸಿಕೊಂಡಿರುವ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಓದುತ್ತಾರೆ. ಅವರ ಹೇಳಿಕೆ ಮೇಲೆ ಮತ್ತೆ ವಿವರಣೆಗಳನ್ನು ಗಮನ ಸೆಳೆಯುವ ಸೂಚನೆಗೆ ಸಹಿ ಹಾಕಿರುವವರು ಮಾತ್ರ ಕೇಳಬೇಕೇ ವಿನಹ ಬೇರೆ ಸದಸ್ಯರು ಕೇಳುವುದಕ್ಕೆ ನಿಯಮದ ಪ್ರಕಾರ ಅವಕಾಶವಿಲ್ಲ. ಅಷ್ಟೇ ಏಕೆ, ಸಹಿ ಹಾಕಿರುವ ಸದಸ್ಯರೂ ಸಹ ಒಂದೆರಡು ವಿವರಣೆಗಳನ್ನು ಬಿಟ್ಟು ಹೆಚ್ಚಿಗೆ ಕೇಳುವುದಕ್ಕೆ ಅವಕಾಶವಿಲ್ಲ. ಇದು ತಮಗೂ ಗೊತ್ತಿದೆ. ಎಲ್ಲೋ ಒಂದು ಕಡೆ ರೋಗ ಬಂದು ಒಂದೆರಡು ಜನ ಸತ್ತುಹೋದರೆ ಅಥವಾ ಯಾರಿಗಾದರೂ ಸಣ್ಣ ಪುಟ್ಟ ಗಾಯಗಳಾದರೆ ಅಥವಾ ಯಾರ ಜೀವಕ್ಕೂ ನಷ್ಟವಿಲ್ಲದೆ ಗಾಯಗಳಾದರೆ- ಅಂತಹ ವಿಷಯಗಳನ್ನು ನಿಯಮ ೬೩ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳಬಹುದು. ಆದರೆ, ಇಂದು ನಮ್ಮ ಮುಂದಿರತಕ್ಕ ವಿಷಯ, ಸಾರ್ವಜನಿಕ ಮಹತ್ವವನ್ನು ಪಡೆದಿರತಕ್ಕ ಮತ್ತು ಅತಿ ಜರೂರಾತಿಯನ್ನು ಹೊಂದಿರತಕ್ಕದ್ದಾಗಿದೆ. ಈ ವಿಷಯ ೮ನೇ ಅಧ್ಯಾಯದ ೫೦, ೫೧ ಮತ್ತು ೫೨ನೇ ನಿಯಮಗಳಿಗೆ ಸಂಪೂರ್ಣ ಒಪ್ಪಿಗೆಯಾಗಿರುತ್ತದೆ. ನಮ್ಮ ಶಾಸನ ಸಭೆಯ ಕಲಾಪಗಳ ಪುಟಗಳನ್ನು ತಿರುವಿಹಾಕಿದಾಗ ನಮ್ಮ ಗಮನಕ್ಕೆ ಈ ಅಂಶಗಳು ಬರುತ್ತವೆ. ಎರಡು ಗುಂಪುಗಳ ನಡುವೆ ಘರ್ಷಣೆಯಾಗಿ ಜನ ಸತ್ತರೆ ಆ ವಿಷಯವೇ ಬೇರೆ. ಪೋಲೀಸ್ ಇಲಾಖೆಯವರು ಹೋಗಿ ನೋಡಿ ಘಟನೆ ಬಗ್ಗೆ ನಿಷ್ಪಕ್ಷಪಾತವಾಗಿ ನಡೆದಿದ್ದಾರೆ ಎಂದು ಹೇಳಬಹುದು. ಆದರೆ, ಇಲ್ಲಿ ಪೋಲೀಸಿನವರೇ ಬಂದೂಕಿನಿಂದ ಗುಂಡನ್ನು ಹಾರಿಸಿ ಸಾರ್ವಜನಿಕರ ಜೀವವನ್ನು ತೆಗೆದಿರುವ ವಿಚಾರವಿರುವುದರಿಂದ, ಇದರ ಬಗ್ಗೆ ಹೇಳಿಕೆಯನ್ನು ಕೊಡುವವರು ಯಾರು ? ಇದರ ಬಗ್ಗೆ ಪೋಲೀಸ್ ಇಲಾಖೆಯಲ್ಲದೆ ಬೇರೆ ಯಾರೂ ವರದಿ ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಪೋಲೀಸರೇ ಗುಂಡು ಹಾರಿಸಿ ಸಾರ್ವಜನಿಕರ ಪ್ರಾಣಹಾನಿ ಮಾಡಿರತಕ್ಕ ಸಂದರ್ಭದಲ್ಲಿ, ಘಟನೆ ಬಗ್ಗೆ ಪೋಲೀಸರಿಂದಲೇ ಮಾಹಿತಿ ಒದಗಿಸಿದರೆ ಅದು ಎಷ್ಟರಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದಿರುತ್ತದೆನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಆದುದರಿಂದ, ಮಾನ್ಯ ಅಧ್ಯಕ್ಷರೇ ಇದು ಗಮನ ಸೆಳೆಯುವ ಸೂಚನೆಯಡಿಯಲ್ಲಿ ಬರುವ ವಿಷಯವಲ್ಲ. ಮಾನ್ಯ ಪ್ರಭಾಕರ್ ತೇಲ್ಕರ್ ಮತ್ತಿತರ ಸದಸ್ಯರು ಗಮನ ಸೆಳೆಯುವ ಸೂಚನೆ ಕೆಳಗಡೆ ಈ ವಿಷಯವನ್ನು ತಂದಿದ್ದಾರೆ, ಅವರಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಗಮನ ಸೆಳೆಯುವ ಸೂಚನೆಯನ್ನಾಗಿ ಈ ವಿಷಯವನ್ನು ತಂದರೆ ನಾವು ಹೆಚ್ಚಿಗೆ ಮಾಹಿತಿಯನ್ನು ಸರ್ಕಾರದಿಂದ ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ, ತಾವು ಮಾನ್ಯ ಒಡೆಯರಾಜ್ ಅವರ ಮಾತಿಗೆ ಓಗೊಡಬೇಕೆಂದು ಹೇಳುತ್ತೇನೆ.

ಅಲ್ಲಿರುವ ಪೋಲೀಸ್ ಸ್ಟೇಷನ್ ಸುಮಾರು ಇಪ್ಪತ್ತೈದು ಅಡಿ ಮೇಲಿದೆ. ಅದರೊಳಗಡೆ ಸುಮಾರು ನೂರೈವತ್ತು ಜನ ಸೇರಬಹುದು ಅಷ್ಟೆ. ಆದುದರಿಂದ, ಈ ವಿಷಯವನ್ನು ನಿಲುವಳಿ ಸೂಚನೆಯನ್ನಾಗಿ ಪರಿವರ್ತಿಸಿದರೆ ಆ ಸೂಚನೆಗೆ ಬೇಕಾದ ಷರತ್ತುಗಳನ್ನು ಪೂರೈಸಿ, ಅದನ್ನು ಚರ್ಚೆಗೆ ತೆಗೆದುಕೊಳ್ಳುವಂತೆ ಮಾನ್ಯ ಅಧ್ಯಕ್ಷರನ್ನು ಒಪ್ಪಿಸಲು ನಾವು ಸಂಪೂರ್ಣ ಪ್ರಯತ್ನ ಮಾಡುತ್ತೇವೆ. ನಮ್ಮ ವಾದವನ್ನು ಕೇಳಿದ ಮೇಲೆ ಅಂತಿಮ ತೀರ್ಮಾನವನ್ನು ತಾವು ಕೊಡಬೇಕಾಗುತ್ತದೆ. ಈ ಘಟನೆಯಲ್ಲಿ ಸತ್ತಿರುವವರು ಮೂರೇ ಜನರಲ್ಲ. ಹೈದರಾಬಾದ್ ಆಸ್ಪತ್ರೆಯಲ್ಲಿ ಮುಸಲ್ಮಾನ್ ಬಾಂಧವನೊಬ್ಬ ಸತ್ತಿದ್ದಾನೆ. ಅಂದರೆ, ಈ ಘಟನೆಯಲ್ಲಿ ಒಟ್ಟು ನಾಲ್ಕು ಜನ ಸತ್ತಿದ್ದಾರೆ.

ಅಧ್ಯಕ್ಷರು.—ಮೊದಲು ಗಮನ ಸೆಳೆಯುವ ಸೂಚನೆ ಆಗಲಿ. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಮುಗಿಯಲಿ. ನಂತರ ತಾವು ಈ ವಿಷಯವನ್ನು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳಬೇಕೆಂದು ಹೇಳಿದರೆ, ಅದರ ಬಗ್ಗೆ ನಾನು ಒಪ್ಪಿಗೆ ಕೊಡಬೇಕೇ ಇಲ್ಲವೆ ಎನ್ನುವ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ನಾನು ಹೇಳುವುದರಲ್ಲಿ ಸ್ವಲ್ಪ ಅರ್ಥವಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಹಾಗೆ ಮಾಡಿದ್ದೇ ಆದರೆ ನಿಯಮಾವಳಿ ಪ್ರಕಾರ ಒಂದು ತೊಂದರೆ ಬರುತ್ತದೆ. ೮ನೇ ಅಧ್ಯಾಯದಲ್ಲಿ ೫೨ನೇ ನಿಯಮದ ೫ನೇ ಉಪಕಲಂನಲ್ಲಿ ''ಸಭೆಯ

ಅದೇ ಅಧಿವೇಶನದಲ್ಲಿ ಚರ್ಚೆಯಾಗಿರುವ ಒಂದು ವಿಷಯದ ಸಂಬಂಧವಾಗಿ, ನಿಲುವಳಿ ಸೂಚನೆಯ ಚರ್ಚೆಯನ್ನು ಪುನಃ ಎತ್ತುವಂತಿರಕೂಡದು'' ಎಂದು ಇದೆ. ಈ ನಿಯಮವಿರುವುದರಿಂದ, ಗಮನ ಸೆಳೆಯುವ ಸೂಚನೆ ತೆಗೆದುಕೊಂಡಾದ ಮೇಲೆ ಇದನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಲು ತಮಗೆ ಮನಸ್ಸಿದ್ದರೂ ಕೊಡುವುದಕ್ಕಾಗುವುದಿಲ್ಲ. ಆದುದರಿಂದ, ಈ ವಿಷಯದ ಬಗ್ಗೆ ಚರ್ಚೆ ಮಾಡಲು ಗಮನ ಸೆಳೆಯುವ ಸೂಚನೆ ಬೇಡ.

ಅಧ್ಯಕ್ಷರು.—ಈ ವಿಷಯದ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಗಮನ ಸೆಳೆಯುವ ಸೂಚನೆಯೊಂದನ್ನು ತಂದಿದ್ದಾರೆ. ಈಗ ನಾನು ಅವರ ಹಕ್ಕನ್ನು ಹೇಗೆ ಮೊಟಕು ಮಾಡುವುದಕ್ಕಾಗುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕಾಗಿಯೇ, ನಾನು ಗಮನ ಸೆಳೆಯುವ ಸೂಚನೆಯನ್ನು ತಂದಿರುವವರಲ್ಲಿ—ಇದನ್ನು ನಿಲುವಳಿ ಸೂಚನೆಯನ್ನಾಗಿ ಪರಿವರ್ತಿಸಲು ಒಪ್ಪಿಗೆ ಕೊಡಿ ಎಂದು ವಿನಂತಿಸಿಕೊಂಡದ್ದು.

ಅಧ್ಯಕ್ಷರು.—ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯ ಗಮನ ಸೆಳೆಯುವ ಸೂಚನೆ ಎಂದು ಇದೆ.

ಶ್ರೀ ಎಸ್. ಬಂಗಾರಪ್ಪ.—ನಿಲುವಳಿ ಸೂಚನೆಯನ್ನಾಗಿ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಇರುವ ಎಲ್ಲ ಷರತ್ತುಗಳನ್ನೂ ಸಂಪೂರ್ಣವಾಗಿ ತೃಪ್ತಿಗೊಳಿಸುವಂಥ ವಿವರಗಳನ್ನು ನಾವು ಹೊಂದಿದ್ದೇವೆ. ಇದು ಮೊನ್ನೆ ಮೊನ್ನೆ ನಡೆದಿರತಕ್ಕ ಘಟನೆ. ನಿನ್ನೆ ದಿವಸವೇ ಈ ಘಟನೆ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದಿದ್ದೆವು. ಆದರೆ. ನಿನ್ನೆ ನಡೆದ ಕಾರ್ಯಕಲಾಪದಲ್ಲಿ ಇದನ್ನು ತರಲಿಕ್ಕಾಗುತ್ತಿರಲಿಲ್ಲವೆಂಬುದನ್ನು ತಾವು ಬಲ್ಲಿರಿ. ಈ ವಿಷಯವನ್ನು ಇಂದು ಚರ್ಚೆಗೆ ತೆಗೆದುಕೊಳ್ಳದೆ ಹೋದರೆ ಈ ಘಟನೆ ''ಇತ್ತೀಚೆಗೆ ನಡೆದ'' ಘಟನೆ ಎಂಬ ಮಹತ್ವವನ್ನು ಕಳೆದುಕೊಳ್ಳುತ್ತದೆ. ವಿರೋಧ ಪಕ್ಷದವರೇ ವಿವರಣೆಗಳನ್ನು ಕೇಳಬೇಕೆಂದಲ್ಲ, ಆಡಳಿತ ಪಕ್ಷದವರೂ ಕೇಳಲಿ. ಕಳೆದುಕೊಂಡಿರುವ ಜೀವವನ್ನು ತರುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಆದರೂ, ಘಟನೆಯ ಸತ್ಯಾಸತ್ಯತೆಯನ್ನು ಈ ಸಭೆ ತಿಳಿಯಬೇಕು. ನ್ಯಾಯಾಂಗ ತನಿಖೆ ಮಾಡಲು ಸರ್ಕಾರ ಒಪ್ಪುವುದು ಬೇರೆ ವಿಚಾರ. ಮೊದಲು ಈ ಘಟನೆ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು. ಈ ಘಟನೆ ಬಗ್ಗೆ ಮಾತನಾಡಲು ವಿರೋಧ ಪಕ್ಷದವರೇ ಅಲ್ಲ, ಆ ಭಾಗದಿಂದ ಬಂದಿರುವ ಮತ್ತು ಆಡಳಿತ ಪಕ್ಷದಲ್ಲಿರುವ ಶ್ರೀ ಖಾರ್ಗೆ ಮತ್ತಿತರರೂ ಇದ್ದಾರೆ. ಮತ್ತು ಗಮನ ಸೆಳೆಯುವ ಸೂಚನೆಗೆ ಸಹಿ ಮಾಡಿರುವವರೂ ಇದ್ದಾರೆ. ಅವರೆಲ್ಲ ಚರ್ಚೆಯಲ್ಲಿ ಭಾಗವಹಿಸಿ, ವಿಚಾರಗಳನ್ನು ವಿಶದವಾಗಿ ತಿಳಿಸಬಹುದು. ಅಷ್ಟೇ ಅಲ್ಲದೆ, ಮುಂದೆ ಈ ಘಟನೆ ಬಗ್ಗೆ ಯಾವುದಾದರೊಂದು ತನಿಖೆಯಾದರೆ ಶಾಸನ ಸಭೆಯಲ್ಲಿ ನೀಡಿದ ಮಾಹಿತಿಗಳು ಉಪಯೋಗಕ್ಕೆ ಬರುತ್ತವೆ. ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ ಇರುವ ಮೂಲಭೂತವಾದ ಹಕ್ಕನ್ನು ರಕ್ಷಿಸಿ, ಈ ಘಟನೆಯ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಚರ್ಚೆ ಸಂಪೂರ್ಣವಾದ ಮೇಲೆ ಸರ್ಕಾರದವರು ಉತ್ತರ ಕೊಡಬಹುದು. ಆದುದರಿಂದ, ಈ ವಿಷಯವನ್ನು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳಲು ತಾವು ಅನುಮತಿ ಕೊಡಬೇಕೆಂದು ನನ್ನ ಸವಿನಯ ವಿನಂತಿ.

MR. SPEAKER.—The discussion on the adjournment motion takes place only after consent is given by the Speaker.

†SRI S. MANIK RAO PATIL (Aurad).—With due regard, I would like to submit one point to the Chair. No doubt myself, Sri Dharam Singh and other Legislators have given a notice of calling attention the moment we came to know of a certain incident at Yadgir. Subsequent to our sending the notice, we have collected a lot of information about the way in which the police has dealt with the situation and how the death of three innocent people has taken place. Therefore the matter has assumed some sort of a serious proportion. Subsequently we thought it better to give a notice for adjournment motion. Why we have adopted this course is, as you are well aware,

under rule 63 (2) "there shall be no debate on such statement at the time it is made". That means we will be closing the doors of debate on such a serious problem. You may be aware in this House when Sri S. Nijalingappa was the Chief Minister, there was a large scale atrocities by the police officers and also Revenue Officers in the Madhugiri incident. This House allowed one entire day for debating that incident. In the Yadgir incident three innocent people have lost their lives. Hence this is a serious matter. You will have to kindly concede and give your consent for the adjournment motion instead of calling attention motion.

MR. SPEAKER.—I would like to know the opinion of the Leader of the House on this point.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರುಗಳು ಹೇಳಿದ್ದೆಲ್ಲಾ ಕೇಳಿದ್ದೇನೆ. ತಮ್ಮ ಮುಂದೆ ಕಾಲ್‌ಅಟೆನ್‌ಷನ್ನೂ ಇದೆ. ಅಡ್ಜರ್ನ್‌ಮೆಂಟ್‌ಮೋಷನ್ನೂ ಇದೆ. ಅಡ್ಜರ್ನ್‌ಮೆಂಟ್‌ಗೆ ಬೇಕಾದಂಥ ರಿಕ್ವಿಜಿಟ್ಸ್ ಕ್ವಾಲಿಫಿಕೇಷನ್ಸ್ ಅರ್ಜೆಂಟ್‌ಮ್ಯಾಟರ್, ರೀಸ್‌ಂಟ್ ಆಕರೆನ್ಸ್, ಪಬ್ಲಿಕ್ ಇಂಪಾರ್‌ಟೆನ್ಸ್ ಎಲ್ಲಾ ಇದೆ. ಒಂದೇ ಒಂದು ವಿಚಾರ ಅಧ್ಯಕ್ಷರ ಗಮನಕ್ಕೆ ತರಬೇಕಾದುದು ಏನೆಂದರೆ.

"The motion shall not deal with any matter which is under adjudication by a Court of law having jurisdiction in any part of India".

ಇದು ಒಂದು ಮುಖ್ಯವಾದುದು ಚಾರ್ಜಷೀಟ್ ಆಗಿದೆ. ಕೋರ್ಟಿನಲ್ಲಿದೆ. ೨೨-೯-೧೯೭೯ಕ್ಕೆ ಹಿಯರಿಂಗ್‌ಗೆ ಕೂಡ ಬರುವುದಿದೆ.

ಶ್ರೀ ಎಸ್. ಬಂಗಾರಪ್ಪ.—ಎಫ್.ಐ.ಆರ್. ಅಥವಾ ಚಾರ್ಜಷಿಟೋ?

ಶ್ರೀ ಡಿ. ದೇವರಾಜ ಅರಸ್.—ಎಫ್.ಐ.ಆರ್. ಅಲ್ಲ ; ಚಾರ್ಜಶೀಟ್. ಸಬ್ ಜುಡೀಸ್ ಆಗುತ್ತದೆ. ಈ ಒಂದು ಕಾರಣದಿಂದ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಕೂಡ ಮಾಡೋಣ. ನಿಲುವಳಿ ಸೂಚನೆ ಬಗ್ಗೆಯೇ ಏತಕ್ಕೆ ಹೇಳುತ್ತಿದ್ದಾರೋ ನನಗೆ ಅರ್ಥವಾಗುವುದಿಲ್ಲ.

†ಶ್ರೀ ಎಂ. ವೀರಪ್ಪಮೊಯ್ಲಿ.—ಸಭಾಧ್ಯಕ್ಷರೇ, ಈ ವಿಚಾರವನ್ನು ಅಷ್ಟು ಲಗುವಾಗಿ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ನಿಲುವಳಿ ಸೂಚನೆಯ ಉದ್ದೇಶ ಬೇರೆ, ಗಮನ ಸೆಳೆಯುವ ಸೂಚನೆ ಉದ್ದೇಶ ಬೇರೆ. ಗಮನ ಸೆಳೆಯುವ ಸೂಚನೆ ಕೊಟ್ಟಕೂಡಲೇ ಸರ್ಕಾರದ ವತಿಯಿಂದ ಏನಾದರೂ ಉತ್ತರ ಬರಬಹುದು, ಅಷ್ಟರವಟ್ಟಿಗೆ ಇಷ್ಟು ಘನತರವಾದ ವಿಚಾರವನ್ನು ಕೈಬಿಡುವುದಕ್ಕಾಗುವುದಿಲ್ಲ. ಇಡೀ ಕರ್ನಾಟಕಕ್ಕೆ ಇದರ ಒಂದು ಪರಿಣಾಮ ಉಂಟಾಗಿದೆ. ನ್ಯಾಯಾಂಗ ತನಿಖೆ ಮಾಡಿದಕೂಡಲೇ ಈ ಸದನದ ಸದಸ್ಯರುಗಳಿಗೆ ಹಾಗೂ ಕರ್ನಾಟಕದ ಜನತೆಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಹಾಗೆ ಆಗುವುದಿಲ್ಲ.

The primary object of an adjournment motion is to draw the attention of the Government to a matter of urgent public importance so as to influence the decision of the government on an urgent matter. To say that a motion or a resolution with proper notice is necessary will be too late. The object of bringing an adjourment motion is to influence the government to take a decision. Why should a judicial probe be ordered ? Judicial probe should be ordered in order to see that ಇನ್ನು ಮುಂದೆ ಈ ರೀತಿಯಾಗಿ ಪೋಲೀಸ್ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಯಾವರೀತಿ ಕಾರಣವಿಲ್ಲದೆ ಮುಗ್ಧ ಜನರ ಮೇಲೆ ದಾಳಿ ಮಾಡುವುದಾಗಲೀ, ರೈಡ್ ಮಾಡುವುದಾಗಲೀ ಕರ್ನಾಟಕದಲ್ಲಿ

ಉದ್ಭವವಾಗಬಾರದು. ಎಂದು ಈ ವಿಷಯದಲ್ಲಿ ಸರ್ಕಾರದ ಜವಾಬ್ದಾರಿ ಏನು? ಹೊಣೆ ಏನೆಂಬುದನ್ನು ತಿಳಿಯಬೇಕಾಗಿದೆ. Adjournment motion is also a motion to censure the government. By a mere judicial probe we cannot censure the government. We cannot create a situation by which all the members can speak out how the Government has lebloose Jungle law and terrorising the people in Karnataka. ನ್ಯಾಯಾಂಗ ತನಿಖೆ ಪೋಲೀಸರ ಮೇಲೆ, ಸಬ್ ಇನ್ಸ್‌ಪೆಕ್ಟರ್ ಮೇಲೆ, ಜನರ ಮೇಲೆ ನಡೆದು, ತಪ್ಪಿತಸ್ಥರ ಮೇಲೆ ಯಾವುದಾದರೂ ಹೊಣೆ ಹೊರಿಸಬಹುದು. ಆದರೆ, ಸರ್ಕಾರದ ಮೇಲೆ, ಲಾ ಅಂಡ್ ಆರ್ಡರ್ ಮೆಂಟೇನೆನ್ಸ್ ಮೇಲೆ, ಗೃಹ ಖಾತೆ ವಹಿಸಿಕೊಂಡಿರುವಂಥ ಮುಖ್ಯಮಂತ್ರಿಗಳ ಮೇಲೆ ತಪ್ಪನ್ನು ಸ್ಥಿರಪಡಿಸುವುದಕ್ಕೆ ತನ್ಮೂಲಕ ಸಾಧ್ಯವಾಗುವುದಿಲ್ಲ. ಈ ವಿಚಾರವನ್ನು ಈ ಸದನದ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿರುವುದರಿಂದ ಈ ಸದನದಲ್ಲಿ ಇದು ಚರ್ಚೆಯಾಗಲೇಬೇಕು. ಮಾನ್ಯಮುಖ್ಯಮಂತ್ರಿಗಳು ಒಂದು ವಿಷಯವನ್ನು ಹೇಳಿದರು. ಚಾರ್ಜಷೀಟ್ ಆಗಿದೆಯೆಂದು. ಚಾರ್ಜಷೀಟ್ ಸಬ್ ಇನ್ಸ್‌ಪೆಕ್ಟರಮೇಲೆ ಆಗಿದೆಯೆ ? ಇನ್ನಿತರ ಅಧಿಕಾರಿಗಳ ಮೇಲೆ ಆಗಿದೆಯೆ ? ಪೋಲೀಸ್ ಪೇದೆಗಳ ಮೇಲೆ ಆಗಿದೆಯೆ ? ಯಾರ ಮೇಲೆ ಚಾರ್ಜಷೀಟ್ ಆಗಿದೆ ? ನ್ಯಾಯಾಂಗ ತನಿಖೆ ಆಗತಕ್ಕಂಥಾದ್ದು ಸರ್ಕಾರದ ನ್ಯೂನತೆ ಮೇಲೆ; ಗೃಹಖಾತೆ ಮೇಲೆ ಅವರು ನಡೆಸಿದಂಥ ಚಟುವಟಿಕೆ ಮೇಲೆ ಆಗಬೇಕೇಹೊರತು ಡಿಸ್ಟ್ರಿಕ್ಟ್ ಜಡ್ಜಗಳಿಂದ ನ್ಯಾಯಾಂಗ ತನಿಖೆ ಮಾಡಿದರೆ ಸಾಲದು. It will only be a legal probe. We will be moving an adjournment motion which will have a large scope and by which we will be in a position to tell to the people and to the entire country that here is a government which has not maintained law and order; there is jungle law, the police are terrorising the people. To highlight those issues, this is the only forum for us. We require the protection of the Hon'ble Chair and this House to protect the innocent citizens. When exer a lathi charge is resorted to, and when firing is ordered, the innocent victims will be Harijans, the Muslims and the minorities of this country. Therefore this is not a simple issue.

(*Interruptions*)

ಕರ್ನಾಟಕದಲ್ಲಿ ಇತ್ತೀಚೆಗೆ ಪೋಲೀಸ್ ಫೈರಿಂಗ್ ಹರಿಜನರ ಮೇಲೆ ಮತ್ತು ಮುಸ್ಲೀಮರ ಮೇಲೆ ಆಗಿದೆ. ಆದ್ದರಿಂದ ಈ ವಿಚಾರವನ್ನು ನಿಲುವಳಿ ಸೂಚನೆ ರೂಪದಲ್ಲಿ ತಂದಿದ್ದೇವೆ. ಮಾನ್ಯ ಅಧ್ಯಕ್ಷರೇ ಇದು ಬಹಳ ಪ್ರಾಮುಖ್ಯವಾದ ವಿಚಾರ ; ಗಂಭೀರವಾದ ವಿಚಾರ, ತಮಗೆ ಗೊತ್ತಿದೆ ; ಹಿಂದೇ ಇದೇ ಮನೆಯಲ್ಲಿ ಮಧುಗಿರಿ ಪ್ರಕರಣದಲ್ಲಿ ಚರ್ಚೆಯಾಗಿದೆ ಭೀಕರವಾದ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ, ಬರೀ ಡಿಸ್ಟ್ರಿಕ್ಟ್ ಜಡ್ಜ್ ನೇಮಕ ಮಾಡಿ ತಮ್ಮ ಜವಾಬ್ದಾರಿ ತಪ್ಪಿಸುತ್ತೇವೆಂದು ಹೋದರೆ ಈ ದೇಶದ ಜನ, ಈ ದೇಶದ ಮುಸ್ಲಿಮರು ಮೈನಾರಿಟೀಸ್, ಹರಿಜನರು ನಿಮ್ಮನ್ನು ಕ್ಷಮಿಸಲಿಕ್ಕಿಲ್ಲ ಎಂದು ಹೇಳುತ್ತೇನೆ. ಆದುದರಿಂದ ಅಧ್ಯಕ್ಷರೆ, ಈ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಲಿಕ್ಕೆ ಬಿಡಬೇಕು. Let them not circumvent the issue. The solution for this is to hear our demand and concede the same and it is the only solution available to the people of Karnataka ಈಗ ಕಾಲ್ ಅಟೆನ್‌ಷನ್ ಏನು ಇದೆ ಅದನ್ನು ಪ್ರತ್ಯೇಕವಾಗಿಟ್ಟು, ಈ ಅಡ್ಜರ್ನ್‌ಮೋಷನ್‌ಗೆ ಪ್ರಾಮುಖ್ಯತೆ ಕೊಟ್ಟು ಅನುಮತಿ ಕೊಡಬೇಕೆಂದು ನಾನು ದೈನ್ಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

(ಗೊಂದಲ)

(ಅಧ್ಯಕ್ಷರು ರೆಕಾರ್ಡ್ ಮಾಡದಂತೆ ತಿಳಿಸಿದರು)

* * *

* * * Matter not recorded as directed by the Speaker

2-30 P.M.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಸಭಾಧ್ಯಕ್ಷರೆ, ರೂಲ್ ೫೦, ೫೧, ೫೨ರ ಪ್ರಕಾರ ನಿಲುವಳಿ ಸೂಚನೆಯನ್ನು ಕೊಟ್ಟಿರುವವರು ನಾವು. ಈ ವಿಚಾರವನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಏತಕ್ಕೆ ಪರಿವರ್ತನೆ ಮಾಡಬಾರದೆಂದು ನಾವು ಕೇಳುತ್ತಿದ್ದೇವೆ. ನಾವು ಏನಾದರೂ ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಪ್ರಯತ್ನ ಪಟ್ಟರೆ ನಾವು ಮಾತನಾಡುವುದಕ್ಕೆ ಅವಕಾಶವನ್ನೇ ಕೊಡುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ.—ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಇಲ್ಲಿ ಸಬ್ಜೆಕ್ಟ್ ಮ್ಯಾಟರ್ರೇ ಇಲ್ಲದಿರುವುದರಿಂದ ನೀವು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

SRI M. C. NANAIAH.—I am raising a Point of Order. I should not be prevented from raising a Point of Order.

ಶ್ರೀ ಸಿ. ಎಂ, ಇಬ್ರಾಹಿಂ.—ನಾನು ಮೊದಲು ಪಾಯಿಂಟ್ ಆಫ್ ಆರ್ಡರ್ ಎತ್ತಿದಾಗ ನನಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಆದರೆ ಈಗ ಅವರಿಗೆ ಹೇಗೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಲು ಅವಕಾಶ ಕೊಡುತ್ತೀರಿ ?

(೪-೬ ಜನ ಸದಸ್ಯರು ಒಟ್ಟಿಗೇ ನಿಂತು ಮಾತನಾಡಲು ಪ್ರಾರಂಭಿಸಿದರು)
(ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ರಿಕಾರ್ಡ್ ಮಾಡಲಿಲ್ಲ)

* * *

ಮಾನ್ಯ ಅಧ್ಯಕ್ಷರು.—ನಾನು ಯಾವ ಸದಸ್ಯರ ಹೆಸರನ್ನು ಕೂಗುತ್ತೇನೆಯೋ ಆ ಸದಸ್ಯರ ಮಾತ್ರ ಮಾತನಾಡುವಂತಿದ್ದರೆ ಅವಕಾಶ ಕೊಡುತ್ತೇನೆ. ಇಲ್ಲದೇ ಹೋದರೆ ಯಾರಿಗೂ ಅವಕಾಶವನೇ ಕೊಡುವುದಿಲ್ಲ. ಯಾರಾದರೂ ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಅದರಲ್ಲಿ ಪಾಯಿಂಟ್ ಆಫ್ ಆರ್ಡರ್ ಇದೆಯೇ ಇಲ್ಲವೇ ಎಂಬುದನ್ನು ನಾನು ಪರಿಶೀಲಿಸಬೇಕಾಗುತ್ತದೆ. ಆದರೆ ಹೆಚ್ಚು ಜನ ನಿಂತುಕೊಂಡು ಕೂಗಾಡಲು ಪ್ರಾರಂಭಿಸಿದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ.

(Interruptions)

MR. SPEAKER.—Don't record. When the conduct of some members is not in order, how can I allow other members to speak ? I can hear at a time only one Point of Order. I will hear Sri Nanaiah

SRI M C. NANAIAH.—Some four members have already given notice to the Speaker under Rule 63 drawing attention f the Government to a particular incident that has taken place After Sri Prabhakar Telkar and others gave notice the Hon'ble Speaker gave consent and listed the same in the agenda for discussoin. My Point of Order is having listed a particular subject which has been given notice of by the members, should they be permitted to draw attention of the Government to that particular issue that is listed ? When it is already in the agenda, should they be permitted to convert it into an adjournment motion ? This is not in accordance with the Rules of Procedures. That is my Point of Order.

---

* * * Matter not recorded as ordered by the Speaker

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ನಾನಯ್ಯನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ದಿನದ ಕಾರ್ಯಕ್ರಮ ಪಟ್ಟಿಯಲ್ಲಿ ಈ ವಿಷಯವನ್ನು ತಂದಮೇಲೆ ಅದನ್ನು ಕೇಳುವ ಹಕ್ಕಿದೆ, ಬೇರೆಯದನ್ನು ಕೇಳುವ ಹಕ್ಕಿಲ್ಲ ಎಂಬುದು ನಿಮ್ಮ ಅಭಿಪ್ರಾಯ. ನಾನಾದರೂ ಮಾನ್ಯ ನಾನಯ್ಯನವರಿಗೆ ಹಾಗೂ ಮತ್ತಿತರರಿಗೆ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ ರೂಲ್ಸ್ ಪ್ರಕಾರ ಮಾನ್ಯ ಸದಸ್ಯರ ಹಕ್ಕನ್ನು ಮೊಟಕು ಮಾಡಲು ಸಾಧ್ಯವಿಲ್ಲ, ಮತ್ತು ಅದು ನಮ್ಮ ಉದ್ದೇಶವೂ ಕೂಡ ಅಲ್ಲ. ಸದಸ್ಯರ ಹಕ್ಕನ್ನು ಮೊಟಕು ಮಾಡಬೇಕು ಎನ್ನುವ ಉದ್ದೇಶವಿಲ್ಲ. ಗಮನ ಸೆಳೆಯುವ ಸೂಚನೆಯನ್ನು ಕೊಟ್ಟ ಮೇಲೆ ಅದನ್ನು ಕೇಳತಕ್ಕಂಥ ಹಕ್ಕು ಅವರಿಗೆ ಇದೆ ಹಾಗೆಯೇ ನಿಲುವಳಿ ಸೂಚನೆಯನ್ನು ತರತಕ್ಕಂಥ ಹಕ್ಕು ಸದಸ್ಯರಿಗೆ ಇದೆ. ಮಾನ್ಯ ಸದಸ್ಯರಾದ ಶ್ರೀ ನಾನಯ್ಯನವರಿಗೆ ಆ ಹಕ್ಕು ಇದೆ ಎಂದು ನಾನು ಹೇಳುತ್ತೇನೆಯೇ ಹೊರತು ಅದನ್ನು ಮೊಟಕು ಮಾಡುವುದಕ್ಕೆ ಯಾರಿಗೂ ಇಲ್ಲವೆಂದು ಹೇಳುತ್ತೇನೆ. ಆದ್ದರಿಂದ ಈವತ್ತು ಯಾರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿರುತ್ತಾರೆ, ಅದನ್ನು ನಿಲುವಳಿ ಸೂಚನೆಯಾಗಿ ಈ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವಾಗ ಅವರೂ ಕೂಡ ಇದರಲ್ಲಿ ಭಾಗವಹಿಸಬಹುದು. ಹಿಡಿನೇ ನಿಯಮದ ಪ್ರಕಾರ ಶ್ರೀ ಪ್ರಭಾಕರ್ ತೆಲ್ಕರ್‌ರವರೂ ಏನು ಇದ್ದಾರೆ ಅವರು ಸಂಪೂರ್ಣವಾಗಿ ವಿವರಗಳನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಈ ವಿಚಾರವನ್ನು ಅವರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಅದರ ಜೊತೆಗೆ ಈ ಒಂದು ವರದಿಯ ಪ್ರಕಾರ ಕಾಲಿಂಗ್ ಅಟೆಂಕ್ಷನ್ ಮೋಷನ್ ಎಂದು ತೆಗೆದುಕೊಂಡುಬಿಟ್ಟರೆ ನೀವು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂಬುದು ಅಭಿಪ್ರಾಯ. ಅದನ್ನು ನಾನು ಒಪ್ಪುತ್ತೇನೆ. ಸದಸ್ಯರ ಹಕ್ಕನ್ನು ಮೊಟಕು ಮಾಡಬೇಕೆಂಬ ಉದ್ದೇಶದಿಂದ ನಾನು ಹೇಳುತ್ತಿಲ್ಲ. ನಿಲುವಳಿ ಸೂಚನೆಯ ಪರ್‌ಪಸ್ ಏನು? ಬರೇ ಸ್ಟೇಟ್‌ಮೆಂಟ್ ಕೊಟ್ಟುಬಿಟ್ಟರೆ ಮಾನ್ಯ ಸದಸ್ಯರು ಅದನ್ನು ಕೇಳಿ ಕುಳಿತುಕೊಳ್ಳಬೇಕೆ. ಮಾನ್ಯ ಮುಖ್ಯ ಮಂತ್ರಿಗಳು ಚಾರ್ಜ್ ಶೀಟ್ ಹಾಕಿರುತ್ತಾರೆಂದು ಹೇಳಿದ್ದಾರೆ. ಅಷ್ಟಕ್ಕೆ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕೆ. ಕಾಲಿಂಗ್ ಅಟೆಂಷನ್‌ಗೆ ಯಾವ ರೀತಿ ಹೇಳಿಕೆಯನ್ನು ಸರ್ಕಾರದವರು ಸಿದ್ಧ ಮಾಡಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಆದರೆ ಜ್ಯುಡಿಷಿಯಲ್ ಎನ್‌ಕ್ವಯರಿಗೆ ಒಪ್ಪಿಸಿದ್ದೇವೆ ಎಂದು ಹೇಳಿದರು. ಹಿಂದೆ ಜುಡಿಷಿಯಲ್ ಎನ್‌ಕ್ವಯರಿ ಯಾವ ರೀತಿ ನಡೆಯಿತು ಎಂಬುದು ನಮಗೆ ಗೊತ್ತಿದೆ. ಚಾರ್ಜ್ ಷೀಟ್ ಯಾರ ಮೇಲೆ ಹಾಕಿದ್ದಾರೆ, ಅಪರಾಧಿ ಯಾರು ಎನ್ನುವ ವಿವರಗಳೆಲ್ಲ ನಮಗೆ ಬೇಕಾಗಿದೆ.

SRI D. DEVARAJ URS.—Adjournment Motion pins it down to a particular matter. You cannot go on generalising all those things.

ಶ್ರೀ ಎಸ್. ಬಂಗಾರಪ್ಪ.—ಅದೇ ವಿಷಯವನ್ನು ಹೇಳುತ್ತಿದ್ದೇನೆ. ರಾಜ್ಯದಲ್ಲಿ ಒಂದೇ ಒಂದು ಇನ್‌ಸಿಡೆಂಟ್‌ಗೆ ಮಾತ್ರ ಈ ಚರ್ಚೆ ಸೀಮಿತಗೊಳ್ಳಬೇಕೆ ? ಯಾದಗಿರಿ ಪ್ರಕರಣದ ಬಗ್ಗೆ ವಿಶ್ಲೇಷಣೆ ಮಾಡತಕ್ಕಂಥ ಕಾಲದಲ್ಲಿ ನಾವು ಕೂಡ ಚಿಂತನೆ ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರಾದಂಥ ನಾನಯ್ಯನವರು ಹೇಳಿದಂಥ ಮಾತುಗಳು ಸರಿಯಾದುದಲ್ಲ. ಈ ಚರ್ಚೆಯಲ್ಲಿ ನಾವು ಕೂಡ ಭಾಗವಹಿಸಬೇಕು, ಅವರೂ ಕೂಡ ಭಾಗವಹಿಸಬೇಕು. ಒಂದು ವಿಷಯ ಮಾನ್ಯ ಮುಖ್ಯ ಮಂತ್ರಿಗಳು ಚಾರ್ಜ್ ಷೀಟ್ ಹಾಕಿರುತ್ತಾರೆಂದು ಹೇಳಿರುತ್ತಾರೆ, ಯಾರ ಮೇಲೆ ಚಾರ್ಜ್‌ಷೀಟ್ ಹಾಕಿರುತ್ತಾರೆ ಎಂಬ ಬಗ್ಗೆ ನಿಲುವಳಿ ಸೂಚನೆಯಲ್ಲಿ ಆ ಕಡೆ ಇರತಕ್ಕಂಥ ಸದಸ್ಯರು ಮತ್ತು ಈ ಕಡೆ ಇರತಕ್ಕಂಥ ಸದಸ್ಯರು ಭಾಗವಹಿಸಿದರೆ ಹೆಚ್ಚಿನ ಬೆಳಕನ್ನು ಕೊಡಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

SRI D. DEVARAJ URS.—He is taking it for granted that it is admitted,

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮಾತನ್ನು ಅರ್ಥ ಮಾಡಿಕೊಂಡೆ. ಮಾನ್ಯ ಅಧ್ಯಕ್ಷರೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ವಿರೋಧಪಕ್ಷದ ನಾಯಕರಿಗೆ ಇದರ ಬಗ್ಗೆ ವಿವರಗಳನ್ನು ಕೊಡಬೇಕೆಂದು ಹೇಳುತ್ತೇನೆ. ಯಾದಗಿರಿ ಪ್ರಕರಣದ ಬಗ್ಗೆ ಚರ್ಚೆ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ದಯವಿಟ್ಟು ಇದು ಹೇಗೆ ಕೋರ್ಟಿನ ವ್ಯಾಪ್ತಿಯಲ್ಲಿ ಬರುತ್ತದೆ ಎಂಬ ವಿಚಾರದ ಬಗ್ಗೆ ತಕ್ಷಣ ತಮ್ಮ ಅಭಿಪ್ರಾಯವನ್ನು ಕೊಡುವುದಿದ್ದರೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪುನಃ ಪುನಃ ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ತಾವು ರೂಲಿಂಗ್‌ನ್ನು ಕೊಡಬೇಕು, ವಾಸ್ತವವಾಗಿ ಯಾವ ಒಂದು ವಿಷಯ ಅಜೆಂಡಾದಲ್ಲಿ ಇದೆ, ಅದನ್ನು ಬಿಟ್ಟು ಬೇರೆ ವಿಷಯವನ್ನು ತೆಗೆದು ಕೊಳ್ಳಬಾರದು ಎಂಬ ವಿಷಯವನ್ನು ನಾನು ಒಪ್ಪುತ್ತೇನೆ. ರೂಲ್ ನಂ. ೫೦-೫೧-೫೨ ಏನು ಇದೆ ಅದರ ಹಿಂದೆ ಸಂಪೂರ್ಣವಾಗಿ ಚರ್ಚೆಗೆ ಅವಕಾಶವಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಯಾದಗಿರಿ ಪ್ರಕರಣದ ಬಗ್ಗೆ ಚಾರ್ಜ್‌ಷೀಟ್ ಮಾಡಿದ್ದಾರೆಂದು ಹೇಳಿದ್ದಾರೆ. ಯಾರ ಮೇಲೆ ಚಾರ್ಜ್‌ಷೀಟ್ ಹಾಕಿ ರುತ್ತಾರೆ, ಯಾರು ಅಪರಾಧಿಗಳು ಎಂಬುದರ ಬಗ್ಗೆ ವಿವರವಾದ ವಿವರಣೆಗಳು ಬೇಕು.

ಶ್ರೀ ಕೆ. ಎಚ್, ರಂಗನಾಥ್.—ರೂಲ್ ನಂ. ೫೨ ಸಬ್ ಕ್ಲಾಸ್ ೭ರಲ್ಲಿ ಇದೆ ದಯವಿಟ್ಟು ಅದನ್ನು ಓದಿ.

ಶ್ರೀ ಭೀಮಣ್ಣ ಖಂಡ್ರೆ.—ಅದನ್ನು ನಾನು ಓದಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಅದು ಕೋರ್ಟಿನಲ್ಲಿ ಇರುವುದರಿಂದ, ಸದಸ್ಯರು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗಬಾರದು.

ಶ್ರೀ ಭೀಮಣ್ಣ ಖಂಡ್ರೆ:—ಅದು ಕೋರ್ಟಿನಲ್ಲಿ ಇದ್ದ ಮಾತ್ರಕ್ಕೆ ಸದಸ್ಯರು ಬಾಯಿ ಬಂದ್ ಮಾಡಿ ಕೊಳ್ಳಬೇಕೆ. ಅದು ಚರ್ಚೆಗೆ ಬರುವಂತೆ ಇಲ್ಲವೇ ಎಂದು ಕೇಳುತ್ತೇನೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಡೆ-ಲೈಟ್‌ನಲ್ಲಿ ಒಬ್ಬ ಹುಡುಗಿಗೆ ಮಾನಭಂಗ ಮಾಡಿರುವ ಪ್ರಕರಣವಾಗಿರುತ್ತದೆ. ಅದರ ಬಗ್ಗೆ ಚರ್ಚೆ ಮಾಡಲು......

ಶ್ರೀ ಕೆ ಎಚ್. ರಂಗನಾಥ್:—ಎವಿಡೆನ್ಸ್ ಇಲ್ಲದೇ, ವಿಷಯಗಳನ್ನು ತಿಳಿದುಕೊಳ್ಳದೇ, ಅದನ್ನು ಪ್ರಸಾಪ ಮಾಡುವುದು ಸರಿಯಲ್ಲ. ಈ ಸದನದಲ್ಲಿ ಯಾವುದನ್ನು ಚರ್ಚೆ ಯಾಡಲು ಅವಕಾಶವಿದೆ ಅದನ್ನು ಮಾತ್ರ ಮಾತ್ರ ಮಾಡಬೇಕು. ಯಾವುದು ಚರ್ಚೆ ಮಾಡುವುದಕ್ಕೆ ಅವಕಾಶವಿರಲಿಲ್ಲ ಅದನ್ನು ಬಿಟ್ಟು ಬಿಡಬೇಕು. These are rules framed bythis House

ಶ್ರೀ ಭೀಮಣ್ಣ ಖಂಡ್ರೆ;—I know we should follow. ಯಾರನ್ನು ರಕ್ಷಣೆ ಮಾಡಬೇಕೋ ಅವರಿಗೆ ರಕ್ಷಣೆ ಸಿಗುತ್ತಿಲ್ಲ, ಲಾ-ಅಂಡ್ ಆರ್ಡರ್ ಸಂಪೂರ್ಣವಾಗಿ ಹೋಗಿಬಿಟ್ಟಿದೆ. ಪೋಲೀಸ್‌ನವರು ಲಾ-ಅಂಡ್ ಆರ್ಡರನ್ನು ಕೆಡಿಸಿದ್ದಾರೆ. ಈ ಒಂದು ಮುಖ್ಯವಾದ ವಿಷಯವನ್ನು ಈ ಸದನದಲ್ಲಿ ಚರ್ಚೆಗೆ ತರಬೇಕಾದ ಅವಶ್ಯಕತೆ ಇರುವಾಗ ಸರ್ಕಾರದವರು ಕಣ್ಣುಮುಚ್ಚಿಕೊಂಡು ಸುಮ್ಮನೆ ಕುಳಿತುಕೊಳ್ಳು ವುದು ಸರಿಯಲ್ಲ,

Rule.No. 50,51,52,53 covers 63 also.

† ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ):— ಮಾನ್ಯ ಸದಸ್ಯರಾದ ನಾನಯ್ಯನವರು ಏನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ ಅದರ ಮೇಲೆ ತಾವು ದಯವಿಟ್ಟು ರೂಲಿಂಗ್ ಕೊಡಿ. ಸಭೆಯ ಮುಂದೇ ಅಜೆಂಡಾ ಪ್ರಕಾರ ಕಾಲಿಂಗ್ ಅಟೆನ್‌ಷನ್ ನೋಟಿಸ್ ಇದೆ. ೨೪ ಜನ ಮಾನ್ಯ ಸದಸ್ಯರು ಸಹಿಮಾಡಿ ಅಡ್ಜರ್ನ್‌ಮೆಂಟ್ ಮೋಷನ್‌ನ್ನೂ ಕಳುಹಿಸಿ ಕೊಟ್ಟಿದ್ದಾರೆ. ಶ್ರೀ ಪ್ರಭಾಕರ್ ತೇಲ್ಕರ್ ಅವರು ಕೊಟ್ಟಿರತಕ್ಕ ಗಮನ ಸೆಳೆಯುವ ಸೂಚನೆಯನ್ನು ತಾವು ಪರಿಶೀಲನೆ ಮಾಡಿ ಅಜೆಂಡಾದಲ್ಲಿ ಸೇರಿಸಿ ರುವುದಾಗಿ ಮಾನ್ಯ ಸದಸ್ಯರಾದ ಒಡೆಯರಾಜ್ ಅವರು ಪ್ರಸ್ತಾಪ ಮಾಡಿದಾಗ ಅಪ್ಪಣೆ ಕೊಡಿಸಿದ್ದೀರಿ ಈಗ ಸಭೆಯ ಮುಂದಿರುವ ಪ್ರಶ್ನೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕೇ ಅಥವಾ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೇ ಎಂಬುದು. ನಿಲುವಳಿ ಸೂಚನೆಯನ್ನು ಮಂಡಿಸುವ ಹಕ್ಕು ಮಾನ್ಯ ಸದಸ್ಯರಿಗಿದೆ. ಅದರ ಅಡ್ಮಿಸಿಬಲಿಟಿ ಬಗ್ಗೆ ಏನು ಹೇಳುತ್ತಾರೆಂಬುದನ್ನು ಕೇಳಬೇಕೆಂದು ಅವರು ಹೇಳುತ್ತಿದ್ದಾರೆ. ಸಾಮಾನ್ಯವಾಗಿ ಗಮನ ಸೆಳೆಯುವ ಸೂಚನೆಗಿಂತ ಮೊದಲೇ ನಿಲುವಳಿ ಸೂಚನೆ ಯನ್ನು ಯಾವಾಗಲೂ ತೆಗೆದುಕೊಳ್ಳಬೇಕಾಗುತ್ತದೆ. ಪ್ರಶ್ನೋತ್ತರ ಕಾಲವಾದ ನಂತರ ನಿಯಮದ ಪ್ರಕಾರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು. ಅದಕ್ಕೆ ತಾವು ಅವಕಾಶ ಕೊಟ್ಟಿದ್ದ ನಿಲುವಳಿ ಸೂಚನೆಯ ಅಡ್ಮಿಸಿಬಲಿಟಿ ಬಗ್ಗೆ ಮಾನ್ಯ ಸದಸ್ಯರು ತಮ್ಮ ಹೇಳಿಕೆಗಳನ್ನು ಕೊಟ್ಟಿದ್ದಿದ್ದರೆ ಇಷ್ಟು ಹೊತ್ತಿಗೆ ಮುಗಿದು ಹೋಗುತ್ತಿತ್ತು ಆದ್ದರಿಂದ ತಾವು ಮಾನ್ಯ ಸದಸ್ಯರಿಗೆ ಅಡ್ಮಿಸಿಬಲಿಟಿ ಬಗ್ಗೆ ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡುವುದಾದರೆ ಈ ಕಡೆ ಸದಸ್ಯರು ಮತ್ತು

ಆ ಕಡೆ ಸದಸ್ಯರು ಇಬ್ಬರಿಗೂ ಕೊಡಿ. ಎಲ್ಲರೂ ಹೇಳಲಿ. ಇದರಿಂದ ತಮಗೆ ಕನ್‌ವಿನ್ಸ್ ಆದರೆ ಅದರ ಪ್ರಾಮುಖ್ಯತೆ ಇದೆ ಎಂಬುದು ತಮಗೆ ಮನವರಿಕೆಯಾದರೆ ಕಾರ್ಯಕ್ರಮದ ಪಟ್ಟಿಯನ್ನು ಬರೆದಿಟ್ಟು ನಿಲುವಳಿ ಸೂಚನೆಯನ್ನು ಬೇಕಾದಕ್ಕೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು:—ತಮ್ಮ ಪಾಯಿಂಟ್ ಆಫ್ ಆರ್ಡರ್ ಯಾವುದು?

ಶ್ರೀ ಮಳ್ಳೂರು ಆನಂದರಾವ್:—ಮಾನ್ಯ ನಾನಯ್ಯನವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ತಮ್ಮ ರೂಲಿಂಗ್ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ತಾವು ಶ್ರೀಮಾನ್ ಪ್ರಭಾಕರ್ ತೇಲ್ಕರ್ ಅವರು ತಂದಿರುವ ಗಮನ ಸೆಳೆಯುವ ಸೂಚನೆಗೆ ಅವಕಾಶ ಮಾಡಿಕೊಡುತ್ತೀರೋ ಅಥವಾ ನಿಲುವಳಿ ಸೂಚನೆಗೆ ಅವಕಾಶ ಮಾಡಿ ಕೊಡುತ್ತೀರೋಎಂದು ಕೇಳುತ್ತಿದ್ದೇನೆ.

† ಶ್ರೀ ಎಸ್.ಆರ್. ಬೊಮ್ಮಾಯಿ:—ಮಾನ್ಯ ಅಧ್ಯಕ್ಷರೇ, ಈ ಮನೆಯ ಕಾರ್ಯಕಲಾಪಗಳನ್ನು ನಡೆಸುವಾಗ ಈ ಮನೆಯಲ್ಲಿ ಹಿಂದೆ ಅನೇಕ ಸಲ ನಡೆದಂಥ ನಡವಳಿಕೆಗಳನ್ನು ನೆನಪಿಗೆ ತಂದುಕೊಳ್ಳ ಬೇಕಾಗುತ್ತದೆ, ಶ್ರೀಮಾನ್ ನಾನಯ್ಯನವರು ಎತ್ತಿರತಕ್ಕ ಪಾಯಿಂಟ್ ಆಫ್ ಆರ್ಡರ್ ವ್ಯಾಲಿಡ್ ಆಗಿಲ್ಲ. ಕಾರಣ ಇಷ್ಟೆ. When there is an adjournment motion it takes priority over all other matters listed in the agenda. ಇವೊತ್ತು ಸಭೆಯ ಮುಂದೆ ಗಮನ ಸೆಳೆಯುವ ಸೂಚನೆ ಇದೆ, ಮತ್ತು ನಿಲುವಳಿ ಸೂಚನೆ ಇದೆ. ನಿಲುವಳಿ ಸೂಚನೆಯನ್ನು ತಂದಾಗ ಉಳಿದ ವಿಷಯಗಳನ್ನು ತೆಗೆದು ಕೊಳ್ಳುವುದಕ್ಕಿಂತ ಮೊದಲೇ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ನಿಲುವಳಿ ಸೂಚನೆಯ ಅಡ್ಮಿಸಬಿಲಿಟಿ ಬಗ್ಗೆ ಸಂಕ್ಷಿಪ್ತವಾಗಿ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಡತಕ್ಕ ಹಕ್ಕು ಸದಸ್ಯರಿಗಿದೆ. ವಿವರವನ್ನು ಹೇಳುವ ಹಕ್ಕಿಲ್ಲ ಆದ್ದರಿಂದ ಮಾನ್ಯ ನಾನಯ್ಯನವರು ಎತ್ತಿರತಕ್ಕ ಕ್ರಿಯಾ ಲೋಪದಲ್ಲಿ ಹುರುಳಿಲ್ಲ. ಆದ್ದರಿಂದ ನಿಲುವಳಿ ಸೂಚನೆಯ ಅಡ್ಮಿಸಿಬಿಲಿಟಿ ಬಗ್ಗೆ ಹೇಳುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕಾಗುತ್ತದೆ. ಈ ವಿಚಾರದಲ್ಲಿ ನಾನು ಹೆಚ್ಚು ವಿವರಗಳನ್ನು ಹೇಳದೆ ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ. ಸೆಪ್ಟೆಂಬರ್ ೮ನೇ ತಾರೀಖಿನ ದಿವಸ ಒಬ್ಬ ಪೋಲೀಸ್ ಅಧಿಕಾರಿ ಒಂದು ಹೆಣ್ಣುಮಗಳ ಮಾನಭಂಗ ಮಾಡುವುದಕ್ಕೆ ಪ್ರಯತ್ನ ಪಟ್ಟದ್ದರಿಂದ ಈ ಘಟನೆ ನಡೆದಿದೆ ಇದು ಬಹಳ ಮಹತ್ವವಾದ ಮತ್ತು ಗಹನವಾದ ವಿಚಾರವಾದ್ದರಿಂದ ಈ ಬಗ್ಗೆ ಕೆಲವು ವಿಷಯ ಹೇಳುತ್ತಿದ್ದೇನೆ. ಶ್ರೀಮಾನ್ ಸದಾಶಿವರೆಡ್ಡಿ ಎಂಬ ಜನತಾಪಕ್ಷದ ಅಧ್ಯಕ್ಷರು ಈ ಗಲಾಟೆ ನಡೆದಾಗ ಪೋಲೀಸರಿಗೆ ಫೋನ್ ಮಾಡಿ ತಿಳಿಸಿದ್ದಾರೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಒಂದು ಹೆಣ್ಣುಮಗಳ ಮಾನಭಂಗ ಮಾಡುವುದಕ್ಕೆ ಹೋದಾಗ ಜನ ಅವನನ್ನು ಹಿಡಿದರು. ಆಗ ಸದಾಶಿವ ರೆಡ್ಡಿಯವರು ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿ ಸಬ್‌ಇನ್‌ಸ್ಪೆಕ್ಟರಿಗೆ ತಿಳಿಸಿದಾಗ ಅವರು ಬರದೇ ಇದ್ದಾಗ ಜನ ಸಿಟ್ಟಿಗೆದ್ದು ಬಡಿಯುವಂಥ ಪ್ರಸಂಗ ಬಂತು. ನಂತರ ಸ್ಟೇಷನ್‌ಗೆ ಅವನನ್ನು ಕರೆದುಕೊಂಡು ಹೋಗಿ ರಕ್ಷಣೆ ಕೊಟ್ಟಿದ್ದಾರೆ. ನಂತರ ಅಲ್ಲಿ ವಿಚಿತ್ರವಾದ ಸಂಗತಿ ನಡೆದಿದೆ. ಮಾನ್ಯ ಮುಖ್ಯಮಂತ್ರಿಯವರು ಇದನ್ನು ಸ್ವಲ್ಪ ಗಮನಿಸಬೇಕು ಇದಾದನಂತರ ೧೦ನೇ ತಾರೀಖು ಅಲ್ಲಿ ಒಂದು ಶಾಂತಿ ಸಮಿತಿ ಗಟಿತವಾಗಿದೆ. ಅದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ. ಅದಕ್ಕೆ ಸದಾಶಿವರೆಡ್ಡಿಯವರೂ ಒಬ್ಬ ಸದಸ್ಯರಾಗಿದ್ದಾರೆ.

SRI K.H. RANGANATH.—Sir the hon-Member Sri Bommai is going deep into the matter......

ಶ್ರೀ ಎಸ್.ಆರ್. ಬೊಮ್ಮಾಯಿ:—ಸ್ವಾಮಿ, ಯಾರು ರಕ್ಷಣೆ ಕೊಟ್ಟರು...

ಶ್ರೀ ಮಲ್ಲಿಕಾರ್ಜುನ ಖರ್ಗೆ:—ಈಗ ಅವರು ಎಲ್ಲ ವಿವರಗಳನ್ನು ಹೇಳುವುದಕ್ಕೆ...

(*Interruptions*)

ಅಧ್ಯಕ್ಷರು:—ಹೀಗೆ ಎಲ್ಲರೂ ಎದ್ದು ಮಾತನಾಡಿದರೆಹೇಗೇ? ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಎಂ. ಇಬ್ರಾಹಿಂ:—ನಾವು ಬಾಯಿ ಮುಚ್ಚಿಕೊಂಡು ಅವರು ಹೇಳುವುದನ್ನು ಕೇಳಿಕೊಂಡು ಹೋಗುವುದಕ್ಕಾ ಬಂದಿರೋದು ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ನಿಂತುಕೊಂಡು ಮಾತನಾಡುವಾಗ ಆ ಕಡೆ ಸದಸ್ಯರು ಏತಕ್ಕೆ ಎದ್ದುನಿಂತು ಮಾತನಾಡುತ್ತಾರೆ. ಇವರು ಈಲ್ಡ್ ಆಗಿದ್ದಾರೆಯೋ ಮಾತನಾಡುತ್ತಿರುವಾಗ ಮಧ್ಯೆ ಮಧ್ಯೆ ಎದ್ದು ಮಾತನಾಡತಕ್ಕದ್ದು ಸರಿಯಾದ ಸಂಪ್ರದಾಯವೇ ಇದೇನು

ಪಾರ್ಟಿ ಮೀಟಿಂಗ್ ಎಂದು ತಿಳಿದುಕೊಂಡಿದ್ದಾರಾ ಈ ಕಡೆ ಸದಸ್ಯರು ಮಾತನಾಡುವಾಗಲೆಲ್ಲಾ ಆ ಕಡೆಯಿಂದ ಸದಸ್ಯರು ಎದ್ದು ಎದ್ದು ಮಾತನಾಡುತ್ತಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡ ಬೇಕಾದರೆ ಕುರ್ಚಿ ಮೇಲೆ ಕುಳಿತುಕೊಂಡೇ ಮಾತನಾಡುತ್ತಾರೆ. ಏನಿದು?

MR. SPEAKER.—If that is so why have you not raised a point of order

SRI C.M. IBRAHIM:—It is for the Chair to conduct the business in an orderly manner.

ಅಧ್ಯಕ್ಷರು:—ನೀವೂ ಎದ್ದು ಏತಕ್ಕೆ ಮಾತನಾಡುತ್ತಿದ್ದೀರಿ

ಶ್ರೀ ಸಿ.ಎಂ. ಇಬ್ರಾಹಿಂ:—ಹಿರಿಯ ಸದಸ್ಯರಾದ ಮಾನ್ಯ ಬೊಮ್ಮಾಯಿ ಅವರು ಮಾತನಾಡುವಾಗ ಅವರು ಎದ್ದು ನಿಂತು ಮಾತನಾಡುವುದು ಸರಿಯೇ

(*Interruptions*)

SRI K.H. RANGANATH:—I need not learn any lesson from the hon Member Sri C.M. Ibrahim.

SRI C.M. IBRAHIM:—I am not shouting.

(*Interruptions*)

ಅಧ್ಯಕ್ಷರು:—ಜನ ಎಲ್ಲಾ ನೋಡುತ್ತಿದ್ದಾರೆ, ಏನಿದು ನಿಮ್ಮ ನಡವಳಿಕೆ?

ಶ್ರೀ ಸಿ ಎಂ. ಇಬ್ರಾಹಿಂ:– ಜನ ನಮ್ಮನ್ನೂ ನೋಡುತಿದ್ದಾರೆ, ನಿಮ್ಮನ್ನೂ ನೋಡುತ್ತಿದ್ದಾರೆ, ಸಭೆಯನ್ನು ನೋಡುತ್ತಿದ್ದಾರೆ.

ಅಧ್ಯಕ್ಷರು:—ತಾವು ಕೈ—ಮೈ ಚಲನೆ ಮಾಡಿಕೊಂಡು ಆಡುವ ಮಾತನ್ನೂ ನೋಡಿದರೆ ಯಾರಿಗಾದರೂ ಭಯವಾಗುತ್ತದೆ. ಇದು ಸರಿಯಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ:—ನಾನೇನು ಕೈ ಕಟ್ಟಿಕೊಂಡು ಬರಬೇಕೇ ಇದೇನು ಜೈಲೋ, ವಿಧಾನ ಸಭೆಯೋ? ಒಬ್ಬ ಸದಸ್ಯರು ನಿಂತಿರಬೇಕಾದರೆ ಇನ್ನೊಬ್ಬ ಸದಸ್ಯರು ಎದ್ದು ಮಾತನಾಡಬಾರದು. ಒಂದು ವೇಳೆ ಮಾತನಾಡಲೇ ಬೇಕಾದರೆ ಇವರನ್ನು ಈಲ್ಡ್ ಆಗಿ ಎಂದು ಕೇಳಬೇಕಾಗಿತ್ತು. ಈಲ್ಡ್ ಆಗದೇ ಇರುವಾಗ ಎದ್ದು ಮಾತನಾಡಿದರೆ ಅದು ಸರಿಯಾದ ಸಂಪ್ರದಾಯವಾಗುವುದಿಲ್ಲ.

ಶ್ರೀ ಡಿ.ಟಿ. ರಾಮು:—ನೀವು ಮಾಡುವುದು ಮಾತ್ರ ಗೊತ್ತಾಗುವುದಿಲ್ಲ. ನಮಗೆ ಹೇಳುತ್ತೀರಿ. ನೀವು ಮಾಡುವುದನ್ನು ನಾವು ನೋಡಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:—ಮಾನ್ಯ ಸದಸ್ಯರಾದ ಇಬ್ರಾಹಿಂ ಅವರು ನೀತಿಭೋದನೆ ಮಾಡುತ್ತಿದ್ದಾರೆ. ಅವರ ನಾಯಕರು ಎದ್ದು ನಿಂತಿರುವಾಗ ಇವರು ಏತಕ್ಕೆ ಎದ್ದು ನಿಂತಿದ್ದಾರೆ

(ಆ ಸಮಯದಲ್ಲಿ ಹಲವಾರು ಸದಸ್ಯರು ಎದ್ದು ಒಂದೇ ಸಮನೆ ಮಾತನಾಡ ತೊಡಗಿದರು.

ಶ್ರೀ ಬಿ.ವಿ. ಕಕ್ಕಿಲಾಯ:—ಸಭೆಯಲ್ಲಿ ಏನು ನಡೆಯುತ್ತದೆ ಎಂಬುದೇ ಗೊತ್ತಾಗುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಈ ರೀತಿ ಮಾಡಿದರೆ ನಾವು ಕಾನೂನು ಪ್ರಕಾರ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಯಾವುದೇ ಸದಸ್ಯರಾಗಲೀ ಅವರು threaten ಮಾಡಿ ಹೆದರಿಸಬಹುದು ಎಂದು ಭಾವಿಸಿಕೊಳ್ಳಬಾರದು. Hon-Member may look very strong and shout well also. That is not going to help to run the pooceedings of this House. ನಾನು ಏನು ಹೇಳುತ್ತಿದ್ದೇನೆಂದರೆ ಏನು ಘಟನೆ ನಡೆದಿದೆಯೆಂಬುದು ಎಲ್ಲರಿಗೂ ಗೊತ್ತಿದೆ.

3 - 00 P. M.

ಮಾನ್ಯ ಸದಸ್ಯರು ಯಾರೇ ಇರಲಿ ಅವರು ಬೇಕಾದ್ದು ಇರಲಿ, ಕಾನೂನಿಗೆ ಅನುಗುಣವಾಗಿ ನಡೆದುಕೊಂಡು ಹೋಗಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಬಹಳ ಕಷ್ಟ ಅಂತ ಅಂದರೆ ಅದರ ಬಗ್ಗೆ ಯಾವ ಭಾಷೆಯನ್ನು ಬಳಸಬೇಕೆಂದು ನನಗೆ ಗೊತ್ತಾಗುವುದಿಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಯಾವುದನ್ನಾದರೂ ಬಳಸಿ.

ಶ್ರೀ ಕೆ. ಎಚ್. ರಂಗನಾಥ್ —ಅದು ಹೊರಗಡೆ ಇಲ್ಲಿ ಅಲ್ಲ.

(ನಾಲ್ಕಾರು ಜನ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಕೆ. ಎಚ್. ರಂಗನಾಥ್.—ನಾನು ಹೇಳುವುದು ಇಷ್ಟೆ. ನಾನೇ ಆಗಲಿ, ಅಥವಾ ಇನ್ನಿತರೆ ಸದಸ್ಯರು ಯಾರೇ ಆಗಲಿ ಮಿಸ್‌ಬಿಹೇವ್ ಮಾಡಿದರೆ ರೂಲ್ಸಿಗೆ ಅನುಗುಣವಾಗಿ ನಡೆದುಕೊಳ್ಳದೇ ಹೋದರೆ ತಾವು ಕ್ರಮ ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇಲ್ಲದಿದ್ದರೆ ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೂ ಸಾಧ್ಯವಾಗುವುದಿಲ್ಲ. ಇಲ್ಲದಿದ್ದರೆ ನಮ್ಮ ಮನಸ್ಸಿಗೆ ಬಂದಂತಹ ರೀತಿಯಲ್ಲಿ ವ್ಯವಹಾರ ನಡೆಸತಕ್ಕಂತಹ ರೀತಿಯಾಗುತ್ತದೆ. ನಾನೇ ಆಗಲಿ, ಯಾರೇ ಆಗಲಿ ಕಾನೂನಿಗೆ ವಿರೋಧವಾಗಿ ಮಾತನಾಡಿದರೆ, ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂಬುದೇ ನನ್ನ ಪ್ರಾರ್ಥನೆ. ಇಲ್ಲದಿದ್ದರೆ ಇದೇ ಒಂದು ಅಭ್ಯಾಸವಾಗಿಬಿಟ್ಟು ನಾಳೆ ಬಹಳ ಕಷ್ಟವಾಗುತ್ತದೆ.

MR. SPEAKER.—The conduct of the hon. Member Sri Ibrahim is not in order. I request him not to conduct himself in that way. If the Chair wants to say something, he gets up and wants to threaten. This is not the way and it is not correct. He has to learn many things here because he is a new member. Never in the history of this House have members conducted themselves in this way. This new member is posing himself to be strong and is shouting and refusing to respect the Chair. I am sorry I cannot allow this. I again request the hon. Member to conduct himself properly and observe the rules and procedure of this House.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ದಯಮಾಡಿ ಕುಳಿತುಕೊಳ್ಳಿ. ಮಧ್ಯ ಇಂಟ್ರವಿನ್ ಮಾಡಬೇಡಿ. ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಿದ್ದಾರೆ. ಅವರನ್ನು ಅರ್ಧದಲ್ಲಿ ಮೊಟಕು ಮಾಡುವುದು ಸರಿಯಲ್ಲ. ಪ್ಲೀಸ್ ಹ್ಯಾವ್ ಪೇಷನ್ಸ್.

ಶ್ರೀ ಎಸ್. ಬಂಗಾರಪ್ಪ.—ದಯಮಾಡಿ ನಾನು ಏನು ಹೇಳುತ್ತೇನೆಂಬುದನ್ನು ಕೇಳಿ, ಅದಕ್ಕೆ ತಮ್ಮ ಗಮನ ಕೊಟ್ಟರೆ ಸ್ವಲ್ಪ ಉಪಯೋಗವಾಗಬಹುದು. ತಾವು ಏನು ಹೇಳಿದ್ದೀರಿ ಈ ಸದನದ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕೆಂಬುದು ತಮ್ಮ ಇಚ್ಛೆ. ಆ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಅಭಿಪ್ರಾಯವನ್ನು ನಾವು ಯಾರೂ ಹೊಂದಿಲ್ಲ ಎಂಬುದನ್ನು ಸ್ಪಷ್ಟವಾಗಿ ವಿರೋಧಪಕ್ಷದ ಪರವಾಗಿ ಹೇಳುತ್ತಿದ್ದೇನೆ. ಅದರ ಬಗ್ಗೆ ತಾವು ಚಿಂತನೆ ಮಾಡಬಾರದು. ಈ ಕಡೆಯ ಕೆಲವು ಸದಸ್ಯರು ಪದೇ ಪದೇ ಎದ್ದು ನಿಂತು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುತ್ತಿರುವುದರಿಂದ ತಮ್ಮ ಗೌರವವನ್ನು ಕಡಿಮೆ ಮಾಡಬೇಕೆಂಬುದು ಸ್ವಲ್ಪವೂ ಇಲ್ಲ. ಅಥವಾ ಸದನದ ಗೌರವವನ್ನು ಕಡಿಮೆ ಮಾಡಬೇಕೆಂದು ಅಲ್ಲ. ದಯಮಾಡಿ ತಾವು ಆ ರೀತಿ ತಿಳಿದುಕೊಳ್ಳಬೇಡಿ. ಮತ್ತು ಈ ಬಗ್ಗೆ ಆ ಕಡೆಯ ಸದಸ್ಯರು ಯಾರ್ಯಾರು ಯಾವ ಯಾವ ರೀತಿ ಮಾತನಾಡಿದ್ದಾರೆಂಬುದನ್ನೂ ಕೂಡ ಸ್ವಲ್ಪ ತೆಗೆಸಿ ನೋಡಬೇಕಾಗುತ್ತದೆ. ಅದಕ್ಕೆ ತಾವು ಹೋಗಬೇಡಿ. ಒಬ್ಬ ಸದಸ್ಯರು ಮಾತನಾಡುವಾಗ ಮತ್ತೊಬ್ಬ ಸದಸ್ಯರು ಎದ್ದು ನಿಂತು ಮಾತನಾಡಬಹುದು, ಇದು ಪದ್ಧತಿಯಲ್ಲ ಎಂಬುದಾಗಿ ಆ ಸದಸ್ಯರು ಪದೇ ಪದೇ ಹೇಳುತ್ತಿದ್ದಾರೆ. ಅದನ್ನು ತಾವು ದಯಮಾಡಿ ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು.—ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ. ಅವರು ಹೇಳಿದ್ದನ್ನೆಲ್ಲಾ ನೋಡುತ್ತಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ನೋಡುತ್ತಿದ್ದಾರೆ. ಸಭೆಯಲ್ಲಿ ಕುಳಿತಿರತಕ್ಕಂತಹ ಎಲ್ಲ ಪತ್ರಿಕಾ ಪ್ರತಿನಿಧಿಗಳೂ, ಮಾಜಿ ಶಾಸಕರೂ ಎಲ್ಲರೂ ನೋಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲರೂ ನೋಡುತ್ತಿದ್ದರೂ ಕೂಡ ತಾವು ಏನೊಂದು ಅಭಿಪ್ರಾಯವನ್ನು ತಳೆದಿದ್ದೀರಿ, ಆ ರೀತಿ ಎಲ್ಲರೂ ತಳೆದಿದ್ದಾರೆಂದು ತಾವು ದಯಮಾಡಿ ತಿಳಿಯಬೇಡಿ.

ಅಧ್ಯಕ್ಷರು.—ಅದೂ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ನನ್ನ ಸವಿನಯ ವಿನಂತಿ ಏನೆಂದರೆ ಅಂತ ಒಂದು ಅಭಿಪ್ರಾಯವನ್ನು ತಾವು ದಯಮಾಡಿ ನಮ್ಮ ಬಗ್ಗೆ ಇಟ್ಟುಕೊಳ್ಳಬೇಡಿ.

ಅಧ್ಯಕ್ಷರು.—ಯಾರೇ ಆಗಲಿ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೋ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ನಾನು ಬಹಳ ಖಚಿತವಾಗಿ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಕಾನೂನು ಪ್ರಕಾರ ತಮಗೆ ಕ್ರಮ ತೆಗೆದುಕೊಳ್ಳಲು ಅಧಿಕಾರ ಇದೆ. ಹಕ್ಕು ಇದೆ. ಕಲಾಪಗಳನ್ನು ನಡೆಸತಕ್ಕಂತಹ ಸಂದರ್ಭದಲ್ಲಿ ಕೆಲವೊಮ್ಮೆ ವಿಷಯದ ಗಹನತೆಯನ್ನು ತಿಳಿದು ಅಭ್ಯಾಸ ಮಾಡಿರತಕ್ಕಂತಹ ವ್ಯಕ್ತಿಗೆ ಆವೇಶಭರಿತನಾಗಿ ಮಾತನಾಡುತ್ತಾನೆ. ವಿಷಯದ ಪ್ರಾಮುಖ್ಯತೆ ಬಂದಾಗ ಒಬ್ಬ ವ್ಯಕ್ತಿ ವಿಷಯವನ್ನು ತಿಳಿದುಕೊಂಡಿರುವವನು ಹೇಗೆ ಮಾತನಾಡುತ್ತಾನೆಂಬುದನ್ನು ತಾವು ಅರ್ಥಮಾಡಿಕೊಂಡಿದ್ದೀರಿ. ಈ ಕಡೆಯ ಮಾನ್ಯ ಸದಸ್ಯರೊಬ್ಬರು ಆ ಒಂದು ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ಈ ಒಂದು ಘಟನೆಯಲ್ಲಿ ಅಲ್ಲಿ ೩ ಜನ ಮುಸ್ಲಿಂ ಬಂಧುಗಳು ಸತ್ತುಹೋಗಿದ್ದಾರೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು.

† ಶ್ರೀ ಆರ್. ಗುಂಡೂರಾವ್.—ಮಾನ್ಯ ಶ್ರೀಮಾನ್ ರಂಗನಾಥ್‌ರವರು ತುಂಬಾ ಆವೇಶದಲ್ಲಿ ಮಾತನಾಡಿದರು. ಅವರಿಗೆ ಒಂದೊಂದು ಸಾರಿ ಕೋಪ ಬರುತ್ತದೆ. ಅವರಿಗೆ ಕೋಪ ಬರುವುದು ಬಹಳ ಕಡಿಮೆ. ಒಂದೊಂದು ಸಲ ಕೋಪ ಮಾಡಿಕೊಳ್ಳುತ್ತಾರೆ. ಬಹಳ ಬೇಗ ಕೂಲ್‌ಡೌನ್ ಆಗಿ ಬಿಡುತ್ತಾರೆ. ಅದು ಅವರ ಸ್ವಭಾವ. ಮಾನ್ಯ ಇಬ್ರಾಹಿಂರವರು ಸ್ವಲ್ಪ ದಪ್ಪವಾಗಿದ್ದಾರೆ. ನನ್ನಷ್ಟು ಉದ್ದವಾಗಿಲ್ಲ. ಆದರೆ ಮಾನ್ಯ ಸದಸ್ಯರು ಬಹಳ ಗಟ್ಟಿಯಾಗಿ ಮಾತನಾಡುತ್ತಾರೆಂದು ಹೇಳುತ್ತಿದ್ದಾರೆ. ಈ ಕಡೆಯ ಸದಸ್ಯರಾಗಲಿ ಅಥವಾ ಆ ಕಡೆಯ ಸದಸ್ಯರಾಗಲಿ ಅನೇಕ ಸಲ ಆವೇಶಭರಿತರಾಗಿ ಮಾತನಾಡಿದ್ದಾರೆ. ಇದರಿಂದ ಯಾರಿಗೂ ನೋವನ್ನು ಉಂಟುಮಾಡಬೇಕೆಂದು ಅಲ್ಲ. ಅಂದರೆ ಆ ಕಡೆಯ ಸದಸ್ಯರಿಗಾಗಲಿ, ಸಚಿವರಿಗಾಗಲಿ, ಅಥವಾ ಮಾನ್ಯ ಅಧ್ಯಕ್ಷರಿಗಾಗಲಿ ಅವಮಾನ ಮಾಡಬೇಕು, ಅಥವಾ ತೀವ್ರ ಪ್ರತಿಭಟನೆ ಮಾಡಬೇಕೆಂಬ ಉದ್ದೇಶದಿಂದ ಈ ಕಡೆಯ ಸದಸ್ಯರಾರೂ ಮಾತನಾಡುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಹನುಮೇಗೌಡರು ಒಂದೊಂದು ಸಾರಿ ಬಹಳವಾಗಿ ಅವರ ಕೈಯ್ಯನ್ನು ಬಹಳ ಜೋರಾಗಿ ತಿರುಗಿಸಿಕೊಂಡು ಮಾತನಾಡುತ್ತಾರೆ. ಇದರಿಂದ ಅವರು ಸಭೆಗೆ ಅಗೌರವ ತೋರಿಸಬೇಕೆಂಬುದಾಗಿ ಮಾತನಾಡುತ್ತಿದ್ದಾರೆಂದು ಅಲ್ಲ. ಕಳೆದ ಸಾರಿ ಹಾಸನ ಜಿಲ್ಲೆಯ ಒಂದು ಪ್ರಕರಣದಲ್ಲಿ ಟ್ರೆಜರಿ ಬೆಂಚ್‌ನಿಂದ ಸರಿಯಾದ ಉತ್ತರ ಸಿಗಲಿಲ್ಲವೆಂದು ಅವರು ಆಳುವ ಪಕ್ಷದಲ್ಲಿದ್ದರೂ ಕೂಡ ಅಷ್ಟೊಂದು ಜೋರಾಗಿ ಮಾತನಾಡಿದರು. ಅವರನ್ನು ತಡೆಹಿಡಿಯಲು ಅವರ ಚೀಫ್ ವಿಪ್‌ಗೂ ಆಗಲಿಲ್ಲ. ಮುಖ್ಯಮಂತ್ರಿಗಳಿಗೂ ಆಗಲಿಲ್ಲ. ಕಾರ್ಯದರ್ಶಿಯವರಿಗೂ ಆಗಲಿಲ್ಲ. ವಿಷಯದ ಗಹನತೆ ಬಂದಾಗ ಹಾಗೆ ಆಗುತ್ತದೆ. ಇದರಿಂದ ಇನ್ನೊಬ್ಬರ ಮನಸ್ಸಿಗೆ ನೋವನ್ನು ಉಂಟುಮಾಡಬೇಕು ಎಂಬುದು ಅಲ್ಲ. ಅದರಲ್ಲೂ ಮುಖ್ಯವಾಗಿ ನಾನು ನಿನ್ನೆ ಹೇಳಿದ ಹಾಗೆ ತಾವು ಈ ಸದನದ ಒಂದು ವಿಶೇಷವಾದಂತಹ ಹಕ್ಕುಳ್ಳಂತಹವರು. ವಿಶೇಷವಾದಂತಹ ಅಧಿಕಾರ ಉಳ್ಳಂತಹವರು ತಾವು. ತಮಗೆ ಈ ಬಗ್ಗೆ ವಿರೋಧ ಪಕ್ಷದ ಪರವಾಗಿ ನಾನು ಭರವಸೆ ಕೊಡುವುದಕ್ಕೆ ಇಷ್ಟಪಡುವುದೇನೆಂದರೆ, ನಮ್ಮ ಕಡೆ ಇರುವಂತಹ ಯಾವ ಸದಸ್ಯರೂ ಸಹ ಯಾವ ಸಂದರ್ಭದಲ್ಲಾದರೂ ಸಹ ತಮ್ಮ ಘನತೆಗೆ ಅಥವಾ ತಮ್ಮ ಮನಸ್ಸಿಗೆ ನೋವಾಗುವಂತಹ ರೀತಿಯಲ್ಲಿ ಮಾತನಾಡುವುದಿಲ್ಲ. ಆ ಉದ್ದೇಶವನ್ನೂ ನಾವು ಹೊಂದಿಲ್ಲ. ಆದರೆ ವಿಷಯದ ಗಾಂಭೀರ್ಯತೆಯನ್ನು ತೆಗೆದುಕೊಂಡಾಗ ಅಥವಾ ಆ ವಿಷಯವನ್ನು ಆಳವಾಗಿ ಅಭ್ಯಾಸ ಮಾಡಿದಂತಹವರು ಮಾತನಾಡುವಾಗ ಕೆಲವರು ಜೋರಾಗಿ ಮಾತನಾಡಬಹುದು. ಕೆಲವರು ಮೆತ್ತಗೆ ಮಾತನಾಡಬಹುದು. ನೋಡಿ ನಮ್ಮ ಮಾನ್ಯ ಬಸವಲಿಂಗಪ್ಪನವರು ಏನೂ ಮಾತನಾಡುತ್ತಿಲ್ಲ. ಸುಮ್ಮನೆ ಕುಳಿತಿದ್ದಾರೆ.

ಆದುದರಿಂದ ನಾವು ಹೀಗೆ ಮಾತನಾಡುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಈಗ ಬಹಳ ಗೌರವಯುತವಾಗಿ ಕೂತಿದ್ದಾರೆ. ಏನೇನು ನಡೆಯುತ್ತಾ ಇದೆ ಇಲ್ಲಿ ಅದನ್ನೆಲ್ಲಾ ನೋಡುತ್ತಾ ಇದ್ದಾರೆ. ಬಹಳ ಸಂತೋಷ. ಅವರು ಈಗಾಗಲೇ ಯೋಚನೆ ಮಾಡಿಕೊಂಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ. —ಅಧ್ಯಕ್ಷರೇ, ನಾನು ಏನಾದರೂ ಮಾತನಾಡಿದರೆ ಏತಕ್ಕೆ ಮಾತನಾಡುತ್ತೀರಿ ಎಂದು ಹೇಳುತ್ತಾರೆ, ಏನಾದರೂ ಮಾತನಾಡದೇ ಹೋದರೆ ಏತಕ್ಕೆ ಮಾತನಾಡುವುದಿಲ್ಲ ಎಂದು ಹೇಳುತ್ತಾರೆ. ನಾನು ಸುಮ್ಮನೆ ಕೂತಿದ್ದರೂ ಸಹ ನನ್ನನ್ನು ಹಿಡಿದು ಜಗ್ಗಿಸುತ್ತಿದ್ದೀರಿ. ಅದರಿಂದ ಏನೂ ಪ್ರಯೋಜನ ಇಲ್ಲಾ. ನಾನು ಈಗಾಗಲೇ ಒಂದು ಖಾಯಂ ನಿಲುವನ್ನು ತೆಗೆದುಕೊಂಡಿದ್ದೇನೆ. ಅದರ ಬಗ್ಗೆ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ತೆಗೆದುಕೊಂಡಿರತಕ್ಕಂಥಾ ಖಾಯಂ ನಿಲುವು ಖಾಯಂ ಆಗಿಯೇ ಇರಲಿ. ಮತ್ತೆ ಅದನ್ನು ಆಲೋಚನೆ ಮಾಡುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಶ್ರೀ ಗುಂಡೂರಾಯರ ಮತ್ತು ಶ್ರೀಮಾನ್ ಬಸವಲಿಂಗಪ್ಪನವರ ಜಗಳಾಟ ಮತ್ತು ಕಿತ್ತಾಟ ನೋಡಿದರೆ ಒಂದು ರೀತಿಯಲ್ಲಿ ನಾನು ಏನು ಮಾತನಾಡಬೇಕೋ ಗೊತ್ತಾಗುವುದಿಲ್ಲಾ. ಅವರನ್ನು ಇವರು ಎಳೆದುಕೊಳ್ಳುವುದು ಇವರನ್ನು ಅವರು ಎಳೆದುಕೊಳ್ಳುವುದು ಇದು ನಿಂತರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರಿಗೆ ಈಗ ಪ್ರೋಗ್ರೆಸ್ ಬೇಕು, ಅದಕ್ಕೆ ಅವರು ಈಗ ಸಮಾಧಾನ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನಮಗೆ ಈಗ ಯಾವ ಪ್ರೋಗ್ರೆಸ್ ಸಹ ಬೇಕಾಗಿಲ್ಲಾ. ಅಧ್ಯಕ್ಷರೇ, ತಮ್ಮ ಮೂಲಕ ನಾನು ಹೇಳುತ್ತೇನೆ ನಾವು ಯಾರಿಗೂ ಕೂಡ ಪ್ರೋಗ್ರೆಸ್ ಈಗ ಕೊಡಬೇಕಾಗಿಲ್ಲಾ. ನಮಗೆ ಈಗಾಗಲೇ ದೇಶದ ಜನ ಪ್ರೋಗ್ರೆಸ್ ಕೊಟ್ಟಿದ್ದಾರೆ. ನಮಗೆ ದೇಶದ ಜನ ಏನು ಒಂದು ಪ್ರೋಗ್ರೆಸ್ ಕೊಟ್ಟಿದ್ದಾರೆ ಅದು ಇನ್ನೂ ಒಂದು ವರ್ಷವಾಗಿಲ್ಲಾ. ಆ ಜನರನ್ನು ಮನೆಗೆ ಕಳುಹಿಸಿ ಜೀವ ತೆಗೆದಿದ್ದೀರಿ. ಅಂಥಾವರಿಗೆ ಈಗ ಜೀವ ಕೊಡಬೇಕಾಗಿದೆ. ಅಧ್ಯಕ್ಷರೇ, ಮಾನ್ಯ ರಂಗನಾಥ್ ರವರು ನನಗೆ ಹಳೆಯ ಮಿತ್ರರಾದ್ದರಿಂದ ನಾನು ಅವರಿಗೆ ಸೀಮಿತವಾಗಿರುವಷ್ಟೆ ಉತ್ತರ ಕೊಟ್ಟೆ. ಅದೇರೀತಿ ಶ್ರೀಮಾನ್ ಬಿ. ಬಸವಲಿಂಗಪ್ಪನವರೂ ಕೂಡ ನನಗೆ ತುಂಬಾ ಸ್ನೇಹಿತರು. ನಾನು ಅವರೂ ಕೂಡ ಒಟ್ಟಿಗೆ ೧೦ ವರ್ಷ ಕೆಲಸ ಮಾಡಿದವರು. ಆದರಿಂದ ನನಗೆ ಅವರ ವಿಷಯ ಚೆನ್ನಾಗಿ ಗೊತ್ತಿದೆ.

(ಸಭೆಯಲ್ಲಿ ಗೊಂದಲ)

ಶ್ರೀ ಮಳ್ಳೂರ್ ಆನಂದರಾವ್.—ಸ್ವಾಮಿ, ಅಡ್ಜರ್ನ್‌ಮೋಷನ್ ಬಗ್ಗೆ ಏನಾಯಿತು ?

ಶ್ರೀ ಆರ್. ಗುಂಡೂರಾವ್.—ಅವರ ವಿಷಯ ಚೆನ್ನಾಗಿ ಗೊತ್ತಿರುವುದರಿಂದ ನಾನು ಹೇಳುತ್ತಿದ್ದೇನೆ. ಅವರು ಮಾತನಾಡದೇ ಹೋದರೂ ಸಹ ನನಗೆ ಅವರ ವಿಷಯ ಗೊತ್ತು. ನಾವು ನೀವು ಎಲ್ಲಾ ಸೇರಿ ೧೯೭೦ರನೇ ಇಸವಿಯಲ್ಲಿ ಯಾವ ಒಂದು ಪಕ್ಷವನ್ನು ಕಟ್ಟಿ ಬೆಳೆಸಿಕೊಂಡು ಬಂದೆವೋ ಆ ಪಕ್ಷವನ್ನು ಸಮಾಧಿ ಮಾಡಿ ಮತ್ತೆ ಅದನ್ನು ಈಗ ಮೇಲಕ್ಕೆ ಎತ್ತಿ ಪೋಸ್ಟ್‌ಮಾರ್ಟಂ ಮಾಡುವುದಕ್ಕೆ ಹೋಗುತ್ತಿದ್ದೀರಿ. ಆದರೆ ಇದರ ಒಂದು ಗುರಿ ಎಲ್ಲಿಗೆ ಹೋಗಿ ಮುಟ್ಟುತ್ತದೋ ಏನಾಗುತ್ತದೋ ?

ಶ್ರೀ ಕೆ. ಹೆಚ್. ರಂಗನಾಥ್.—ಆ ವಿಷಯ ದೇಶದಲ್ಲಿರುವ ಜನಕ್ಕೆಲ್ಲಾ ಗೊತ್ತಿದೆ. ಯಾವ ಯಾವ ಕಾಲಕ್ಕೆ ಏನೇನು ಬರುತ್ತದೋ ಗೊತ್ತಿಲ್ಲ.

(ಸಭೆಯಲ್ಲಿ ಗೊಂದಲ)

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಅದೇನೆಂದರೆ ಈಗ ಸಭೆಯ ಮುಂದಿರತಕ್ಕಂಥಾ ವಿಷಯ ಈ ಒಂದು ಅಡ್ಜರ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಬೇಕೇ ಇಲ್ಲವೇ ಎನ್ನುವುದು. ಆದರೆ ಇದುವರೆಗೂ ಕೂಡ ನಾವು ಕೇಳುತ್ತಾ ಇರುವ ವಿಷಯ ನೀವು ಯಾವ ಪಾರ್ಟಿಗೆ ಸೇರಿದ್ದೀರಿ ನೀವು ಯಾವ ಪಾರ್ಟಿಗೆ ಸೇರಿದ್ದೀರಿ, ಅಂತ ಕೇಳಿ

ಬರುತ್ತಾ ಇದೆ. ಹೀಗೆ ಪಾರ್ಟಿ ಪಾರ್ಟಿ ವಿಷಯಗಳನ್ನು ಇಲ್ಲಿ ಮಾತನಾಡತಕ್ಕಂಥಾದ್ದು ಸರಿಯಲ್ಲ. ನಮಗೆ ಈ ಬಗ್ಗೆ ಉದ್ರೇಕ ಬೇಕಾಗಿಲ್ಲಾ. ನಾವು ಇಲ್ಲಿಗೆ ಬಂದಿರುವುದು ದೇಶದ ಜನರಿಗೆ ಅನ್ನ ಕೊಡಬೇಕು ಅಂತ ಬಂದಿದ್ದೇವೋ ಅಥವಾ ಅವರ ಪಾರ್ಟಿ ಇವರ ಪಾರ್ಟಿ ಅನ್ನುವ ವಿಷಯಗಳ ಬಗ್ಗೆ ಬಂದಿದ್ದೇವೋ ಅಥವಾ ಈ ಪಾರ್ಟಿ ೩ ತಿಂಗಳಿಗಿಂತ ಹೆಚ್ಚಾಗಿ ಇರುವುದಿಲ್ಲಾ, ಆ ಪಾರ್ಟಿ ೪ ತಿಂಗಳಿಗಿಂತ ಹೆಚ್ಚಾಗಿ ಇರುವುದಿಲ್ಲ ಅಂತ ಈ ಪಾರ್ಟಿಗಳ ಬಗ್ಗೆ ಮಾತನಾಡುವುದಕ್ಕೆ, ಕ್ಯಾನ್‌ವಾಸ್ ಮಾಡುವುದಕ್ಕೆ ಬಂದಿದ್ದೇವೋ ಅದನ್ನು ಯೋಚನೆ ಮಾಡಬೇಕು. ಆದುದರಿಂದ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ ನಮಗೆ ಪಾರ್ಟಿ ಬಗ್ಗೆ ಯಾವ ಕ್ಯಾನ್‌ವಾಸ್ ಕೂಡ ಬೇಕಾಗಿಲ್ಲಾ. ತಾವು ಅದಕ್ಕೆ ಅವಕಾಶ ಕೊಡಬಾರದು. ನಿಜವಾಗಿ ಈ ಅಧಿವೇಶನಕ್ಕೆ ಸಂಬಂಧಪಟ್ಟಂತೆ ನಮ್ಮ ವಿಧಾನ ಸಭೆಯ ಕಾರ್ಯಕಲಾಪಗಳು ಏನು ಇವೆಯೋ ಅದನ್ನು ಸುಗಮವಾದ ರೀತಿಯಲ್ಲಿ ನಡೆಯುವುದಕ್ಕೆ ಅವಕಾಶಕೊಟ್ಟು, ನಾನು ಮೊದಲೇ ಹೇಳಿದ ಹಾಗೆ ಬೇರೆ ತರಹವಾದ ವಾದವಿವಾದಗಳಿಗೆ ಇಲ್ಲಿ ಅವಕಾಶ ಕೊಡಬಾರದು ಮತ್ತು ನಾನು ಈಗ ಹೇಳಿರತಕ್ಕಂಥಾದ್ದಕ್ಕೆ ತಾವು ರೂಲಿಂಗ್ ಕೊಡಬೇಕು ಎಂದು ಕೇಳುತ್ತೇನೆ.

MR. SPEAKER.—There is some substance in what Sri Gangadharan says. I think we have to agree with him.

ಶ್ರೀ ಆರ್. ಗುಂಡೂರಾವ್.—ಈಗ ಈ ಪ್ರಶ್ನೆ ಬೇಡ. ಅದಕ್ಕ ಸನ್ನಿವೇಶ ಬರುತ್ತದೆ. ಈ ಬಗ್ಗೆ ಶ್ರೀಮಾನ್ ಮಳ್ಳೂರು ಆನಂದರಾಯರು ಏತಕ್ಕ ಡಿಫೆಂಡ್ ಮಾಡಿಕೊಳ್ಳುತ್ತಾರೋ ಗೊತ್ತಿಲ್ಲ. ಅವರು ಆರೀತಿ ಮಾತನಾಡಿದರೂ ಸಹ ನನಗೇನೂ ಅವರ ಬಗ್ಗೆ ಬೇಜಾರು ಇಲ್ಲಾ. ನಾನು ಈ ಮಾತನ್ನು ಏತಕ್ಕೆ ಹೇಳಿದೆ ಎಂದರೆ ಸನ್ನಿವೇಶ ಬಂದಾಗ ಉದ್ರೇಗವಾಗಿ ಮಾತನಾಡುವುದು ಯಾರ ಮನಸ್ಸನ್ನೂ ಕೂಡ ನೋಯಿಸಬೇಕು ಅಂತ ಅವರ ಮನಸ್ಸಿನಲ್ಲಿ ಇರುವುದಿಲ್ಲ. ಆದೇ ರೀತಿ ಶ್ರೀಮಾನ್ ಇಬ್ರಾಹಿಂರವರು ಏನು ಮಾತನಾಡಬೇಕಾದರೂ ಸಹ ಏನು ಒಂದು ಆವೇಶದಿಂದಾಗಲಿಅಥವಾ ಉದ್ರೇಕದಿಂದಗಲಿ ಮಾತನಾಡಿದರೆ ಅವರು ಇನ್ನೊಬ್ಬರ ಮನಸ್ಸನ್ನು ನೋಯಿಸಿ ಮಾತನಾಡಬೇಕು ಅಂತ ಮಾತನಾಡುತ್ತಾ ಇಲ್ಲಾ. ಅವರು ತಮ್ಮದೇ ಆದ ಒಂದು ಧಾಟಿಯಲ್ಲಿ ಮಾತನಾಡುತ್ತಾರೆ ವಿನಾ ಇನ್ನೇನೂ ಅಲ್ಲಾ. ಬಹುಶಃ ನಾನು ತಿಳಿದುಕೊಂಡಿರುವುದು ಅವರು ಹಿಂದೆ ಏನಾದರೂ ಕೂಡ ಬ್ಯಾಸ್ಕೆಟ್ ಪ್ಲೇಯರ್ ಆಗಿದ್ದರೋ ಅಥವಾ ಕುಸ್ತಿ ಆಟಗಾರರಾಗಿದ್ದರೋ ನನಗೆ ಗೊತ್ತಿಲ್ಲಾ. ಏತಕ್ಕೆ ಅವರು ಹೀಗೆ ಮಾತನಾಡುತ್ತಾರೆ ಅನ್ನುವುದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರಬೇಕು. ಏತಕ್ಕೆಂದರ ಅವರೂ ಕೂಡ ಸ್ವಲ್ಪ ಕುಸ್ತಿ ಅಭ್ಯಾಸ ಮಾಡಿರುವುದರಿಂದ ಅವರಿಗೆ ಗೊತ್ತಿದೆ. ಕುಸ್ತಿಯಲ್ಲೆ ಅಭ್ಯಾಸ ಮಾಡಿರುವವರು ಏನಾದರೂ ಮಾತನಾಡಬೇಕಾದರೆ ಅವರು ತಮ್ಮ ಎದೆಯನ್ನು ಮುಂದಿಟ್ಟುಕೊಂಡು ಮಾತನಾಡುತ್ತಾರೆ. ಇನ್ನು ಆ ಬಗ್ಗೆ ಹೆಚ್ಚು ವಿಷಯ ಹೇಳುವುದಿಲ್ಲ. ಅವರಿಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ಈಗ ನಾನು ಹೇಳುವುದು ಇಷ್ಟೆ. ತಾವು ಈಗ ಏನು ಹೇಳಿದಿರಿ ಅದರ ಬಗ್ಗೆ ನಾನು ಯೋಚನೆ ಮಾಡಿದಾಗ ನನ್ನ ಮನಸ್ಸಿನಲ್ಲೂ ಕೂಡ ಏನಾಯಿತು ಎಂದರೆ ತಾವು ಏನೋ ಮನಸ್ಸಿನಲ್ಲಿ ನೋಂದಿದ್ದಿರಿ ಅಂತ ಕಾಣುತ್ತದೆ. ಅಲ್ಲದೇ ಈ ೨–೩ ಜನ ಸದಸ್ಯರ ಮೇಲೆ ತಾವು ಮಾತನಾಡಿದುದನ್ನು ನೋಡಿದರೆ ಬಹುಶಃ ಅವರು ನಿಮಗೇನಾದರೂ ಗೌರವ ಕೊಡುತ್ತಾ ಇಲ್ಲವೋ ಅಥವಾ ಅವರುಗಳು ಮಾತನಾಡುವಾಗ ಏನಾದರೂ ಒಂದು ಲೋಪ ಬರುವ ರೀತಿಯಲ್ಲಿ ನಡೆದು ಕೊಂಡಿದ್ದಾರೋ ಎನೋ ? ಈ ಬಗ್ಗೆ ನಾನು ಹೇಳುವುದು ಇಷ್ಟೆ ತಾವು ಈ ಬಗ್ಗೆ ಏನೊಂದು ಸಂಶಯವನ್ನೂ ಇಟ್ಟುಕೊಳ್ಳಬೇಡಿ ಎಂದು ಹೇಳುತ್ತೇನೆ. ಈ ಕಡೆಯ ಸದಸ್ಯರೇ ಆಗಲಿ, ಆ ಕಡೆ ಸದಸ್ಯರೇ ಆಗಲಿ ಯಾವ ಒಂದು ಸಂಶಯವನ್ನು ಸಹ ಇಟ್ಟುಕೊಳ್ಳುವುದಿಲ್ಲ ಎಂದು ನಾನು ಭಾವಿಸುತ್ತೇನೆ. ತಾವು ಕೂಡ ತಮ್ಮ ಮನಸ್ಸಿಗೆ ಏನಾದರೂ ನಮ್ಮ ಬಗ್ಗೆ ಒಂದು ಲವಲೇಶವಾದರೂ ಲೋಪ ಬಂದಿದ್ದರೆ ಅದನ್ನು ತಾವು ಮನಸ್ಸಿಗೆ ತೆಗೆದುಕೊಳ್ಳಬೇಡಿ ಎಂದು ಹೇಳುತ್ತೇನೆ. ಮಾನ್ಯ ರಂಗನಾಥಗವರು ಈಗ ಸಭೆಯಿಂದ ಎದ್ದುಹೋದರು. ಅವರೂ ಸಹ ತಿಳಿದುಕೊಳ್ಳಬೇಕು, ನಾನು ಈಗ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಈ ಸಭೆಯಲ್ಲಿ ಏನು ಕಾನೂನು ಮತ್ತು ನಿಯಮಗಳು ಇವೆ ಅದಕ್ಕನುಸಾರವಾಗಿ ತಮ್ಮ ಆಜ್ಞಾನುಸಾರ ಈ ಸಭೆಯನ್ನು ನಡೆಸಿಕೊಂಡು ಹೋಗಬೇಕು ಅದೇರೀತಿಯಾಗಿ ಸರ್ಕಾರದ ಕೆಲಸಗಳೂ ಕೂಡ ನಡೆಯಬೇಕು ಎಂದು ಹೇಳುತ್ತೇನೆ. ದೇಶದ ಅಭಿವೃದ್ಧಿ ಕಾರ್ಯಗಳು ಅಗಬೇಕಾದರೆ ಅನೇಕ ಜನರಿಗೆ ಕೆಲಸಗಳನ್ನು ಮಾಡಿಕೊಡಬೇಕು. ಈ ಜವಾಬ್ದಾರಿ ಎಲ್ಲರ ಮೇಲೂ ಇದೆ. ದೇಶದಲ್ಲಿ ಯಾವುದೇ ಪ್ರಗತಿ ಕಾರ್ಯ ಮಾಡಬೇಕಾದರೂ ಸಹ ಆ ಬಗ್ಗೆ ಯಾವುದೇ ಹಣ ಖರ್ಚು ಮಾಡಬೇಕಾದರೂ ಸಹ ಅದಕ್ಕೆ ಇಡೀ ಸದಸ್ಯರ ಸಹಕಾರ ಬೇಕಲೇ ಬೇಕು, ಆ ಕೆಲಸವನ್ನು

ಸರ್ಕಾರ ಮಾಡಬೇಕು. ಹಾಗೆ ಮಾಡದೇ ಹೋದರೆ ನಾನಾ ತರಹ ತೊಂದರೆಗಳು ಉದ್ಭವವಾಗುತ್ತವೆ ಸರ್ಕಾರದ ಕೆಲಸವನ್ನು ನಿಲ್ಲಿಸಿಬಿಟ್ಟು ಈ ಸಭೆಯನ್ನು ಬೇರೆ ಕಡೆ ಎಳೆಯಬೇಕು ಎನ್ನುವ ಉದ್ದೇಶ ಯಾರಿಗೂ ಇಲ್ಲ ಎಂದು ಹೇಳಬಯಸುತ್ತೇನೆ. ಆದರೆ ಇಂಥ ಕೆಲವಾರು ಸನ್ನಿವೇಶಗಳು ನಡೆದಿರುವಾಗ ಪ್ರಜಾಪ್ರಭುತ್ವದ ತತ್ವದ ಆಧಾರದ ಮೇಲೆ ಸಭೆಗಳು ಸೇರಿದಾಗ ಈ ವಿಷಯಗಳು ಅನೇಕ ಸಾರಿ ಚರ್ಚೆ ಯಾಗಿವೆ. ಆದ್ದರಿಂದ ಕೆಲವು ವಿಷಯಗಳಲ್ಲಿ ಆ ಕಡೆ ಮತ್ತು ಈ ಕಡೆ ಸದಸ್ಯರಿಗೆ ಚಕಮಕಿ ನಡೆದರೆ ಅದನ್ನು ಯಾರೂ ತಪ್ಪಾಗಿ ತಿಳಿದುಕೊಳ್ಳಬಾರದು. ಸಾಧಾರಣವಾಗಿ ಸಭೆಯ ನಿಯಮಗಳು ಏನು ಇವೆ ಅವುಗಳನ್ನು ಎರಡು ಕಡೆಯವರೂ ಅನುಸರಿಸಿಕೊಂಡು ಹೋಗೋಣ ಎಂದು ಹೇಳಿ ಈ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

SRI S. R. BOMMAI.—I, think for the last $2\frac{1}{2}$ hours we have been discussing many matters, the main matter remaining undiscussed. I have seen exchange of views from both the sides, from the ruling party and the main opposition, claims and counter-claims. I would only state one thing : between these challenges and counter-challenges and attacks and counter attacks, I am in a better position. Therefore, I would only go to the point regarding the adjournment motion.

We all know that we can only state certain facts to convince the Speaker for admissibility of an adjournment motion, and we cannot go into the details. From that point of view, here is an instance where a police constable raped a girl and people gathered. A gentleman by Sri Sadasiva Reddy intervened in the matter. He contacted the police officer but they were not available. He was taking the police constable away from the public attack and he went to the police station and people gathered. He contacted the District Superintendent of Police. There after the police have come and firing took place. The matter is very important because the next day a peace committee meeting was held under the chairmanship of the Deputy Commissioner. The proceedings are there. Sri Sadasiva Reedy narrated the entire story and the proceedings say that this was the person who rescued the constable from public attack and he took pains to contact the police officers. But this Sadasiva Reddy is made the accused and he is arrested. Is this not a matter of urgent importance that can be discussed in detail ? I understand a chargesheet is filed and the matter is subjudice. But there are rules and precedents where inspite of chargeheets being filed, without going into the merits or demerits of the case if the police authorities have misused their authority, matters have been discussed. Here is the man who tried to rescue the poilce constable and tried to take him away from public attack and helped the police being arrested and kept in jail. Is it not matter of great importance ? The Peace Committee appreciates his efforts but that man is arrested. Is it not misuse of authority ? Where should it be discussed ? It cannot discussed in a court of law. He is accsed and he has to defend. So

I seek your indulgence. The Chief Minister has already stated that a judicial enquiry is ordered. Judicial enquiry or a magisterial enquiry.

SRI D. DEVARAJ URS.—Judicial enquiry.

SRI. S. R. BOMMAI.—If it is a judicial enquiry it should be by a judge.

MR. SPEAKER.—A chargesheet is also filed.

SRI G. P. VADEYARAJ —The question before us is the point of order of Sri Nanaiah with respect to the fact, whether we can first up the adjournment motion for preliminary submission and try to convince you or whether the call attention should be taken up. This is exactly the matter before you. What we are trying to convince you is, under the rules it is the adjourment motion that can be taken up and not the call attention notice. I confine my remarks to that extent I am not going into the facts of the case, Under the rules an adjournment motion has precedence over call attention notice and under the rules there is no provision to convert an adjournment motion into a call attention. In support of my contention I would like to quote from the Practice and Procedure of Parliament by Kaul and Shakdar. Before doing so, I would like to submit one thing. My friends on other side known pretty well that adjournment motions are brought all of a sudden and for a very very important purpose. Hundreds of adjournment motions have been brought and I am surprised at the argument advanced by my friends on the other side since an identical matter is there as call attention notice included in the agenda, this adjournment motion cannot be taken up. It is not correct. Insupport of my contention I would like to draw your attention to what is stated in the Book I have referred to. On page 423 it is said.

> "Normally no business not included in the list of Business for the day can be transacted at any sitting without the permission of the Speaker. However, a matter of urgent public importance can be raised by interrupting the regular business of the House through an adjournment motion tabled at the earliest opportunity, if the Speaker gives his consent thereto. In the words of Speaker Mavalankar ;

An adjournment motion is really a very exceptional things because hon. members will see that to allow a matter to be discussed in the House in respect of which no previous notice is given and which is not placed on the Order Paper, is doing injustice to a large number of absent members. Therefore, the practice has been that nothing will be introduced extraneously in the Order Paper of the day unless the occasion is of such a character that something very grave, some thing which affects the whole country, its safety, its

interests and all that is happening, and the House must pay its attention immediately. Then only an adjournment motion can be concieved Adjournment motions cannot be introduced in the Order Paper unless the extent of the matter, its importance, its gravity, justifies it.

The primary object of an adjournment motion is to draw the attention of the Government to a matter of urgent public importance as to influence the decision of Government in an urgent matter in regard to which a motion or resolution with proper notice will be too late.

Page: 425.

The crucial test always is as to whether the question proposed to be raised has arisen suddenly and created an emergent situation of such a character that there is prima faice case of urgency and the House must therefore leave aside all other business and take up the consideration of the urgent matter at the appointed hour. The urgency must be of such a character that the matter really brooks no delay and should be discussed on the same day the notice has been given."

3-30 P.M:

This is the urgency; this is a matter of urgent public importance. As I have already submitted, this Adjournment Motion has precedence over all the business of the House. If I can draw your kind attention to the provisions of the Rules of Procedure, all business should be kept aside and this matter should be taken up for consideration. Therefore, the Point of Order raised by my hon. friends on the other side has no substance. I request that the Point of Order raised should be ruled out, and we who have moved the Adjournment Motion be permitted to substantiate as to why we have brought it, so that you can be convinced. Ultimately it is your decision as to whether there is a prima facie case or not or whether leave should be granted to discuss this matter, and we cannot question your dicision. But we have every right to submit the preliminary facts before you so that you would be pleased to ask us as to why this Motion has been brought before this House. Kindly allow me to substantiate as to why we have brought this Adjournment Motion.

MR SPEAKER—I will hear the Hon'ble Chief Minister. ನೀವು ಮಾಡ ಬಾರದನ್ನೆಲ್ಲಾ ಮಾಡಿ ಎಂದು ನನಗೆ ಹೇಳುತ್ತೀರಿ ಅದೇ ನನಗೆ ಬಂದಿರತಕ್ಕ ಒಂದು ದೊಡ್ಡ ತೊಂದರೆ.

ಶ್ರೀ ಡಿ. ದೇವರಾಜ ಅರಸ್—ಮಾನ್ಯ ಸಭಾಧ್ಯಕ್ಷರೆ, ಅವರು ಏನೇನು ಮಾತನಾಡಿದ್ದಾರೆ ಅದನ್ನೆಲ್ಲಾ ನಾನು ಚೆನ್ನಾಗಿ ಕೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಒಂದು

ಮಾತನ್ನು ಹೇಳಿದ್ದಾರೆ. ಅದು ಏನೆಂದರೆ, ತಾವು ಕೊಡಲಿರುವ ರೂಲಿಂಗ್ ಬಗ್ಗೆ ಅವರಿಗೆ ತುಂಬಾ ಗೌರವ ಇದೆಯಂತೆ. ತಮ್ಮ ಬಗ್ಗೆ ಕೂಡ ಅವರಿಗೆ ಗೌರವ ತುಂಬಾ ಇದೆಯಂತೆ. ಒಂದೊಂದು ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರುಗಳೇನಾದರೂ ಉದ್ವೇಗದಿಂದ ಮಾತನಾಡಿದರೆ ಅದನ್ನು ತಾವು ಅಗೌರವ ಎಂದು ತಿಳಿದುಕೊಳ್ಳಬಾರದೆಂದು ಹೇಳುತ್ತಿದ್ದಾರೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ಅವರು ಬಾಯಲ್ಲಿ ಏನು ಹೇಳುತ್ತಾರೆ ಅದನ್ನೇ ಕಾರ್ಯದಲ್ಲೂ ಕೂಡ ಮಾಡಿ ತೋರಿಸಿದರೆ ಒಳ್ಳೆಯದು ಎಂದು ಅವರಿಗೆ ಹೇಳಬಯಸುತ್ತೇನೆ. ನಾವೆಲ್ಲರೂ ಸರ್ಕಾರದ ಕೆಲಸವನ್ನೇ ಮಾಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ. ಇದು ನನ್ನ ಮನೆಯ ಕೆಲಸವೇನೂ ಅಲ್ಲ. ಈ ವಿಚಾರವನ್ನು ಮಾನ್ಯ ಸದಸ್ಯರು ನಿನ್ನೆಯ ದಿವಸವೇ ಸಭೆಯ ಮುಂದೆ ತಂದರು. ಇದು ಅಷ್ಟೊಂದು ಅರ್ಜೆಂಟ್ ಆಗಿದ್ದರೆ ಇದನ್ನು ನಿನ್ನೆಯ ದಿವಸವೇ ಮಾಡಿ ಮುಗಿಸಬಹುದಾಗಿತ್ತು. ನಿನ್ನೆಯ ದಿವಸವೆಲ್ಲಾ ಸುಮ್ಮನೆ ಗಲಾಟೆ ಮಾಡಿಕೊಂಡು ಕಾಲ ಕಳೆದು ಇವತ್ತು ಇದನ್ನು ಅರ್ಜೆಂಟ್ ಎಂದು ಹೇಳುತ್ತಿದ್ದಾರೆ,

ಶ್ರೀ ಗೋವಿಂದ ಪಿ, ಒಡೆಯರಾಜ್—ನಾವು ಇದನ್ನು ನಿನ್ನೆಯ ದಿವಸವೇ ಕೊಟ್ಟಿದ್ದೆವು. ಆದರೆ ನಿನ್ನೆಯ ದಿವಸ ಈ ಸರ್ಕಾರ ಇದೆಯೋ ಇಲ್ಲವೇ ಎಂಬ ಅನುಮಾನ ಪ್ರಮುಖವಾಗಿತ್ತು,

ಶ್ರೀ ಡಿ. ದೇವರಾಜ ಅರಸ್—ನಿನ್ನೆಯ ದಿವಸ ಗೊತ್ತಾಗಲಿಲ್ಲ ; ಈಗಲಾದರೂ ಸರ್ಕಾರ ಇದೆ ಎಂಬುದು ಗೊತ್ತಾಗುತ್ತಿದೆಯಲ್ಲಾ. ತಾವು ನಿನ್ನೆಯ ದಿವಸವೇ ಕೊಟ್ಟ ಮೇಲೆ ನಿನ್ನೆಯೇ ಇದನ್ನು ಏತಕ್ಕೆ ಇನ್‌ಸಿಸ್ಟ್ ಮಾಡಲಿಲ್ಲ. ಹಾಗಾದರೆ ನಿನ್ನೆಯ ದಿವಸ ಇದರ ಪ್ರಾಮುಖ್ಯತೆ ಇರಲಿಲ್ಲವೆ ? ತಾವು ಸುಮ್ಮನೆ ಏನೋ ಮಾತನಾಡಲು ಹೋಗಿ ಸಿಕ್ಕಿಹಾಕಿಕೊಂಡು ಅನಂತರ ಒದ್ದಾಡುತ್ತೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್— ತಾವು ಹೇಗೆ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದೀರಿ ಎಂಬುದು ನಮಗೆ ಗೊತ್ತಿಲ್ಲವೆ ?

† SRI D. DEVARAJ URS :—They have sent it ; they should have urged upon it. It is they who wasted the whole day yesterday, and now they are bringing it up. Now, I am only submitting to you. Sir, that there is no need for the Adjournment Motion at all, because whatever the Opposition wanted-the Government should act in a particular manner we have acted already. I am saying that Judicial Enquiry has been ordered and a Judicial Officer, who has been given by the High Court-not selected by me-has been asked already to go into the whole question. We wrote to the High Court, and the officer given by the High Court has been taken as an Enquiry Officer and today orders have been passed. I think this should satisfy the hon. members. May be somebody else may be in the wrong-how can I assert to know the truth of the matter when I am saying that a Judicial Enquiry is going to be conducted, I do not know in what other manner I should satisfy my friends. Certainly it is a serious mctter and we have to probe into the whole question. That is why unhesitatingly the Government have ordered for a Judicial Enquiry Apart from this, I have already stated that charge-sheets have been framed. As my friend Sri S. R. Bommai put it, may be somebody else might have been charge-sheeted wrongly. I am not going into the merits of the case' If a man is wrongly charge-sheeted, the Court will look into it The Judicial Enquiry will bring to light whether any person has been wrongly charge-sheeted. Whoever the Officer may be-whether he is highly placed or at a lower level, if

the Judicial Enquiry finds fault with that officer, the Government is certainly going to take action without any kind of favouritism. We have even requested the Judicial Officer to give his report within a month, if possible–I do not know he may take a little more time. We have stated in our order that he is requested to give th s report in a month.

Apart from this, we have even paid some compensation at the rate of Rs. 5,000 to each family in whose family these deaths have occurred, and anything more to be done will be done. Beyond this, at this stage, by an Adjournment Motion being tabled here, what more my hon. friends from the Opposition are going-to gain I am not able to understand, because whatever they could have urged upon through this Adjournment Motion has already been done by the Government. Even technically speaking, if that one point is coming in the way of admitting this Motion, it cannot be admitted. So sir, from all these angles, there is no justification for admitting this Motion.

ಶ್ರೀ ಗೋವಿಂದ ಪಿ, ಒಡೆಯರಾಜ್—ಸ್ವಾಮಿ, ನಾವು ಎತ್ತಿರುವ ಪಾಯಿಂಟ್ ಆಫ್ ಆರ್ಡರ್ ಪ್ರಕಾರ ಮಾತನಾಡುವುದು ಬಹಳ ಇದೆ. ನಮ್ಮ ಡಿಮ್ಯಾಂಡ್ಸ್ ಏನು ಎಂಬುದನ್ನು ತಾವು ಕೇಳಬೇಕು. ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡಿ ನೊಂದವರಿಗೆ ಪರಿಹಾರ ಕೊಟ್ಟಿದ್ದೇವೆಂದು ಏನು ಹೇಳಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇನೆ. ಆದರೆ ಈ ವಿಚಾರದಲ್ಲಿ ನಾವು ತಿಳಿಸಬೇಕಾದು ಇನ್ನೂ ಇದೆ.

ಅಧ್ಯಕ್ಷರು.— ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಬೇಕೇ ಅಥವಾ ಬೇಡವೇ ಎನ್ನುವ ಬಗ್ಗೆ ಮಾತ್ರ ಮಾನ್ಯ ಸದಸ್ಯರು ಹೇಳಬೇಕು. ನಾನು ಇದಕ್ಕೆ ಕನ್ಸೆಂಟ್ ಕೊಡದೇ ಡೀಟೇಲ್ಸ್ ಕೊಡುವುದಕ್ಕೆ ಬರುವುದಿಲ್ಲ.

SRI G. P. VADEYARAJ.— With due respect to the Chair I am submitting that admissibility of the adjournment would be the second stage. The issue before the House is the point raised by Sri Naniah an hon. member of this House. I would like to know whether you are going to give us an opportunity to make a preliminary case before you. This is the time for us to do that. After you give the ruling we will substantiate the case along with other facts and what reliefs are required.

ಅಧ್ಯಕ್ಷರು.— ಈಗ ಇಲ್ಲಿ ಫ್ಯಾಕ್ಟ್ಸ್ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಗೋವಿಂದ ಪಿ. ವಡೆಯರಾಜ್.—ನಿಳುವಳಿ ಸೂಚನೆಯನ್ನು ನಾವು ಏತಕ್ಕೆ ತಂದಿದ್ದೇವೆ ಎಂಬುದನ್ನು ಹೇಳುವುದು ಬೇಡವೆ? ನಾವು ಅದನ್ನು ಹೇಳದೇ ನೀವು ಅದಕ್ಕೆ ತೀರ್ಪು ಕೊಡುತ್ತೇವೆಂದರೆ ಹೇಗೆ?

ಅಧ್ಯಕ್ಷರು.— ಅಡ್ಮಿಸಬಿಲಿಟಿಗೆ ಅವಕಾಶವಿದೆ ಎನ್ನತಕ್ಕ ಆಧಾರದ ಮೇಲೆ ಕೋಟ್ ಮಾಡಿ ಕನ್ವಿನ್ಸ್ ಮಾಡಬೇಕು.

ಶ್ರೀ ಜಿ. ಪಿ. ವಡೆಯರಾಜ್.— ಇದನ್ನು ತಾವು ಅಡ್ಮಿಟ್ ಮಾಡದೇ ಹೋದರೆ ಬಹಳ ಅನಾಹುತವಾಗುತ್ತದೆ. ಇದುವರೆಗೂ ಬರೀ ಕ್ರಿಯಾಲೋಪದ ಮೇಲೆಯೆ ಚರ್ಚೆ ನಡೆದಿದೆ. ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡುವ ಬಗ್ಗೆ ಸಬ್‌ಸ್ಟ್ಯಾನ್ಸಿಯೇಟ್ ಮಾಡುವುದಕ್ಕೆ ಅವಕಾಶ ಕೊಡದೆ ತಾವು ತೀರ್ಪು

ಕೊಟ್ಟರೆ ಸರಿಹೋಗುವುದಿಲ್ಲ. ನಾವು ಈ ಕೇಸಿನ ಬಗ್ಗೆ ವಿವರವಾಗಿ ಹೇಳಿದ ಮೇಲೆ, ಮುಖ್ಯ ಮಂತ್ರಿಯವರ ಹೇಳಿಕೆಯನ್ನು ತೆಗೆದುಕೊಂಡು ಆಮೇಲೆ ತಮ್ಮ ತೀರ್ಪನ್ನು ಕೊಡಬಹುದು. ಈಗ ಒಮ್ಮೆಲೇ ತಾವು ತೀರ್ಮಾನವನ್ನು ಕೊಡುವುದಕ್ಕೆ ಹೋಗುವುದು ಸರಿಯಲ್ಲ. ನೊಂದವರಿಗೆ ಪರಿಹಾರ ಕೊಟ್ಟಿದ್ದೇವೆ, ನ್ಯಾಯಾಂಗ ತನಿಖೆಯನ್ನು ಏರ್ಪಡಿಸಿದ್ದೇವೆ ಎಂದು ಹೇಳಿದ್ದಾರೆ. ಆದರೆ ಮುಖ್ಯವಾಗಿ ಯಾವ ವಿಚಾರವನ್ನು ಅವರು ಹೇಳಬೇಕಾಗಿತ್ತೋ ಅದನ್ನು ಹೇಳಿಲ್ಲ.

SRI D. DEVARAJ URS.— On the other hand he must appreciate that we have taken action.

SRI G. P. VADEYARAJ.— We will appreciate your gesture but that would be a second stage. ಆದರೆ ಈಗ ಮಾನ್ಯ ಅಧ್ಯಕ್ಷರು ಈ ಕೇಸನ್ನು ಪ್ರಿಲಿಮಿನರಿಯಾಗಿ ಕನ್ವಿನ್ಸ್ ಮಾಡುವುದಕ್ಕೆ ಆಸ್ಪದ ಕೊಡಬೇಕು. We are not going to deal with the merit of the case, What the Hon. Chief Minister has stated about the facts are not facts.

ಅಧ್ಯಕ್ಷರು.— ಇದಕ್ಕೆ ಪ್ರಿಲಿಮಿನರಿಯಾಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಎರಡು ದಿವಸಗಳು ಬೇಕಾಗುತ್ತದೆ.

ಶ್ರೀ ಗೋವಿಂದ ಪಿ. ವಡೆಯರಾಜ್.— ಸ್ವಾಮಿ, ಅಲ್ಲಿ ಜನರು ಸತ್ತಿದ್ದಾರೆ. ಆ ಬಗ್ಗೆ ತಮಗೆ ಕನ್ವಿನ್ಸ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

MR. SPEAKER.— Whether I have to give consent, I have to decide now.

ಶ್ರೀ ಗೋವಿಂದ ಪಿ. ವಡೆಯರಾಜ್.— ಪ್ರಿಲಿಮಿನರಿ ಕೇಸನ್ನು ನಾವು ಸಬ್‌ಸ್ಟ್ಯಾನ್ಸಿಯೇಟ್ ಮಾಡುತ್ತಿದ್ದೇವೆ. It is going to be a very important case in the history of our Legislature.

ಅಧ್ಯಕ್ಷರು.— ಇದರಲ್ಲೇ ಕಾಲವೆಲ್ಲಾ ವ್ಯರ್ಥವಾಗುತ್ತದೆ. ಇದು ಸರಿಯಲ್ಲ.

SRI G. P. VADEYARAJ.— The hon. member raised procedural wrangles on the point of order, whether we are supposed to convinee you, whether we can substantiate the preliminary case or not.

ಅಧ್ಯಕ್ಷರು.— ನಾನು ಈಗ ಹೇಳುವಂತಹದ್ದನ್ನು ತಾವು ಸ್ವಲ್ಪ ತಾಳ್ಮೆಯಿಂದ ಕೇಳಿ.

ಶ್ರೀ ಗೋವಿಂದ ಪಿ. ವಡೆಯರಾಜ್.— ಅಲ್ಲಿ ಜನರು ಸತ್ತಿದ್ದಾರೆ. It is the police that have fired and killed the people.

MR. SPEAKER.— I shall quote from Kaul and Shakdar.

"The point is that if the hon. members have a fairly good chance of raising the question on a debate, it willnotbe permitted as an adjournment motion. The adjournment motion is a deviee to bring something before the House which is not included in the agenda or the order paper. It is something like taking up a new matter which is not intended to be taken up under which all members had no notice whatever. So, in the interests of all, it has been the practice to move

an adjournment motion as a matter of exception where the matter is really urgent and there is no other opportunity or chance for the House to consider the matter.

The motion should not deal with any matter which is under adjudication by a Court of Law having jurisdiction in any part of India. The matter is *sub judice* only the legal proceedings start; but the moment a complaint is filed or a petition is launched involving the jurisdiction of any court in India, the court is seized of the matter and to that extent the jurisdiction of the House to discuss the matter is barred. An adjournment motion, moving of which or leave has been granted, cannot be proceeded with if the time appointed for the taking the matter has become *sub judice*

An adjournment motion is possible only where there is some failure on the part of the Government to take some action."

As the Chief Minister has already stated that the matter is also *sub judice* it is not necessary to admit the adjournment motion. I will give chance to seek clarification. When the calling attention notice on the subject is taken up.

SRI R. GUNDU RAO.— We have got great respect for the Chair and to your decisions; we are not questioning your decision.

MR. SPEAKER.— I have not given a ruling.

SRI R. GUNDU RAO.— You have quoted some decisions from the Parliamentary Procedures to the members. At the same time we never expect you to give the ruling. If you have not given your ruling, we have no grouse.

ಅಧ್ಯಕ್ಷರು.— ಏನು obligation of Law ಇದೆ, ಅದನ್ನು ನೀವು ಸರಿಯಾಗಿ satisfy ಮಾಡುತ್ತಾ ಇಲ್ಲ.

The adjournment motion should satisfy the obligation of Law. It is not a fit case for adjournment motion. There are chances available to discuss the same matter.

SRI VEERAPPA MOILY.— We have carefully gone through the quotations you quoted. You have quoted from Kaul and Shakdhar The matter which is centred around is the concept of *sub judice* Let us see whether the subject-matter of the adjournment motion which we have placed before this August House is covered under the cases which are filed before the court. This is a very crucial matter. Now the question is whether the subject matter which we have placed in the adjournment motion is the subject-matter of charge-sheet filed before the court. This is a short question. Now the cases filed in

Crime No. 87/79 is under section 359 IPC, that means the Police constable assaulated that lady; another case Crime No. 82/79 is under sections 147, 451, 307, that means attempt to murder, 324 injury or 337 or 427 unlawful Assembly.

MR. SPEAKER.— You are going into the details which are included in the cases. This is no doubt an important matter but legal impediment is there to admit it.

SRI VEERAPPA MOILY.— The firing has been ordered by the Sub-Inspector against the crowd of innocent people resulting in the death of three persons. This is a simple matter.

As far as this matter is concerned it is a matter to be clarified—whether the Police Constable is responsible for the incident that has happened outside the campus of the Police Station. The event which led to the Police firing, resulting in the death of 3 persons, is not included in the charge-sheet and there is no case pending. This case should not be misunderstood by the interpretation that the Government has given and thus put the House into confusion: The case is very clear. The second point is, certain reference is made to you with regard to this matter. The question is, the matter cannot be localised. Whether the Home Minister is responsible for this incident is a matter to be considered. The Chief Minister himself is the Home Minister. He has granted some *ex-gratia* payment not to all but only to the family members of the deceased. I am trying to bring to your kind notice that the Chief Minister should have acted in a judicious way which he has not done as he himself is the Home Minister.

MR. SPEAKER.— This is not a matter to be discussed. You are entering into a regular debate. You are telling the same points.

SRI VEERAPPA MOILY.— As a result of the firing by the Police, 3 persons died and 18 persons seriously injured. Is there any charge before the Court about the persons who are seriously injured. Let the Hon'ble Chief Minister say that there is a charge-sheet filed before the court. If he comes out with this information I will be convinced. The charge-sheet from their point of view is only F. I. R. after ascertaining the facts from the Sub-Inspector. This might have been position. Let the Hon'ble Chief Minister say that all the matters that have been raised by us are covered in the so called charge-sheet. Let him convince us. The law and order has not been enforced in the locality. The Police Sub-Inspector had taken the law into his own hands. There is a law if there be firing injury should be caused below the knee. But here deaths have occured outside the campus of the Police Station by

voilating the firing rules. The point is also not clear what are the events that led for the crowd assembling outside the campus of the Police Station, and who are responsible for this and whether these people had come to attack the Police Station.

SRI D. DEVARAJ URS.— Do they require the whole of this day for discussion on the subject ?

SRI VEERAPPA MOILY. –Therefore the adjournment motion should have precedence over the Calling Attention that has been listed in the Agenda. We are just convincing that this adjournment motion is a motion which should have precedence over the calling attention for which we are putting forth our arguments.

SRI D. DEVARAJ URS—We can only submit to the Speaker our view points regarding the admissibility or otherwise. We cannot force the Speaker to do this or that. Secondly, Sri Veerappa Moili, The Deputy Leader, wanted to know that in the firing incident, whether the charge sheet has covered all the persons responsible. Now judicial enquiry has been ordered to cover up the entire thing. This enquiry has to cover up that part of the information which is not covered by the Police charge-sheet. This has to be enquired into and report submitted. The enquiry has also to report what is the event that led the Police to resort to firing on that day *i.e.*, on 8th September 1979. The persons responsible, whether Police Personnel or outsiders, will have to be found out. The enquiry should also reveal whether the Police had taken prompt action to prevent the incident. The enquiry should also reveal whether there was any negligence on the part of the Police people.......

(*Interruptions*)

SRI G.P.VADEYARAJ—I am on a point of order. We are not following the rules and nobody is taking care of the rules and regulations of the House as stipulated under Rule 311. If we are not following the rules framed who else to observe them. The matter before us is something different. My point of order relates to the interpretation of the subject that has been discussed so far. The Constitution is there and the rules and procedures are there to guide us to regulate the business of the Assembly.

4-00 P.M.

Mr. Speaker, Sir, we have not yet come to the stage when the Chief Minister can give reply. He is trying to reply. The question that was raised before this House was that adjournment motion does not find a place in the agenda and therefore, whether it is legal to take it up now or not.

MR. SPEAKER.—You can raise it only when consent is given by the Speaker.

SRI G.P. VADEYARAJ—Your consent is second stage. To give consent or not to give consent is your privilege. We have not come to that stage. ಪ್ರಿಲಿಮಿನರಿ ಸ್ಟೇಜಿನಲ್ಲಿ ಸ್ವಲ್ಪ ಜಾಸ್ತಿ ಮಾತನಾಡಿರಬಹುದು ಅದು ನಮ್ಮ ತಪ್ಪಲ್ಲ, ಮತ್ತು ಮುಖ್ಯಮಂತ್ರಿಗಳವರು ಸಹ ಮಾತನಾಡುವಾಗ ಪರಿಮಿತಿ ಬಿಟ್ಟು ಮಾತನಾಡಿರಬಹುದು ಮತ್ತು ಮಾನ್ಯ ಸದಸ್ಯರುಗಳು ಮಾತನಾಡಿರಬಹುದು......That is exactly my point. My point is confined only to seeking your ruling on the Point of Order raised by Mr. Nanaiah as to whether a matter which is not listed in the agenda can be taken up as an adjourment motion. If you overlook this, it is not going to be a good precedent.

MR. SPEAKER—ಪ್ರಶ್ನೋತ್ತರ ವೇಳೆಯಾದ ಕೂಡಲೇ ಮುಂದಿನ ಅಜೆಂಡಾಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ಅಡ್ಜರ್ನ್‌ಮೆಂಟ್ ಮೋಷನ್ ವಿಚಾರ ಏನು ಅಂತ ತಿಳಿದುಕೊಳ್ಳುವುದಕ್ಕೆ ಎರಡು ಗಂಟೆಗಳ ಕಾಲ ಅವಕಾಶ ಮಾಡಿಕೊಟ್ಟಿದ್ದೇನೆ, ಇನ್ನು ನಾವು ಕಾಲಿಂಗ್ ಅಟೆನ್‌ಷನ್ ಹೋಗಿಲ್ಲವಲ್ಲಾ...

SRI G.P. VADEYARAJ—We have got to take cognizance of the rules.

SRI SPEAKER—I am stressing only that point. ರೂಲ್ಸ್ ರೆಗ್ಯುಲೇಷನ್ ಇದನ್ನೆಲ್ಲಾ ಫುಲ್‌ಫಿಲ್ ಮಾಡಬೇಕೇ ಬೇಡವೇ ಎನ್ನುವುದನ್ನು ನಾನು ಕೇಳುತ್ತಿರುವುದು ?

SRI G.P. VADEYARAJ—If you want to go to the next item, I don't know what to do in this House. ಶ್ರೀ ನಾನಯ್ಯರವರು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿದ್ದಾರೆ ಅದಕ್ಕೆ ತಮ್ಮ ರೂಲಿಂಗ್ ಕೊಡಬೇಕೋ ಬೇಡವೋ ಇಲ್ಲದಿದ್ದರೆ ನಾವು ಇಲ್ಲಿ ಸಭೆಯ ಕಾರ್ಯಕಲಾಪಗಳನ್ನು ಹೇಗೆ ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ ? We are going to argue the case.

SRI C.M. NANAIAH—Sir, I only obey the rules. I continue to speak within the frame of the rules. I will not go beyond the rules. A similar situation had arisen in the last session whether a matter which is not listed in the agenda can be taken up for discussion on the floor of the House. We argued for over $2\frac{1}{2}$ hours. The question was whether a notice that has been given to the Speaker can be construed as a matter within the cognizance of the House, or whether it can be taken up as a subject of the House or whether it can be taken up as a subject listed. The Hon. Speaker gave the ruling that the notice that has been given to the Speaker is not a matter that is before the House and even the preliminary discussion on the issue is not permissible. If that ruling is taken I think all the preliminary discussion about the adjourment motion notice is not sustained. I would request the senior hon. members on the other side not to press on issue which has no legal force.

MR. SPEAKER.— I have to clarify to the House. ೨೦ ಜನ ಸೈನ್ ಹಾಕಿ ಕೊಟ್ಟಿದ್ದಾರೆ, ಎಲ್ಲರೂ ನಾವು ಮಾತನಾಡಬೇಕು, ನಾವು ಮಾತನಾಡಬೇಕು ಎಂದರೆ ಉದ್ದೇಶವೇನು ?

ಒಬ್ಬ ಸದಸ್ಯರು—ಯಾರು ಕೇಳಿದರು ಸ್ವಾಮಿ ?

(Several members stood up)

ಶ್ರೀ ಜೆ. ಡಿ. ಸೋಮಪ್ಪ — ಮೈನಾರಿಟೀಸ್‌ನ್ನು, ಮುಸ್ಲಿಂ ಮತ್ತು ಹರಿಜನ ಗಿರಿಜನರನ್ನು ಉದ್ಧಾರ ಮಾಡುತ್ತೇವೆ ಕಾಪಾಡುತ್ತೇವೆ ಅಂತ ಹೇಳತಕ್ಕಂಥ ಸರ್ಕಾರ ಇವತ್ತು ಮುಸ್ಲೀಂರ ಕೊಲೆ ಮಾಡುತ್ತಿದೆಯಲ್ಲಾ ಸ್ವಾಮಿ? ಇದಕ್ಕೇನು ಹೇಳುತ್ತೀರಾ?

SRI S. BANGARAPPA—ಸ್ವಾಮಿ, ಇದು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದಕ್ಕೆ ಸಂಪೂರ್ಣವಾಗಿ ಎಲ್ಲಾ ಗುಣಗಳನ್ನೂ ಹೊಂದಿದೆ ಎನ್ನತಕ್ಕ ಅಭಿಪ್ರಾಯವನ್ನು ನಾವು ಪದೇ ಪದೇ ಹೇಳುತ್ತಿದ್ದೇವೆ.

Rules do not permit us to go in depth into the matter. ತಾವು ಒಂದು ವಿಷಯವನ್ನು ಹೇಳುತ್ತಿದ್ದೀರಿ ಅಥವಾ ಸುಮ್ಮನೇ ನಮ್ಮ ಗಮನಕ್ಕೆ ತರಬೇಕು ಎನ್ನತಕ್ಕ ಉದ್ದೇಶದಿಂದ ಪುಸ್ತಕದಲ್ಲಿರುವುದನ್ನು ಓದುತ್ತಿದ್ದರೋ ಅರ್ಥವಾಗಲಿಲ್ಲ. ನಾನು ಶಕ್ದರ್ ಅಂಡ್ ಕೌಲ್ ಪುಸ್ತಕವನ್ನು ಓದಿದ್ದೇನೆ ರೂಲ್ಸ್ ಅಾಡ್ ರೆಗ್ಯುಲೇಷನ್ ಗೊತ್ತಿದೆ ನಾನೇನೂ ಹೊಸಬನಲ್ಲ. ಇವತ್ತು ಯಾವುದು ನ್ಯಾಯಾಲಯಗಳಲ್ಲಿ ಚಾರ್ಜ್ ಶೀಟ್ ಇವೆ ಅಂಥವುಗಳ ಬಗ್ಗೆ ನಾವು ಇಲ್ಲಿ ಡಿಸ್ಕಸ್ ಮಾಡುವುದಕ್ಕೆ ಬರುವುದಿಲ್ಲ, ಬೇರೆ ಎಂಥಾ ವಿಷಯಗಳ ಬಗ್ಗೆ ನಾವು ಇಲ್ಲಿ ಡಿಸ್ಕಸ್ ಮಾಡುವುದಕ್ಕೆ ಬರುತ್ತದೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರುಗಳು ಬೇರ್ಪಡಿಸಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ, ಒಂದು ಸಂಪೂರ್ಣವಾದ ರಕ್ಷಣೆಯನ್ನು ನಾವು ಇವತ್ತು ಕಾನೂನು ಪ್ರಕಾರ, ನಿಯಮಾವಳಿ ಪ್ರಕಾರ ಮಾನ್ಯ ಅಧ್ಯಕ್ಷರಿಂದ ಬಯಸುತ್ತಿದ್ದೇವೆ. ತಾವು ಇಲ್ಲಿ ಅಧ್ಯಕ್ಷರಾಗಿ ಕುಳಿತಿರುವುದು ನಿಯಮಾವಳಿ ಪ್ರಕಾರ. ಆ ನಿಯಮಾವಳಿ ಪ್ರಕಾರ ತಾವು ಈ ಸದನದ ಕಾರ್ಯಕಲಾಪಗಳನ್ನು ನಡೆಸಬೇಕು ಮತ್ತು ಸದಸ್ಯರಿಗೆ ಇರತಕ್ಕ ಹಕ್ಕುಗಳನ್ನು ರಕ್ಷಣೆ ಮಾಡಬೇಕು. ಸದಸ್ಯರ ಹಕ್ಕುಗಳು ಮೊಟಕಾಗದಂತೆ ನೋಡಿಕೊಳ್ಳಬೇಕೆಂಬುದು ನಮ್ಮ ಬಯಕೆ. ಇನ್ನು ಈ ದಿನ ಸರ್ಕಾರ ಯಾವ ರೀತಿ ನಡವಳಿಕೆಯನ್ನು ಇಟ್ಟಿದೆ ಎಂಬ ವಿಷಯಕ್ಕೆ ಬರುತ್ತೇನೆ. ಇವತ್ತಿನ ದಿವಸ ಈ ಸದನದಲ್ಲಿ ಸರ್ಕಾರದ ಕಾರ್ಯಕಲಾಪಗಳ ಬಗ್ಗೆ ನಾವು ಯಾವ ರೀತಿ, ಯಾವ ದೃಷ್ಟಿಯಿಂದ ನೋಡಬೇಕೆಂಬ ಪ್ರಾಮುಖ್ಯವಾದ ವಿಷಯದ ಬಗ್ಗೆ ಈ ಸದನದ ಗಮನವನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದೇನೆ. ರೂಲ್ ೩೨೧ರ ಪ್ರಕಾರ ಸದಸ್ಯರುಗಳ ಹಕ್ಕನ್ನಾಗಲಿ, ಸದನದ ಹಕ್ಕನ್ನಾಗಲಿ, ವಿಷಯದ ಬಗ್ಗೆ ಚರ್ಚೆ ಮಾಡತಕ್ಕ ಹಕ್ಕನ್ನಾಗಲಿ ಮೊಟಕು ಮಾಡತಕ್ಕ ಹಕ್ಕು ಸರ್ಕಾರಕ್ಕೆ ಇಲ್ಲ. ಹಾಗೆ ನಡೆಯುವುದಾದರೆ ತಾವು ದಯಮಾಡಿ ನಮ್ಮ ರಕ್ಷಣೆಗೆ ಬರಬೇಕು; ಎಲ್ಲ ಸದಸ್ಯರ ರಕ್ಷಣೆಗೆ ಬರಬೇಕು. ತಮ್ಮ ಮೂಲಕ ಹೇಳುತ್ತೇನೆ, ಇವತ್ತಿನ ದಿವಸ ಅಲ್ಲಿರಬಹುದು, ನಾಳೆಯ ದಿವಸ ಇಲ್ಲಿಗೆ ಬರಬಹುದು; ಆದರೆ ಸದಸ್ಯರುಗಳ ಹಕ್ಕಿನ ರಕ್ಷಣೆಯ ಪ್ರಶ್ನೆ ಬಂದಾಗ......

ಅಧ್ಯಕ್ಷರು—ನೀವು ಬೇರೆ ವಿಷಯದ ಕಡೆ ಹೋಗುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ—ಪ್ರಿನ್ಸಿಪಲ್ ಡಿಸ್‌ಕಸ್ ಮಾಡದೆ ಜಡ್ಜ್‌ಮೆಂಟ್ ಬರೆಯುವುದಕ್ಕೆ ಸಾಧ್ಯವೇ ಇಲ್ಲ. ಪ್ರಿನ್ಸಿಪಲ್ ಅನ್ನು ಅರ್ಥಮಾಡಿಕೊಳ್ಳದೆ ತೀರ್ಪಿಗೆ ಬರತಕ್ಕ ಸಂದರ್ಭ ಇಲ್ಲಿ ಇಲ್ಲ. ಯಾವುದೇ ಒಂದು ವಿಷಯವನ್ನು ಚರ್ಚೆ ಮಾಡತಕ್ಕ ಹಕ್ಕು ಸದನಕ್ಕೆ ಇದ್ದಾಗ ಅದನ್ನು ಮೊಟಕು ಮಾಡತಕ್ಕ ಪ್ರಯತ್ನವನ್ನು ಯಾವ ವ್ಯಕ್ತಿಯೇ ಆಗಲಿ ಅಥವಾ ಸರ್ಕಾರವೇ ಆಗಲಿ ಮಾಡಿದಾಗ ಅದನ್ನು ಸಹಿಸುವುದಕ್ಕೆ ಯಾವ ಸದಸ್ಯರಿಗಾದರೂ ಸಾಧ್ಯವೇ ಎಂಬುದನ್ನು ತಮ್ಮ ಮೂಲಕ ಸಭೆಯ ಮುಂದಿಡುತ್ತೇನೆ ಮತ್ತು ತಮ್ಮನ್ನು ಕೇಳುತ್ತೇನೆ. ಇವತ್ತು ಸರ್ಕಾರ ಏನು ಮಾಡಿದೆ ಎಂದರೆ, ಒಂದು ನೋಟಿಫಿಕೇಷನ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ತ್ವರಿತವಾಗಿ ಓದಿದ್ದು ಏನು ಎಂದು ಗಲಾಟೆಯಾದ ಕಾರಣ ಅನೇಕ ಸದಸ್ಯರಿಗೆ ಗೊತ್ತಾಗಲಿಲ್ಲ. ಅವರು ಏನು ಓದಿದ್ದಾರೆಂಬುದು ನನಗೆ ಗೊತ್ತಿದೆ. ಕಮೀಷನ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ ಇನ್‌ಕ್ವೈರಿಗೆ ನೇಮಕ ಮಾಡಿದರೆ ಈ ಸದನಕ್ಕೆ ಆ ವಿಷಯದ ಬಗ್ಗೆ ಚರ್ಚೆ ಮಾಡತಕ್ಕ ಹಕ್ಕು ಬರುವುದಿಲ್ಲವೆಂದು ವಿಚಾರ ಮಾಡಿ ನಾವು ನಿರ್ಣಯವನ್ನು ಮಂಡನೆ ಮಾಡತಕ್ಕ ಪೂರ್ವದಲ್ಲಿ ಸರ್ಕಾರದವರು ತ್ವರಿತವಾಗಿ ಇವತ್ತು ತಾನೇ ಅಂದರೆ ೧೯ನೇ ಸೆಪ್ಟೆಂಬರ್ ೧೯೭೭ರಂದು ಹೊರಡಿಸಿರುವ ನೋಟಿಫಿಕೇಷನ್ ಅನ್ನು ತಂದು ಈ ಸಭೆಯ ಮುಂದೆ ಓದಿದರು.

ಕೆಲವು ಮಾನ್ಯ ಸದಸ್ಯರುಗಳು—ಷೇಮ್ ಷೇಮ್.

ಶ್ರೀ ಎಸ್. ಬಂಗಾರಪ್ಪ.—ಕಾಲಿಂಗ್ ಅಟೆನ್‌ಷನ್ ಕಾಪಿ, ಅದು ಇನ್ನೂ ಸದನದ ಸೊತ್ತು ಆಗಿಲ್ಲ, ಅದನ್ನು ಮೂವ್ ಮಾಡುವುದಕ್ಕೆ ಆಗಿಲ್ಲ. ಆದರೆ ಆ ನೋಟಿಫಿಕೇಷನ್‌ನಲ್ಲಿ 'we are ordering the judicial enquiry' ಎಂಬ ಮಾತನ್ನು ಹೇಳಿದ್ದಾರೆ. ಚರ್ಚೆ ಮಾಡುತ್ತಿರಬೇಕಾದರೆ ಅರ್ಜೆಂಟಾಗಿ ಗವರ್ನಮೆಂಟ್ ಆರ್ಡರ್ ಮಾಡಿ ರುಜು ಹಾಕಿ ಸದನಕ್ಕೆ ಇರತಕ್ಕ ಹಕ್ಕನ್ನು ಮೊಟಕು ಮಾಡತಕ್ಕ ಪ್ರಯತ್ನ ಮಾಡಿದ್ದಾರೆ.

(ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಷೇಮ್ ಷೇಮ್ ಎಂದರು)

SRI S. BANGARAPPA —This is highly unfair on the part of the Government or the Chief Minister.

SRI D. DEVARAJ URS.—I have never quoted this order to plead that there should be no discussion. I have only stated that the charge sheet has been filed and because it is sub-judice, it cannot be discussed.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರು ಕ್ವೋಟ್ ಮಾಡುತ್ತಾರೆ. ತಾವು ಮಾಡುವುದು ಅಲ್ಲ.

SRI D. DEVARAJ URS.—You may say 100 and odd things.

SRI S. BANGARAPPA.—You may also say 200 and odd things.

(Interruptions)

SRI S. BANGARAPPA —I am just questioning the propriety of this Government Order. This is my right. This is the right of the Opposition Party and the right of the House. ಅದನ್ನು ಚರ್ಚೆಗೆ ತೆಗೆದುಕೊಳ್ಳದಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಮಾಡುವುದು ಖಂಡಿತಾ ಸರಿಯಲ್ಲ. ಸರ್ಕಾರಕ್ಕೆ ಛೀಮಾರಿ ಹಾಕಬೇಕಾಗುತ್ತದೆ. ಇದು ವಿಚಾರ ಮಾಡಿ ಅಡ್ಜಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ, ಇವತ್ತು ತಾವು ರೂಲಿಂಗ್ ಒಪ್ಪಬಹುದು, ಬಿಡಬಹುದು ಅದನ್ನು ಒತ್ತಟ್ಟಿಗೆ ಇಡೋಣ. ಜನರ ಜೀವ ಎಷ್ಟು ಪ್ರಾಮುಖ್ಯವಾದುದು ಎಂಬ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ.........

(Interruptions)

ಶ್ರೀ ಎಸ್. ಬಂಗಾರಪ್ಪ.—ಸಂಬ್ಬಯ್ಯಶೆಟ್ಟರೇ ಒಂದು ಹೇಳುತ್ತೇನೆ, ಹಾ, ಹೋ ಎಂದು ೨-೩ ತಿಂಗಳು ಅಂದೀರಿ ಅಷ್ಟೆ.

(ಸಭೆಯಲ್ಲಿ ಗೊಂದಲ)

ಅಧ್ಯಕ್ಷರು.—ಯಾವ ವಿಷಯವನ್ನು ಮಾತನಾಡಬೇಕೋ ಅದನ್ನು ಬಿಟ್ಟು ಪಕ್ಷದ ವಿಚಾರಕ್ಕೆ ಏಕೆ ಹೋಗುತ್ತೀರಿ ? ಬೆಳಿಗ್ಗೆ ಏನು ನೋಟಿಸ್ ಕೊಟ್ಟಿದ್ದೀರಿ ಆ ವಿಷಯದ ಬಗ್ಗೆ ಕನ್‌ಸೆಂಟ್ ಕೊಡಬೇಕೇ ಬೇಡವೇ ? ಅದನ್ನು ಬಿಟ್ಟು ನೀವು ಎಲ್ಲಿ ಹೋಗುತ್ತಿದ್ದೀರಿ? ನೀವು ಹೋಗುತ್ತಿರುವ ದಾರಿ ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಆದ್ದರಿಂದ ಮೊದಲು ವಿಷಯವನ್ನು ಕನ್‌ಕ್ಲೂಡ್ ಮಾಡಿ ಎಂದು ಹೇಳುತ್ತಿದ್ದೇನೆ, ಅದನ್ನು ಬಿಟ್ಟು ಬೇರೆ ವಿಷಯಕ್ಕೆ ಹೋದರೆ ಹೇಗೆ ?

ಶ್ರೀ ಕೆ. ಬಿ. ಮಲ್ಲಪ್ಪ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಇವತ್ತು ಇಲ್ಲಿ ಕಾಂಗ್ರೆಸ್(ಐ)ನವರ ಮತ್ತು ಕರ್ನಾಟಕ ಕಾಂಗ್ರೆಸ್ಸಿನವರ ನಾಟಕ ನೋಡುವುದಕ್ಕೆ ಬಂದಿದ್ದೇವೆಯೋ ಅಥವಾ ಒಂದು ದಿನಕ್ಕೆ ಎಷ್ಟು ಹಣಖರ್ಚಾಗುತ್ತದೆ, ಆ ದುಡ್ಡಿಗೆ ಏನಾದರೂ ಸಾರ್ಥಕವಾಗುವ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಈ ಸದನಕ್ಕೆ ಬಂದಿದ್ದೇವೆಯೋ ಎನ್ನುವುದನ್ನು ಹೇಳಬೇಕು. ಪ್ರತಿ ನಿಮಿಷಕ್ಕೆ ಲಕ್ಷಾಂತರ ರೂಪಾಯಿ ಹಣ ಖರ್ಚಾಗುತ್ತಿದೆ. ಇದು ಬಡ ಬೋರೇಗೌಡನ ದುಡ್ಡು. ಈ ರೀತಿ

ಸರ್ಕಾರದವರು ಮಾಡುವುದು ಅನ್ಯಾಯ ಎಂಬುದನ್ನು ನಾವು ತೋರಿಸಬೇಕು ಮತ್ತು ಅವರೂ ಕೂಡ ನೋಡಿಕೊಳ್ಳಬೇಕು. ನಾವು ಇವರ ಹೊಡೆದಾಟವನ್ನು ನೋಡುವುದಕ್ಕೆ ಬಂದಿದ್ದೇವೆಯೇ ? ಬೆಳಿಗ್ಗೆಯಿಂದ ನೋಡಿ ನೋಡಿ ಸಾಕಾಗಿದೆ. ಆದ್ದರಿಂದ ತಾವು (ಅಧ್ಯಕ್ಷರು) ಸಭೆ ಸರಿಯಾದ ರೀತಿಯಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಅದಕ್ಕೆ ತಾವೂ ನನಗೆ ಸಹಾಯ ಮಾಡಬೇಕು, ಸಹಕಾರ ನೀಡಬೇಕು.

(ಸಭೆಯಲ್ಲಿ ಗೊಂದಲ)

MR. SPEAKER : Mr. Shamanna Has got a point of order. Let him speak.

SRI SHEERNALY M. CHANDRA SHEKAR.—Now the Chair may please permit me to speak. I must be given a chance to speak. I am a well behaved Member in this House but you are not giving me a chance to speak, So, I withdraw from the House. ಸದನ ಬಿಟ್ಟು ಹೋಗಲೋ ಅಥವಾ ನನಗೆ ಅವಕಾಶ ಕೊಡುತ್ತೀರಾ ? ಹೋಗಬೇಕೆಂದರೆ ಹೋಗುತ್ತೇನೆ.

ಅಧ್ಯಕ್ಷರು.—ಸ್ವಲ್ಪ ಕುಳಿತುಕೊಳ್ಳಿ, ಆಮೇಲೆ ಕರೆಯುತ್ತೇನೆ. ಈಗ ಮಾನ್ಯ ಶಾಮಣ್ಣನವರು ಹೇಳಲಿ.

ಶ್ರೀ ಟಿ. ಆರ್. ಶಾಮಣ್ಣ.—ಸನ್ಮಾನ್ಯ ಅಧ್ಯಕ್ಷರೇ, ಈ ನಮ್ಮ ಮಾನ್ಯ ಮಿತ್ರರು ಆ ಕಡೆ ಇದ್ದಾಗ ಮೂಕರ ಹಾಗೆ ಇದ್ದರು. ಈ ಕಡೆಗೆ ಬಂದಮೇಲೆ ಅವರಿಗೆ ಇಷ್ಟೊಂದು ಜಾಸ್ತಿ ಶಕ್ತಿ ಬಂದಿದೆಯಲ್ಲ ಅದು ಏನು ಎಂಬುದು ನಮಗೆ ಅರ್ಥವಾಗುತ್ತಾ ಇಲ್ಲ. ಎರಡನೆಯದಾಗಿ ನಮಗೆ ಇಲ್ಲಿ ದಿನಕ್ಕೆ ೫೦ ರೂಪಾಯಿಗಳ ಸಂಬಳ ಕೊಡುತ್ತಾರೆ. ಆದ್ದರಿಂದ ನಾನು ಇಲ್ಲಿ ಬಂದು ಸುಮ್ಮನೆ ಕುಳಿತುಕೊಂಡು ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಅದಕ್ಕಾಗಿ ತಾವು ಈ ವಿಚಾರದಲ್ಲಿ ಒಂದು ಟೈಮ್‌ಫಿಕ್ಸ್ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಸ್ವಾಮಿ, ನಾವು ಹರಿಜನರ ಮೇಲೆ ಆಗಿರತಕ್ಕಂಥ ಅತ್ಯಾಚಾರದ ಮೇಲೆ ಮಾತನಾಡುತ್ತಿದ್ದೇವೆ. ನೀವು ನಮಗೆ ರೈಲ್ವೆ ಪಾಸ್ ಕೊಡಬೇಕೇ ಬೇಡವೇ ಅಂತ ಮಾತನಾಡುತ್ತಾ ಇಲ್ಲ.

ಅಧ್ಯಕ್ಷರು.—ಯಾವ ವಿಷಯವನ್ನು ಮಾತನಾಡುತ್ತಿದ್ದೀರಿ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಮಾನ್ಯ ಶಾಮಣ್ಣನವರು ಬೆಂಗಳೂರಿನಲ್ಲಿ ಸೊಳ್ಳೆ ಕಾಟ ಜಾಸ್ತಿಯಾದಾಗ ಅದರ ಮೇಲೆ ಮಾತನಾಡುತ್ತಾರೆ. ಆದರೆ ಅಲ್ಲಿ ಹರಿಜನರು ಸತ್ತುಹೋಗಿದ್ದಾರೆ. ಅದರ ಬಗ್ಗೆ ಅವರು ಮಾತನಾಡಲಿಲ್ಲ.

ಶ್ರೀ ಧರ್ಮಸಿಂಗ್.—ಅವರು ಸೊಸೈಟಿಯಲ್ಲಿ ಸಕ್ಕರೆ ಸಿಕ್ಕಲಿಲ್ಲ ಎಂದರೆ ಕಾಲಿಂಗ್ ಅಟೆನ್ಷನ್ ನೋಟೀಸ್ ಕಳಿಸುತ್ತಾರೆ. ಆದರೆ ಇದು ಅವರಿಗೆ ಬೇಡ.

ಶ್ರೀ ರಾಮಚಂದ್ರರೆಡ್ಡಿ.—ಮಾನ್ಯ ಶಾಮಣ್ಣನವರು ಇಲ್ಲಿ ಗೌರವ ಘನತೆಯಿಂದ ಇರುತ್ತಾರೆ. ಅದನ್ನು ಅವರು ಕಲಿತುಕೊಳ್ಳಲಿ.

ಅಧ್ಯಕ್ಷರು.—ಮಾನ್ಯಸದಸ್ಯರುಗಳು ಏತಕ್ಕೆ ಈ ರೀತಿ ವರ್ತನೆ ಮಾಡುತ್ತಿದ್ದಾರೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಹೀಗೆ ಮೂರು ನಾಲ್ಕು ಜನ ಎದ್ದು ನಿಂತು ಷೌಟ್ ಮಾಡುವುದರಿಂದ ಏನು ಸಾಧಿಸಿದಹಾಗೆ ಆಗುತ್ತದೆ. ಈ ಸಭೆ ನಡೆಯುತ್ತಿದೆ ಎನ್ನುವ ಅರಿವು ಅವರಿಗೆ ಇದೆಯೋ ಇಲ್ಲವೋ ನನಗಂತೂ ಗೊತ್ತಾಗುತ್ತಾ ಇಲ್ಲ. I request the hon. Members to conduct them selves properly and maintain the decorum of this august House.

SRI SHEERNALY CHANDRA SEKHAR.—I am submitting my views on the point of order raised by hon Member Sri M. C. Nanaiah. Rule 50...

ಅಧ್ಯಕ್ಷರು.—ಅದು ಏನು ಎಂಬುದನ್ನು ಹೇಳಿಬಿಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ಈ ರೂಲ್ ನಂಬರ್ ೫೦ರಲ್ಲಿ ತಾವು ೫ನೇ ಕಲಮ್ಮನ್ನು ನೋಡಿ. ಅದರಂತೆ ಯಾವುದಾದರೂ ಒಂದು ಖಚಿತವಾದ ವಿಷಯ ಈ ಸದನದ ಮುಂದೆ ಬಂದು ಚರ್ಚೆಯಾಗಿದ್ದರೆ ಆ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ ಈ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ, ಆ ಕಾರಣಕ್ಕಾಗಿ The Chair should decide the priority that has to be given ; whether it is rule 50 or rule 63. That has to be decided.

ಅಧ್ಯಕ್ಷರು.—ಅದನ್ನೇ ನೀವು ೩೩ಗಂಟೆಯಿಂದ ಮಾತನಾಡುತ್ತಿರುವುದು. ಮುಂದಕ್ಕೆ ಹೇಳಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ಇವತ್ತು ಇಂತಹ ಒಂದು ಗುರುತರವಾದ ವಿಷಯ ಈ ಸದನದಲ್ಲಿ ಚರ್ಚೆಗೆ ಬರಬಾರದು ಎಂದು ಹೇಳತಕ್ಕಂಥ ಭಾವನೆ ನಮ್ಮ ಆಡಳಿತಪಕ್ಷದ ಮಿತ್ರರಿಗಿದೆ. ಏಕೆಂದರೆ it will expose the people of Karnataka. ಇವತ್ತು ಹರಿಜನರು, ಮುಸ್ಲಿಮರು ಕಾಂಗ್ರೆಸ್ಸಿನ ಕೈ ಗುರುತಿಗೆ ಓಟು ಕೊಟ್ಟಿದ್ದಾರೆ. ಆದ್ದರಿಂದ ನೀವು ಗೆದ್ದು ಬಂದಿದ್ದೀರಿ. You have no moral right to run this Government.

(ಇಂಟರಪ್ಷನ್ಸ್)

MR. SPEAKER.—Don't record.

* * *

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ಕರ್ನಾಟಕ ರಾಜ್ಯದಲ್ಲಿ ನಡೆದಂಥ ವಿಚಾರ ಇದು. ಇದೇ ಸಭೆಯಲ್ಲಿ ಮಾನ್ಯ ನಿಜಲಿಂಗಪ್ಪನವರು ಮಧುಗಿರಿ ಪ್ರಕರಣದಲ್ಲಿ ಸಂಪೂರ್ಣವಾದ ಚರ್ಚೆಗೆ ಅವಕಾಶ ಕೊಟ್ಟಿದ್ದರು.

ಅಧ್ಯಕ್ಷರು.—ಹಿಂದಿನ ಚರಿತ್ರೆ ನಮಗೆ ಬೇಡ, ನೇರವಾಗಿ ಹೇಳಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅದು ಇಲ್ಲಿ ನಡೆದಿರತಕ್ಕಂಥ ವಿಚಾರ. ಆದರೆ ಅಂತಹ ಗುರುತರವಾದ ವಿಚಾರವನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಕೊಡದ ರೀತಿಯಲ್ಲಿ ಇವತ್ತು ಒಂದು ನಿರ್ಬಂಧ ಮಾಡುವುದಾದರೆ ಇದರ ಅರ್ಥ ಏನು ? ಸರ್ಕಾರದಲ್ಲಿ ನಡೆಯುತ್ತಾ ಇರತಕ್ಕಂಥ ಅನೀತಿಯನ್ನು ಕರ್ನಾಟಕ ಜನತೆಯ ಗಮನಕ್ಕೆ ತರಬಾರದು ಎಂದು ಇದರ ಉದ್ದೇಶ. ೩೦ ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಈ ದೇಶದಲ್ಲಿ ಇದ್ದಾಗಲೂ ಕೂಡ ಇಂತಹ ಹರಿಜನರ, ಮುಸ್ಲಿಮ್ಮರ ಕೊಲೆ ನಡೆದಂಥ ವಿಚಾರ ಇರಲಿಲ್ಲ. ಇವತ್ತು ಏತಕ್ಕೆ ಹೀಗಾಯಿತು ?

ಅಧ್ಯಕ್ಷರು.—ನೀವು ಇದಕ್ಕೆ ರುಜು ಹಾಕಿಲ್ಲ. ನಿಮ್ಮ ಮಾತಿನಲ್ಲಿ ಪಾಯಿಂಟ್ ಆಫ್ ಆರ್ಡರ್ ಸಹ ಇಲ್ಲ. ನೀವು ರೂಲ್ಸ್ ಪ್ರಕಾರ ಮಾತನಾಡುತ್ತಿದ್ದೀರಾ ಎಂಬುದನ್ನು ಸ್ವಲ್ಪ ಯೋಚನೆ ಮಾಡಿ. ನೀವು ಅವರ ಕಾಲದಲ್ಲಿ ಹೀಗೆ ಆಯಿತು ಎಂದು ಕತೆ ಹೇಳುತ್ತಿದ್ದೀರಲ್ಲ ಅದನ್ನೇನೂ ಹೇಳುವುದು ಬೇಡ. ಮುಂದಕ್ಕೆ ಹೇಳಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ಈ ವಿಚಾರದಲ್ಲಿ ಹೇಳಿಕೆಗಳನ್ನು ಕೊಡುವುದರಲ್ಲಿ ಮುಗಿಯತಕ್ಕಂಥಾದ್ದಲ್ಲ ಇದು. ಕರ್ನಾಟಕರಾಜ್ಯದಲ್ಲಿ ಹಿಂದೆಂದೂ ಆಗದಂಥ, ಮುಂದೆ ಆಗದೇ ಇರತಕ್ಕಂಥ ಘಟನೆ ನಡೆದಿರುವುದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು ಇದು ನಮ್ಮ ಹಕ್ಕು ಇದೆ. ನಮ್ಮ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ತಾವು ಆ ಗದ್ದುಗೆಯಲ್ಲಿ ಕುಳಿತಿದ್ದೀರೆಂಬುದನ್ನು ನಾನು ನೆನಪು ಮಾಡಿಕೊಡುತ್ತಿದ್ದೇನೆ. ತಾವು ಗಮನಸೆಳೆಯುವ ಸೂಚನೆಗೆ ಮೊದಲು ಅಪ್ಪಣೆ ಕೊಟ್ಟರೆ ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ. ನಾವು ಬೆಳಿಗ್ಗೆಯಿಂದಲೂ ತಮ್ಮನ್ನು ಕೇಳಿಕೊಳ್ಳುತ್ತಾ ಇರುವುದೇನೆಂದರೆ ಈ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ತಾವು ಅವಕಾಶ ಕೊಡಬೇಡಿ ಎಂದು. ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳುವುದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ. ಅದರ ಬಗ್ಗೆ ತಾವು ಒಂದು ರೂಲಿಂಗನ್ನು ಕೊಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಿ. ಇಲ್ಲಿ ಅಡ್ಜರ್ನ್‌ಮೆಂಟ್

* Matter not recorded as directed by the Speaker.

ಮೋಷನ್ ತೆಗೆದುಕೊಳ್ಳುವುದಕ್ಕೆ ತಾವು ಒಂದು ತೀರ್ಮಾನ ತೆಗೆದುಕೊಳ್ಳದ ಹೊರತು ಈ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದು ಸೂಕ್ತವಲ್ಲ. ಅದು ಕಾನೂನುಬದ್ಧ ಅಲ್ಲ. ಅದು ಕಾನೂನು ಚೌಕಟ್ಟಿನಲ್ಲಿ ಇಲ್ಲ. ಇಷ್ಟೇ ನಮ್ಮ ಮಾತು. ಈ ಕಾರಣಕ್ಕಾಗಿ ಕರ್ನಾಟಕರಾಜ್ಯದಲ್ಲಿ ನಡೆಯುತ್ತಾ ಇರತಕ್ಕಂಥ ದುರಾಡಳಿತವನ್ನು ಎತ್ತಿ ತೋರಿಸುವುದಕ್ಕೆ ಒಂದು ಅವಕಾಶವನ್ನು ನಮಗೆ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಈ ಸದನದ ಮುಖಾಂತರ ಅರಿಕೆ ಮಾಡಿಕೊಳ್ಳುತ್ತೇನೆ.

೪–೩೦ ಪಿ.ಎಂ

ಶ್ರೀ ಗಟ್ಟಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಾನು ಈಗ ಸದನದಲ್ಲಿ ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ, ನನಗೆ ಈ ಕಲಂಗಳು, ಸೆಕ್ಷನ್‌ಗಳು ಗೊತ್ತಾಗುವುದಿಲ್ಲ? ನಾನು ನಮ್ಮ ಸದಸ್ಯರೆಲ್ಲರ ಆರೋಗ್ಯದ ವಿಚಾರವಾಗಿ ತಮ್ಮ ಗಮನವನ್ನು ಸೆಳೆಯಬೇಕಾಗಿದೆ. ನಮ್ಮ ಆರೋಗ್ಯದ ದೃಷ್ಟಿಯಿಂದ ಈ ಸದನದ ಹೊರಗಡೆ ಕಾಫಿ ಮತ್ತು ಟೀ ವ್ಯವಸ್ಥೆ ಮಾಡಲಾಗಿದೆ. ಅಂದಾಜು ಸಮಿತಿಯವರು ಮೊನ್ನೆ ವಿಮಾನದಲ್ಲಿ ಪ್ರವಾಸ ಹೋಗಿದ್ದರು. ನಾನೂ ಕೂಡ ಹೋಗಿದ್ದೆ. ವಿಮಾನವನ್ನು ಹತ್ತಿದ ತಕ್ಷಣ ಕಿವಿಯಲ್ಲಿಟ್ಟುಕೊಳ್ಳಲು ಪ್ರಯಾಣಿಕರಿಗೆ ಹತ್ತಿಯನ್ನು ಕೊಡುತ್ತಾರೆ. ಈ ಸದನದಲ್ಲಿ ಒಂದೇ ವಿಷಯದ ಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ತಮ್ಮ ಚಾಕಚಕ್ಯತೆಯನ್ನೆಲ್ಲ ಉಪಯೋಗಿಸಿ ಹೇಳಿದ್ದನ್ನೇ ಹೇಳುತ್ತಿದ್ದಾರೆ. ನಮ್ಮ ಆರೋಗ್ಯ ಬಹಳ ಮುಖ್ಯವಾದುದು. ನಮ್ಮ ಆರೋಗ್ಯದ ದೃಷ್ಟಿಯಿಂದ ಪ್ರತಿ ಸದಸ್ಯರಿಗೂ ಎರಡೆರಡು '' ಸಾರಿಡಾನ್ '' ಮಾತ್ರೆಯನ್ನೂ ಮತ್ತು ಸ್ವಲ್ಪ ಹತ್ತಿಯನ್ನೂ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತಿದ್ದ ಕಾಲದಲ್ಲಿ ಬೇರೊಬ್ಬ ಸದಸ್ಯರು ಮಾತನಾಡಲು ಎದ್ದಾಗ, ನನ್ನನ್ನು ತಾವು ಕುಳಿತುಕೊಳ್ಳಿ ಎಂದು ಹೇಳಿದ್ದರಿಂದ ನಾನು ಕುಳಿತುಕೊಂಡಿದ್ದೆ. ಈ ಸದನದಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆಯುತ್ತಾ ಇರುವ ಕಾಲದಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನು ಇದೇ ದಿವಸದ ತಾರೀಖನ್ನು ಹಾಕಿ ಹೊರಡಿಸುವುದರ ಸೂಕ್ತತೆಯನ್ನು ಮತ್ತು ಅದರ ಸಮಂಜಸತ್ವವನ್ನು ಕುರಿತು ಚಿಂತನೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ನಾವು ನಿಲುವಳಿ ಸೂಚನೆಯನ್ನು ನೀಡಿದ್ದು ಇವತ್ತಲ್ಲ. ನಿನ್ನೆಯೇ ಕೊಟ್ಟಿದ್ದೇವೆ ನಿನ್ನೆ ದಿವಸ ಬೇರೆ ಕಲಾಪವಿದ್ದುದರಿಂದ, ಈ ನಿಲುವಳಿ ಸೂಚನೆಯನ್ನು ನಿನ್ನೆ ದಿವಸ ಪ್ರಸ್ತಾಪಕ್ಕೆ ತೆಗೆದುಕೊಳ್ಳಲಾಗಲಿಲ್ಲ ಅಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಸಂಪೂರ್ಣ ಚರ್ಚೆ ಇಲ್ಲಿ ನಡೆದರೆ ಅದು ಸರ್ಕಾರದ ಗಮನಕ್ಕೆ ಬಂದು, ಅದರ ಬಗ್ಗೆ ಅವರು ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಅಧಿಕಾರಿಗಳಾಗಲೀ ಅಥವಾ ಸಾರ್ವಜನಿಕರಾಗಲೀ ತಪ್ಪಿತಸ್ಥರಿಗೆ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ನಾನು ಆಜ್ಞೆ ನೀಡುವ ಹಾಗಿಲ್ಲ, ನೀವು (ಆಡಳಿತ ಪಕ್ಷದ ಸದಸ್ಯರ ಕಡೆ ಕೈ ತೋರಿಸುತ್ತ) ಆಜ್ಞೆ ನೀಡುವ ಹಾಗಿಲ್ಲ. ಹಾಗಾದರೆ, ಆಜ್ಞೆಯನ್ನು ಯಾರು ಮಾಡಬೇಕು? ಯಾರು ಸರ್ಕಾರದ ಚುಕ್ಕಾಣಿ ಹಿಡಿದಿರುತ್ತಾರೆ, ಯಾರು ಆಡಳಿತದ ಜವಾಬ್ದಾರಿ ಹೊತ್ತಿರುತ್ತಾರೆ, ಅವರು ಮಾತ್ರ ಆಜ್ಞೆ ಮಾಡಬೇಕಾಗುತ್ತದೆ. ಇದು ಆ ಕಡೆ ಮತ್ತು ಈ ಕಡೆ ಕುಳಿತ ಸದಸ್ಯರಿಗೆ ಅರ್ಥವಾಗುವುದಿಲ್ಲ. ಈ ಸಭೆಯು ಪ್ರತಿಯೊಬ್ಬ ಸದಸ್ಯರ ಹಕ್ಕಿಗೆ ಚ್ಯುತಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ತಮಗಿದೆ. ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿಯಾಗುವ ಸಂದರ್ಭ ಬಂದಾಗ ಪರಿಣಾಮವೇನಾಗುತ್ತದೆಂಬುದನ್ನು ವಿಚಾರ ಮಾಡಬೇಕು. ೧೯ನೇ ತಾರೀಖನ್ನು ಹಾಕಿ ಆಜ್ಞೆ ಮಾಡುವುದರ ಮೂಲಕ ಈ ಸದನಕ್ಕೆ ಇರತಕ್ಕ ಹಕ್ಕನ್ನು ಮಾನ್ಯ ಮುಖ್ಯ ಮಂತ್ರಿಗಳು ಮೊಟಕು ಮಾಡಿದ್ದಾರೆ. ಆ ಆಜ್ಞೆಯನ್ನು ಈ ಸಭೆಯಲ್ಲಿ ಗಲಾಟೆಯಾಗುತ್ತಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಓದುತ್ತಿದ್ದರು. ಮತ್ತು ಈಗ ತನಿಖಾ ಆಯೋಗವನ್ನು ರಚಿಸಿರುವುದರಿಂದ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ವಿಷಯದ ಬಗೆ ಇದ್ದ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಅಷ್ಟರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ ಅದರಲ್ಲಿ ಒಂದು ವಾಕ್ಯವನ್ನು ಹಾಕಲಾಗಿದೆ. ಅದೇನೆಂದರೆ:— '' The Government are ordering a judicial enquiry with the District Magistrate as an Enquiry Officer '' ಇದರಿಂದ. ಯಾರು ಯಾರು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದಾರೆ ಅವರೆಲ್ಲರ ಹಕ್ಕನ್ನು ಮೊಟಕು ಮಾಡುವುದಾಗಿದೆ ಇದು. ಈ ಘಟನೆ ಬಗ್ಗೆ ತನಿಖೆ ಮಾಡಲು ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿ ಎಂದು ನಾವು ಹೇಳಿಲ್ಲ. ಶ್ರೀಷ

ನ್ಯಾಯಾಲಯದ ನ್ಯಾಯಾಧೀಶರೊಬ್ಬರಿಂದ ತನಿಖೆಯಾಗಲಿ ಎಂದು ವಾದ ಮಾಡತಕ್ಕ ಕಾಲದಲ್ಲಿ ನಾವಿರುವಾಗ ಸರ್ಕಾರದವರು ಜಿಲ್ಲಾ ನ್ಯಾಯಾಧೀಶರನ್ನು ತನಿಖೆ ಮಾಡಲು ನೇಮಕ ಮಾಡಿದ್ದಾರೆ. ಹೀಗೆ ಮಾಡುವುದರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಇರತಕ್ಕ ಹಕ್ಕನ್ನು ಮೊಟಕು ಮಾಡತಕ್ಕ ಮತ್ತು ಸದಸ್ಯರ ಹಕ್ಕಿಗೆ ಚ್ಯುತಿ ತರತಕ್ಕ ಕೆಲಸವನ್ನು ಸ್ಪಷ್ಟವಾಗಿ ಮಾಡಿದ್ದಾರೆ. ಇದರ ಬಗ್ಗೆ ಹಕ್ಕು ಚ್ಯುತಿ ಸೂಚನೆಯೊಂದನ್ನು ಈ ಕಡೆಯ ಸದಸ್ಯರಿಂದ ಸಹಿ ಹಾಕಿಸಿ ತಮಗೆ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸದನವನ್ನು ತಪ್ಪು ದಾರಿಗೆಳೆದಿದ್ದಾರೆ, ಈ ಸಭೆಯ ಹಕ್ಕುಗಳಿಗೆ ಅವರು ಚ್ಯುತಿ ತಂದಿದ್ದಾರೆ. ಆದುದರಿಂದ ನಾವು ಕೊಟ್ಟಿರುವ ಸೂಚನೆಯನ್ನು ಒಪ್ಪಿ, ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಬಗ್ಗೆ ಚರ್ಚೆಯನ್ನು ನಾಳೆ ರಜವಾದ್ದರಿಂದ ನಾಳಿದ್ದು ತೆಗೆದುಕೊಳ್ಳೋಣ. ಈಗ ನಮ್ಮ ಮುಂದಿರುವ ವಿಷಯಗಳು ಮೂರು. (೧) ಕ್ರಿಯಾಲೋಪ ಮತ್ತು ಮಾನ್ಯ ಒಡೆಯರಾಜ್ ಅವರು ಎತ್ತಿರುವ ವಿಷಯ. (೨) ನಿಲುವಳಿ ಸೂಚನೆಗೆ ನಿಯಮ ೫೦, ೫೧ ಮತ್ತು ೫೨ರ ಕೆಳಗೆ ಚರ್ಚೆಗೆ ಅವಕಾಶ ಕೊಡುವುದು ಮತ್ತು (೩) ಹಕ್ಕು ಚ್ಯುತಿ ನಿರ್ಣಯ.

ಅಧ್ಯಕ್ಷರು.—ನಾಲ್ಕು ದಿವಸವೂ ಹೀಗೇ ಕಳೆತುಬಿಡೋಣವೇನು?

ಶ್ರೀ ಎಸ್. ಬಂಗಾರಪ್ಪ.—ಈ ಸದನದ ಮತ್ತು ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದರೂ ಪರವಾಗಿಲ್ಲವೆಂದು ತಾವು ಭಾವಿಸುವುದಾದರೆ......

ಅಧ್ಯಕ್ಷರು.—ಅದು ನನ್ನ ಅಭಿಪ್ರಾಯವಲ್ಲ. ದಿನವೆಲ್ಲ ಹೀಗೆ ಆದರೆ ಸಾರ್ವಜನಿಕರ ಕೆಲಸವಾಗಬೇಕಲ್ಲ? ಈಗ ತಾವು ಕಳಿಸಿರುವ ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಪರಿಶೀಲಿಸಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಪರಿಶೀಲನೆ ಮಾಡಿ.

SRI R. GUNDURAO.—I know why you are so eager to clo·e the session. I know your difficulty. You have to go a·road on the 24th. In that case the Deputy Speaker is there. You need not worry abo it it.

MR. SPEAKER.—I am least bothered about it.

ಶ್ರೀ ಎಸ್. ಬಂಗಾರಪ್ಪ.—ಹಕ್ಕುಚ್ಯುತಿ ನಿರ್ಣಯದ ಮೇಲಿನ ಚರ್ಚೆ ವಿಷಯವನ್ನು ನಾಡಿದ್ದು ಪ್ರಸ್ತಾಪ ಮಾಡುತ್ತೇವೆ. ಈಗ ನಿಲುವಳಿ ಸೂಚನೆ ಬಗ್ಗೆ ರೂಲಿಂಗ್‌ನ್ನು ಬಹಳ ತ್ವರಿತವಾಗಿ ಮತ್ತು ವೇಗವಾಗಿ ಕೊಟ್ಟು ಮುಗಿಸಿ. ಕೆಲವು ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ. ಇದು ಸಣ್ಣ ವಿಷಯವಲ್ಲವೆಂದು ಇಂದು ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ನಾನು ಇಂದು ನೇರವಾಗಿ ಹೇಳಬೇಕಾಗಿದೆ. ಇಂದು ದೇಶದಲ್ಲಿ ಕಾನೂನು ಇದೆ. ಐ.ಪಿ.ಸಿ. ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕಾಗುತ್ತದೆ. ಆ ಕಾನೂನು ಜಾರಿಗೆ ಬರುವುದು ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗೆ ಹೊಡೆದಾಗ ಮಾತ್ರ. ಕಾನೂನಿಗೆ ತಲೆಬಾಗುವ ಜನ ಕರ್ನಾಟಕದಲ್ಲಿ ಇದ್ದಾರೆ ಎನ್ನುವುದನ್ನು ಯಾರೂ ಮರೆಯಬಾರದು. ಹಾಗೆಯೇ, ಯಾದ್ಗಿರಿಯಲ್ಲೂ ಇದ್ದಾರೆ ಎನ್ನುವುದನ್ನು ತಾವು ಮರೆಯಬಾರದು. ಇವತ್ತು ದೇಶದಲ್ಲಿ ಪೋಲೀಸ್ ಸಿಬ್ಬಂದಿ ಎಷ್ಟಿದೆ? ಮಿಲಿಟರಿ ಎಷ್ಟಿದ್ದೀತು? ಜನರನ್ನು ಸಂಪೂರ್ಣ ಹದ್ದುಬಸ್ತಿನಲ್ಲಿಡ್ತೀವಿ ಬಂದೋಬಸ್ತ್ ಮಾಡ್ತೀವಿ ಎಂದು ಹೇಳುವ ಬುದ್ಧಿಗೇಡಿ ಎಸ್.ಐ. ಬೆಂಬಲದೊಂದಿಗೆ ಸರ್ಕಾರ ರಚನೆಮಾಡಿರತಕ್ಕವರು ಯಾರೇ ಇರಲಿ ಇಂತಹ ಮಟ್ಟಕ್ಕೆ ಇಳಿಯಬಾರದು. ಜನ ಕಾನೂನನ್ನು ಕೈಗೆತ್ತಿಕೊಳ್ಳತಕ್ಕ ಪರಿಸ್ಥಿತಿ ಬರಬಾರದು. ಹೊಡೆಯುವ ಜನರನ್ನು ತಡೆಯುವುದಕ್ಕೆ ನಿಮ್ಮ ಹತ್ತಿರ ಯಾವುದಾದರೂ ಸೆಕ್ಷನ್ ಇದೆಯೆ?

ಶ್ರೀ ಎಂ. ಮಾರ್ಗದ ಮಲ್ಲಪ್ಪ.—ಕ್ರಿಮಿನಲ್ ಪ್ರೊಸೀಜರ್ ಕೋಡ್ ಇಲ್ಲವೆ?

ಶ್ರೀ ಎಸ್. ಬಂಗಾರಪ್ಪ.—ಪುಸ್ತಕದ ಬದನೆಕಾಯಿ! ಅಲ್ಲೇನಿದೆ?

ಅಧ್ಯಕ್ಷರು.—ಹಾಗೆಲ್ಲ ಮಾನ್ಯ ಸದಸ್ಯರು ಪದಗಳನ್ನು ಬಳಸಬಾರದು.

ಶ್ರೀ ಎಸ್ ಬಂಗಾರಪ್ಪ.—ಪುಸ್ತಕದ ಬದನೆಕಾಯಿ ಒಳ್ಳೆಯ ಪದ. ಮಾನ್ಯ ಅಧ್ಯಕ್ಷರೇ, ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಹೊಡೆದ ಮೇಲೆ ಕಾನೂನು ಜಾರಿಗೆ ಬರುತ್ತದೆ, ತಡೆ ಯಾವುದಕ್ಕೆ ಕಾನೂನು ಇಲ್ಲ.

ಅಧ್ಯಕ್ಷರು.—ತಮಗೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ ಸ್ವಲ್ಪ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಈಗ ಹೋಗಿರತಕ್ಕ ಜೀವಗಳನ್ನು ತಂದುಕೊಡುತ್ತೇವೆಂದು ಹೇಳಿದರೆ ನನಗೆ ಎಷ್ಟು ಕಾಲ ಬೇಕಾಗುತ್ತದೆಂದು ಉತ್ತರ ಕೊಡುತ್ತೇನೆ. ಮುಗಿಸಿಬಿಡುತ್ತೇನೆ, ಆದ್ದರಿಂದ ನ್ಯಾಯಾಂಗ ತನಿಖೆಗೆ ತಾವು ಆಜ್ಞೆ ಮಾಡಿದ್ದೀರಿ ಅದು ಹೈಕೋರ್ಟ್ ನ್ಯಾಯಾಧೀಶರಿಂದ ಆಗಬೇಕು. ಏತನ್ಮಧ್ಯೆ ಈ ಸದನದಲ್ಲಿ ಈ ವಿಷಯ ಚರ್ಚೆಯಾಗಬೇಕು. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಬೇಕು ನಿಮಗೂ ದೊಡ್ಡ ಕಿರೀಟ ಬರುತ್ತೆ. ತಾವು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಈ ವಿಷಯ ಪ್ರಸ್ತಾಪಕ್ಕೆ ಬಂದಾಗ ನಾನು ಈ ಸಭೆಯಲ್ಲಿ ಇರಲಿಲ್ಲ. ಶ್ರೀಮಾನ್ ಬೊಮ್ಮಾಯಿಯವರು ಗಮನಸೆಳೆಯುವ ಸೂಚನೆಯ ಮೇಲೆ ಈ ವಿಷಯವನ್ನು ಕಳುಹಿಸಿದ್ದಾರೆ. ಮತ್ತೊಂದು ಸೂಚನೆ ಏನೆಂದರೆ ಈ ಸಭೆಯಲ್ಲಿ ಈ ವಿಷಯ ಚರ್ಚೆಯಾಗಬೇಕೆಂದು ತಮ್ಮ ಅನುಮತಿ ಕೇಳಿದ್ದಾರೆಂದು ನನಗೆ ಗೊತ್ತಾಯಿತು. ಈ ಸಭೆ ನಿನ್ನೆ ಮತ್ತು ಇವತ್ತು ಸೇರದೇ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಆಜ್ಞೆ ಮಾಡುತ್ತಾ ಇರಲಿಲ್ಲ. ೮ನೇ ತಾರೀಖು ಈ ಘಟನೆಯಾದ ಮೇಲೆ ಸರ್ಕಾರ ಜೀವಂತ ಇತ್ತು ಎಂದು ತಿಳಿದುಕೊಂಡು ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ನಾವು ಈ ಸಭೆಯಲ್ಲಿ ಕಾಲಕಳೆಯುವುದಕ್ಕೆ ಬಂದಿಲ್ಲ. ಶಿಗ್ರೂಪಾಯಿಗಳನ್ನು ನಾವು ಪಡೆದು ಇಲ್ಲಿ ಕೂತಿರುವುದು ಈ ದೇಶದಲ್ಲಿ ಎಲ್ಲಿ ಅತ್ಯಾಚಾರ ನಡೆದರೂ ಅದನ್ನು ಪ್ರಸ್ತಾಪಮಾಡಲಿಕ್ಕೆ ಬಂದಿದ್ದೇವೆ. The Hon. Chief Minister has no courtesy even to reply to my letter. We cannot be tied down to that type of procedure. This issue must be discussed. Who is responsible for all these? How did these police officers have misuse their authority? There is a dereliction of duty on the part of police officers. This House is primarily responsible to discuss such matters.

ಇಲ್ಲಿ ಚರ್ಚೆಯಾಗತಕ್ಕಂಥಾದ್ದನ್ನು ಅವಾಯಿಡ್ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನೋಟಿಫಿಕೇಷನ್ ತೆಗೆದಿದ್ದರೆ, ಸದನ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ವಿಷಯ ಸದನದಲ್ಲಿ ಚರ್ಚೆಯಾಗಬೇಕು. ಸುಮಾರು ೩೦-೪೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಯಾವ ಪಕ್ಷದವರೇ ಆಗಿರಲಿ ನಿಷ್ಪಕ್ಷಪಾತವಾದ ತನಿಖೆಯಾಗಲೀ ಎಂದು ನಾನು ಪತ್ರ ಬರೆದಿದ್ದರೂ ಕೂಡ ಉತ್ತರ ಇಲ್ಲ. ಈ ಸಭೆ ಸೇರದೇ ಇದ್ದರೆ ನಿರ್ಣಯ ಆಗುತ್ತಾ ಇರಲಿಲ್ಲ. ಆದ್ದರಿಂದ ತಾವು ಚರ್ಚೆಗೆ ಅವಕಾಶಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಡಿ ದೇವರಾಜ ಅರಸ್.—ದೇವೇಗೌಡರು ಮಾತನಾಡದೇ ಇದ್ದರೆ, ನಾನು ಹೇಳುವುದು ಇರಲಿಲ್ಲ ಮಾನ್ಯ ದೇವೇಗೌಡರಿಗೆ ಇರುವಷ್ಟು ಆಸಕ್ತಿ ಸರ್ಕಾರಕ್ಕೂ ಇದೆ. ತಾವು ಹೇಳತಕ್ಕ ವಾದ ಸರಿಯಾದುದು ಅಲ್ಲ. ತಮಗೆ ಎಷ್ಟು ಕಳಕಳಿ ಇದೆಯೋ ಸರ್ಕಾರ ನಡೆಸತಕ್ಕ ನಮಗೂ ಅಷ್ಟೇ ಕಳಕಳಿ ಇದೆ. ಈಗಾಗಲೇ ಪ್ರಿವಿಲೇಜ್ ಮೋಷನ್ ತಂದಿದ್ದಾರೆ. ಅಡ್ಮಿಟ್ ಮಾಡುವುದು ಬಿಡುವುದು ತಮಗೆ ಸೇರಿದ ವಿಚಾರ ಈ ವಿಷಯ ಸದನದಲ್ಲಿ ಚರ್ಚೆಯಾಗಬಾರದು ಅಂತ ಹೇಳಿ ಹಠಾತ್ತನೆ ನೋಟಿಫಿಕೇಷನ್ ತಂದಿದ್ದಾರೆಂದು ಏನು ಆಪಾದನೆ ಮಾಡುತ್ತಿದ್ದಾರೆ. ಅದರಲ್ಲಿ ಸ್ವಲ್ಪವೂ ತಿರುಳಿಲ್ಲ. ಕಾರಣ ಏನು ಎಂದರೆ ನ್ಯಾಯಾಂಗ ತನಿಖೆ ಯಾವಾಗಲೂ ನಾರ್ಮಲ್ ಆಗಿ ಫೈರಿಂಗ್ ಆಯಿತು. ಡೆತ್ ಆಯಿತು ಅಂದರೆ ಆಗ ಮಾಡಬೇಕಾಗುತ್ತದೆ. ಈ ತಿಂಗಳು ೮ನೇ ತಾರೀಖು ಈ ಘಟನೆ ನಡೆದಿದೆ, ಕೂಡಲೇ ೧೦–೧೧ನೇ ತಾರೀಖು ಕ್ರಮ ತೆಗೆದುಕೊಳ್ಳಲಾಗಿದೆ. ಪ್ರೊಸೀಡಿಂಗ್ಸ್ ಫೈಲ್ ಇದೆ ತಾವು ಬೇಕಾದರೆ ನೋಡಿ ತೋರಿಸುವುದಕ್ಕೆ ತಯಾರಿದ್ದೇನೆ. ಹೊಸದಾಗಿ ಏನೂ ಮಾಡಿದ್ದಲ್ಲ. ರೆಫರೆನ್ಸ್ ಹೈಕೋರ್ಟಿಗೆ ಹೋಗಿ ಬರುವುದರಲ್ಲಿ ವಿಧಾನವಾಯಿತು. ಹೈಕೋರ್ಟಿನಿಂದ ನಿನ್ನೆದಿನ ಬಂದು ಇವತ್ತು ಜಾರಿಗೆ ಬಂದಿದೆ. ಇವರಿಗೆ ಅಷ್ಟು ಕುತೂಹಲ ಇದ್ದರೆ, ನಿನ್ನೆ ಏತಕ್ಕೆ ಸುಮ್ಮನೆ ಇದ್ದರು.

ಶ್ರೀ ಎಸ್. ಬಂಗಾರಪ್ಪ.—ಬೇರೆ ವಿಷಯ ನಡೆಯುತ್ತಾ ಇತ್ತು.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳಿದ್ದನ್ನು ಕೇಳಿದ್ದೇವೆ. ನಾವು ಹೇಳಿದ್ದನ್ನು ಬಹಳ ಜವಾಬ್ದಾರಿಯಿಂದ ಕೇಳಬೇಕಾಗುತ್ತದೆ. ನೀವು ಜನಗಳನ್ನು ಒಲಿಸಿಕೊಳ್ಳುವುದಕ್ಕೆ ಇಲ್ಲಿಂದ ಏನು ಮಾಡಿದರೂ ಪ್ರಯೋಜನ ಇಲ್ಲ.

ಶ್ರೀ ಎಸ್. ಬಂಗಾರಪ್ಪ.— ಅಲ್ಲಿಗೆ ಬನ್ನಿ?

ಶ್ರೀ ಡಿ. ದೇವರಾಜ ಅರಸ್.—ಟೈಮ್ ಬರುವವರೆಗೆ ಸಮಾಧಾನವಾಗಿ ಇರಿ. ನೀವು ಬರುತ್ತೀರೋ? ನಾವು ಬರುತ್ತೀವೊ? ನಿನ್ನೆ ದಿವಸ ಕಾಲಿಂಗ್ ಅಟೆನ್‌ಷನ್ ಇಲ್ಲಿ ಬಂದಿರತಕ್ಕುದ್ದು ಈ ವಿಷಯದಲ್ಲಿ ಹೆಚ್ಚಿಗೆ ವಿಚಾರ ಹೇಳಬೇಕಾಗಿ ಬಂದಾಗ ಹೇಳುತ್ತೇನೆ. ಇದು ಇವತ್ತು ಯೋಚನೆ ಮಾಡಿದ ವಿಚಾರವಲ್ಲವೆಂದು ಇಷ್ಟು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಮತ್ತೆ ಮತ್ತೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ಏತಕ್ಕೆ ತರಲಿಲ್ಲ ಎನ್ನುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಕೇಳುತ್ತಿದ್ದಾರೆ. ನಿನ್ನೆ ಶ್ರೀ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಲ್ಲ, ಸರ್ಕಾರದಿಂದ ಉತ್ತರ ಪಡೆಯಲಿಕ್ಕಾಗಲಿಲ್ಲ. ತಾವು ನಿನ್ನೆ ದಿವಸ ರೂಲಿಂಗ್ ಕೊಟ್ಟಿದ್ದೀರಿ. ನಾನು ಎತ್ತಿದ ಪ್ರಶ್ನೆಗಳ ಬಗ್ಗೆ ಮತ್ತು ಪತ್ರದ ಬಗ್ಗೆ ರಾಜ್ಯಪಾಲರವರು ಕಮ್ಯುನಿಕೇಷನ್ ಕಳುಹಿಸಿದ್ದಾರೆಯೆ ಹೇಗೆ? ಸಲಹೆ ಕೊಟ್ಟಿದ್ದಾರೆಯೆ ಹೇಗೆ ಎಂದು ಕೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು. ನಿನ್ನೆ ನಾವು ಎತ್ತಿದಂತ ಪಾಯಿಂಟುಗಳಿಗೆ ಸರ್ಕಾರ ಉತ್ತರ ಕೊಡಲು ಸಮರ್ಥವಾಗಿರಲಿಲ್ಲ. Constitutionally yesterday there was no Government. Therefore, we could not bring the adjournment motion We questioned your very existence. Today is the proper day. Wherever there is fire it is a compulsory legal provision to have a magisterial enquiry. ಮತ್ತೊಂದು ಮಾತು ಹೇಳಿದ್ದಾರೆ. ಮೊದಲಿಂದಲೂ ಪ್ರೊಸೆಸ್ ಆಗುತ್ತಿತ್ತು ಎಂದು ಹೇಳಿದ್ದಾರೆ ಫೈರಿಂಗ್ ಆದ ಮೇಲೆ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಆಗುವುದಕ್ಕೆ ಕಾನೂನು ಇದೆ. ನಮ್ಮ ಅಧ್ಯಕ್ಷರು ಪತ್ರ ಬರೆದಿದ್ದಾರೆ. ಯಾರು ಶಾಂತಿ ಕಮಿಟಿ ಮಾಡಿದರೋ, ಒಳ್ಳೆಯ ಕೆಲಸ ಮಾಡಿದರೋ, ಸರ್ಟಿಫಿಕೇಟ್ ಕೊಟ್ಟಿದ್ದೀರೋ ಅಂತಹವರನ್ನು ಹಿಡಿದು ಜೈಲಿಗೆ ಹಾಕಿದ್ದಾರೆ. ಇದರ ಬಗ್ಗೆ ಉತ್ತರ ಕೊಡಬಾರದೆ? ಪಾರ್ಟಿ ಅಧ್ಯಕ್ಷ, ಒಬ್ಬ ಕಾರ್ಯಕರ್ತ, ಶಾಂತಿ ಭಂಗವಾಗದಂತೆ ನೋಡಿಕೊಂಡವನನ್ನು ನಿಮ್ಮ ಪೋಲೀಸಿನವರು ಒಳಗೆ ಹಾಕುತ್ತಾರೆ. ಅದರ ಬಗ್ಗೆ ಅಧ್ಯಕ್ಷರು ಪತ್ರ ಬರೆದು ಅದನ್ನು ತಮಗೆ ಕಳುಹಿಸಿಕೊಡುತ್ತಾರೆ ಪತ್ರ ಬಂದಿದ್ದಕ್ಕೆ ಉತ್ತರ ಬರೆಯುವ ಒಂದು ಸೌಜನ್ಯ ಮುಖ್ಯ ಮಂತ್ರಿಗಳವರಿಗೆ ಇಲ್ಲದೇ ಇದ್ದರೆ ಹೇಗೆ.

ಶ್ರೀ ಡಿ. ದೇವರಾಜ ಅರಸ್.—ಉತ್ತರ ಕೊಡುತ್ತಿದ್ದೇವೆ. ಸಾವಿರಾರು ಉತ್ತರ ಕೊಟ್ಟಿದ್ದೇವೆ. ಇದಕ್ಕೂ ಕೊಡುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದ ಬಗ್ಗೆ ೧೧ನೇ ತಾರೀಖು ನಿರ್ಣಯ ಮಾಡಿದ್ದೇವೆಂದು ಹೇಳಿದರು ಫೈರಿಂಗ್ ಆದಾಗ ನಾರ್ಮಲ್ ಪ್ರೊಸೀಜರ್ ಮ್ಯಾಜಿಸ್ಟೀರಿಯಲ್ ಎನ್‌ಕ್ವೈಯಿರಿ ಮಾಡುವುದಕ್ಕೆ ಕಾನೂನು ಇದೆ. ಮ್ಯಾಜಿಸ್ಟೀರಿಯಲ್ ಎನ್‌ಕ್ವೈಯಿರಿ is not a Judicial enquiry. A Sub-Divisional Magistrate who is a Revenue officer normally he conducts such enquiries. ಮುಖ್ಯ ಮಂತ್ರಿಗಳು ೧೧ನೇ ತಾರೀಖು ಜುಡಿಷಿಯಲ್ ಎನ್‌ಕ್ವಯಿರಿಗೆ ನಿರ್ಣಯ ಮಾಡಿದ್ದರೆ, ಅವರು ಹೈಕೋರ್ಟಿಗೆ ಒಬ್ಬ ನ್ಯಾಯಾಧೀಶರನ್ನು ಬಿಡುಗಡೆ ಮಾಡಿಕೊಡಬೇಕೆಂದು ಪತ್ರ ಬರೆದಿದ್ದರೆ ಯಾವ ದಿವಸ ಬರೆದಿದ್ದಾರೆ ಅನ್ನುವುದನ್ನು ತಿಳಿಸಬೇಕು. ಈಗ ಇಲ್ಲಿ ಚರ್ಚೆ ಮಾಡಿ ಜನಗಳ ಮುಂದೆ ಓಟಿಗೆ ಹೋಗಲಿಕ್ಕೆ ಮಾತನಾಡುತ್ತಾರೆಂದು ಹೇಳಿದರು. ನಾನು ಅದನ್ನು ಹೇಳುವುದಿಲ್ಲ ಅವರು ಕೇಳಬಹುದು, ಮತ್ತೊಬ್ಬರು ಕೇಳಬಹುದು. ಆದರೆ ಇವೊತ್ತು ಈ ಸದನದಲ್ಲಿ ನಮ್ಮ ಕರ್ತವ್ಯ ಏನು ಇಂತಹ ತೀವ್ರವಾದ ವಿಷಯ ಬಂದಾಗ ಸದಸ್ಯರ ಕರ್ತವ್ಯ ಏನು? ಇವೊತ್ತು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ನೇರವಾಗಿ ಮಾಡತಕ್ಕ ಆಪಾದನೆ ಅವರ ಜವಾಬ್ದಾರಿ ಈ ಸಭೆ ಸೇರಲಿ ಸೇರದೆ ಇರಲಿ ಇಂತಹ ವಿಷಯಗಳು ಬಂದಾಗ,

ಅದರ ಬಗ್ಗೆ ನಿರ್ಣಯ ಮಾಡತಕ್ಕದ್ದು ಸರ್ಕಾರ ಆಳತಕ್ಕವರ ಜವಾಬ್ದಾರಿ. ಸರ್ಕಾರದ ಮುಖ್ಯಸ್ಥರಾಗಿ ಕೆಲಸ ಮಾಡತಕ್ಕ ಕಾಲದಲ್ಲಿ ಇಂತಹ ವಿಷಯದ ಬಗ್ಗೆ ತೀವ್ರವಾದ ಗಮನ ತೆಗೆದುಕೊಳ್ಳತಕ್ಕದ್ದು, ಹುಕುಂ ಮಾಡತಕ್ಕದ್ದು ಅವರ ಜವಾಬ್ದಾರಿ. ೧೧ನೇ ತಾರೀಖು ನಿರ್ಣಯ ಮಾಡಿದ್ದಕ್ಕೆ ಫೈಲ್ ಇದೆ ನೋಡಿ ಎಂದು ಹೇಳಿದರು. ಮಾನ್ಯ ಅಧ್ಯಕ್ಷರು ಅದನ್ನು ನೋಡಬೇಕು. ೧೧ನೆ ತಾರೀಖು ಪತ್ರ ಬರೆದಿದ್ದರೆ ಮುಖ್ಯ ಮಂತ್ರಿಗಳು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಿದ್ದಾರೆಂದು ಒಪ್ಪಿಕೊಳ್ಳುತ್ತೇನೆ. Again he is trying to misled the House..................ಅನ್ನುವ ಅಭಿಪ್ರಾಯ ಬರಬಾರದು. ದಯಮಾಡಿ ಮಾನ್ಯ ಅಧ್ಯಕ್ಷರು ನೋಡಬೇಕು. ಆತುರವಾಗಿ ರೂಲಿಂಗ್ ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ. ೧೧ನೇ ತಾರೀಖು ನಿರ್ಣಯ ಮಾಡಿದ್ದೇವೆಂದು ಹೇಳಿದರು. A le ter has gone from the Government to the High Court,

ಶ್ರೀ ಡಿ. ದೇವರಾಜ ಅರಸ್. —ಲೆಟರ್ ಬರೆಯುವುದು ನಿಧಾನವಾಗುತ್ತದೆ.

ಶ್ರೀ ಎಚ್. ಡಿ ದೇವೇಗೌಡ.—ಅಧ್ಯಕ್ಷರೇ, ಸದಸ್ಯರ ಹಕ್ಕು ಭಾದ್ಯತೆಯನ್ನು ಕಾಪಾಡಬೇಕು. ಯಾವತ್ತು ನಿರ್ಣಯ ಮಾಡಿದ್ದಾರೆ ಎನ್ನುವುದನ್ನು ಸಭೆಗೆ ತಿಳಿಸಬೇಕು.

SRI D DEVARAJ URS.—I have repeatedly stated that ordering judicial enquiry does not come in the way at all. The rule says that if a matter is in a court of law, then it becomes *sub judice*. That is what I quoted –which goes against the adjournment motion being moved or admitted. I have not quoted judicial enquiry as the matter which comes in the way. So, the question does not arise that judicial enquiry is there just to prevent hon. members from discussing the matter. That does not arise at all.

ಶ್ರೀ ಎಸ್ ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನ್ಯಾಯಾಧೀಶರಿಗೆ ಪತ್ರ ಯಾವಾಗ ಬರೆದರು ಅನ್ನುವುದನ್ನು ತಿಳಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ದೇವೇಗೌಡರಿಗೆ ಉತ್ತರ ಕೊಡುತ್ತಾ ಹೇಳಿದರು ಅಸೆಂಬ್ಲಿ ಕೂಡಿದ ಮೇಲೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಲಿಲ್ಲ ಅದಕ್ಕೆ ಮೊದಲು ಕ್ರಮ ಕೈಗೊಂಡಿದ್ದೇನೆ ೧೧ನೇ ತಾರೀಖು ಹೈಕೋರ್ಟಿಗೆ ಬರೆದಿದ್ದೇನೆ ಎಂದು. ಆದ್ದರಿಂದ ಮಾನ್ಯ ಅಧ್ಯಕ್ಷರು ರೆಕಾರ್ಡ್ ವೆರಿಫೈ ಮಾಡಬೇಕು. ೧೧ನೇ ತಾರೀಖು ನಿರ್ಣಯ ತೆಗೆದು ಕೊಂಡಿದ್ದೇವೆ ನೋಡಿ ಎಂದು ಹೇಳಿದರು. ೧೧ನೇ ತಾರೀಖು ಕಳುಹಿಸಿದ್ದರೆ ಸರಿ ಇಲ್ಲದಿದ್ದರೆ ಮಿಸ್‌ಲೀಡಿಂಗ್ ದಿ ಹೌಸ್ ಆಗುತ್ತದೆ. ಮಾನ್ಯ ಅಧ್ಯಕ್ಷರು ದಯಮಾಡಿ ಫೈಲ್ ತೆಗೆದುಕೊಂಡು ನೋಡಬೇಕು ಅವರು ಒಪ್ಪಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ನೋಡುತ್ತಾರೆ ಬಿಡಿ ಸ್ವಾಮಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮೊದಲೇ ಜುಡಿಷಿಯಲ್ ಎನ್‌ಕ್ವಯಿರಿಗೆ ಆರ್ಡರ್ ಮಾಡಿದ್ದೇವೆ ಬೇಕಾದರೆ ಫೈಲ್ ಇದೆ ನೋಡಿ ಅಂತ ಹೇಳಿದರು. ಯಾವ ತಾರೀಖು ಮಾಡಿದರು ಅನ್ನುವುದನ್ನು ತಿಳಿಸಬೇಕು.

ಶ್ರೀ ಡಿ. ದೇವರಾಜ್ ಅರಸ್.—೧೧ನೇ ತಾರೀಖಿನ ನಿರ್ಣಯಕ್ಕೆ ನಾನು ರುಜು ಹಾಕಿರತಕ್ಕದ್ದು ಡೇಟ್ ಇದೆ. ಇಂತಹ ದಿವಸ ಹೀಗೆ ಮಾಡಬೇಕು ಅಂತ. ಪ್ರಾಬಬಲಿ ೧೩ ಅಥವಾ ೧೪ನೇ ತಾರೀಖು ಅದು ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೪ನೇ ತಾರೀಖು ಆರ್ಡರ್ಸ್ ಮಾಡಿದ್ದರೆ.........

ಶ್ರೀ ಡಿ. ದೇವರಾಜ್ ಅರಸ್.—೧೧ನೇ ತಾರೀಖು ಚೀಫ್ ಸೆಕ್ರೆಟರಿಯವರಿಗೆ ಕಳುಹಿಸಿದ್ದಾರೆ. ಒನ್ ಆರ್ ಟೂ ಡೇಸ್ ಆಗುತ್ತದೆ. ನನಗೆ ಬಾದ ದಿವಸ ಉತ್ತರ ಹಾಕಿದ್ದಾರೆ. ಯಾವೊತ್ತು ಬರೆದಿದ್ದಾರೆ ಅದನ್ನು ನಾನು ವೆರಿಫೈ ಮಾಡಿ ಹೇಳಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ತಾವು ರೂಲಿಂಗ್ ಕೊಡುವುದಕ್ಕೆ ಮೊದಲು ಒಂದು ಪ್ರಶ್ನೆಯನ್ನು ತಮಗೆ ತಿಳಿಸಬೇಕಾಗಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅನೇಕ ಜನ ಮಾನ್ಯ ಮಿತ್ರರು ನಮ್ಮ ಕಡೆಯಿಂದ ಮತ್ತು ಆ ಕಡೆಯಿಂದ ಮಾತನಾಡಿದ್ದಾರೆ. ನಮ್ಮ

ಮುಂದೆ ಇರುವಂತಹ ಸಮಸ್ಯೆ ಅಷ್ಟು ಸುಲಭವಾಗಿ ಬಗೆಹರಿಯುವುದಿಲ್ಲ. ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡುವುದಕ್ಕೆ ಮೊದಲು ತಾವು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಇದು ಕಳೆದ ತಿಂಗಳು ೮ನೇ ತಾರೀಖು ನಡೆದ ಘಟನೆ ಅದರಲ್ಲಿ ಸತ್ತಂತವರು ಯಾರು ಅಂದರೆ ಮುಸಲ್ಮಾನರು ಮತ್ತು ಹರಿಜನರು ಮಾತ್ರ ಅನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ದೇಶದಲ್ಲಿ ಈಗಾಗಲೇ ಮೈನಾರಿಟಿ ಜನಗಳಿಗೆ, ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಸರಿಯಾದ ರಕ್ಷಣೆ ದೊರಕುತ್ತಿಲ್ಲ. ಇವೊತ್ತು ನಾನಾ ರೀತಿಯ ಒತ್ತಡಕ್ಕೆ ಒಳಗಾಗಿರತಕ್ಕಂತಹ ಜನರ ಮೇಲೆ ಪೋಲೀಸ್ ದೌರ್ಜನ್ಯವಾದರೆ ಅವರಿಗೆ ಸರಿಯಾದ ರೀತಿಯಲ್ಲಿ ಸರ್ಕಾರ ರಕ್ಷಣೆ ಕೊಡುತ್ತಿಲ್ಲ ಎನ್ನುವ ಕೂಗು ಅನೇಕ ಭಾಗಗಳಿಂದ ಕೂಗಿ ಬರುತ್ತಿದೆ. ನಮ್ಮ ರಾಜ್ಯದಲ್ಲಿ ಈ ತರಹ ಹರಿಜನರ ಮೇಲೆ, ಮುಸಲ್ಮಾನರ ಮೇಲೆ ಪೋಲೀಸ್ ಫೈರಿಂಗ್ ಇತ್ತೀಚೆಗೆ ಬಹಳ ಜಾಸ್ತಿಯಾಗಿದೆ. ಅದಕ್ಕೆ ಏನು ಕಾರಣ ಗೊತ್ತಿಲ್ಲ. ಮೊನ್ನೆ ದಿವಸ ನಡೆದಂಥ ಭದ್ರಾವತಿ ಪ್ರಕರಣ ಮುಂದೆ ಬರುತ್ತದೆ. ಚಾಮರಾಜಪೇಟೆಯಲ್ಲಿ ನಡೆದದ್ದು ಬರುತ್ತದೆ. ಭದ್ರಾವತಿಯಲ್ಲಿ ಒಬ್ಬ ಮುಸಲ್ಮಾನ ಜನಾಂಗಕ್ಕೆ ಸೇರಿದವನನ್ನು ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆದು ಗಲಾಟೆಯಲ್ಲಿ ಸತ್ತು ಹೋದ ಮೇಲೆ ಮುಸಲ್ಮಾನರು ಗಲಾಟೆ ಮಾಡುತ್ತಾರೆಂದು ತಿಳಿದು ಅವರ ಪಂಗಡದಿಂದಲೇ ಡಾಕ್ಟರ್ ಕರೆಯಿಸಿ ಮುಸಲ್ಮಾನ್ ಅಲ್ಲ ಎಂದು ಸರ್ಟಿಫಿಕೇಟ್ ಕೊಡಿಸಿದ ವಿಚಾರ ಮುಂದೆ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಾಗಲಿ, ಅಥವಾ ಸರ್ಕಾರದ ಜವಾಬ್ದಾರಿ ಹೊತ್ತಿರ ತಕ್ಕವರಾಗಲಿ, ಈ ರಾಜ್ಯದಲ್ಲಿ ಕಳೆದ ೮ನೇ ತಾರೀಖು ಒಬ್ಬ ಮುಸಲ್ಮಾನ್ ಮಹಿಳೆಯ ಮೇಲೆ ಸರ್ಕಾರದ ಜವಾಬ್ದಾರಿ ಹೊತ್ತಿರತಕ್ಕವರು, ಕಾನೂನು ರಕ್ಷಣೆ ಮಾಡತಕ್ಕವರು ಆಕೆಯನ್ನು ಅವಮಾನ ಮಾಡಿರುವ ಬಗ್ಗೆ ಜನ ತಪ್ಪು ಎಂದು ಪೋಲೀಸ್ ಸ್ಟೇಷನ್‌ಗೆ ಹೋದಾಗ ಕೇವಲ ಒಬ್ಬ ಸಬ್ ಇನ್ಸ್‌ಪೆಕ್ಟರ್, ಅಂದರೆ ಎಲ್ಲಿಯವರೆಗೆ ಸರ್ಕಾರದ ಹತೋಟಿ ತಪ್ಪಿದೆ ಅಂದರೆ ಕರ್ನಾಟಕದ ಚರಿತ್ರೆಯಲ್ಲಿ ಒಬ್ಬ ಸಬ್–ಇನ್ಸ್‌ಪೆಕ್ಟರ್ ಆರ್ಡರ್ ಮಾಡಿ ಗುಂಡು ಹೊಡೆದದ್ದು ಇರಲಿಲ್ಲ. ಈಗ ಮುಖ್ಯ ಮಂತ್ರಿಗಳು ಎಲ್ಲಿಗೆ ಬಂದು ತಲುಪಿದ್ದಾರೆ ಸಬ್‌ಇನ್ಸ್‌ಪೆಕ್ಟರ್ ಫೈರಿಂಗ್ ಮಾಡಲಿ, ಕಾನ್‌ಸ್ಟೇಬಲ ಗುಂಡು ಹೊಡೆಯಲ್ಲಿ ಸಾಮಾಜಿಕ ಜುಡಿಷಿಯಲ್ ಎನ್‌ಕ್ವಯಿರಿಗೆ ಆರ್ಡರ್ ಮಾಡುತ್ತಾರೆ. ಜುಡಿಷಿಯಲ್ ಎನ್‌ಕ್ವಯಿರಿ ಆರ್ಡರ್ ಮೊದಲು ೫ ಸಾವಿರ ಜನ ನ್ಯಾಯ ಕೇಳಲಿಕ್ಕೆ ಹೋದಾಗ ಅವರಿಗೆ ಗುಂಡು ಹೊಡೆದು ಸಾಯಿಸಿದ್ದಾರೆ. ಇವೊತ್ತು ಲಕ್ಷಾಧಿಪತಿಯಾಗಿರಲಿ, ಮಂತ್ರಿಯಾಗಿರಲಿ, ರಾಷ್ಟ್ರಪತಿಯವರಾಗಿರಲಿ, ಪ್ರಧಾನ ಮಂತ್ರಿಯವರಾಗಿರಲಿ, ಬಡವ ಆಗಿರಲಿ, ಹರಿಜನ ಆಗಿರಲಿ, ಮುಸಲ್ಮಾನ್ ಆಗಿರಲಿ ಎಲ್ಲರ ಪ್ರಾಣವೂ ಒಂದೇ. ಇವೊತ್ತು ೫ ಸಾವಿರ ರೂಪಾಯಿ ಕೊಟ್ಟ ಮಾತ್ರಕ್ಕೆ ಅದರಿಂದ ಆ ಕುಟುಂಬಕ್ಕೆ ಶಾಂತಿ ಸಿಕ್ಕುವುದಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ, ಕಡಿಮೆ ಅಂದರೆ ಒಂದು ಲಕ್ಷ ರೂಪಾಯಿ ಆದರೂ ಕೊಡಬೇಕಾಗಿತ್ತು ಎಂದು.

೫–೦೦ ಪಿ.ಎಂ.

ಸರ್ಕಾರದವರು ೫ ಸಾವಿರ ರೂಪಾಯಿಗಳನ್ನು ಕೊಟ್ಟರೆ ಅದು ಶವಸಂಸ್ಕಾರ ಮತ್ತು ತಿಥಿಯನ್ನು ಸಹ ಮಾಡುವುದಕ್ಕಾಗುವುದಿಲ್ಲ. ಆದ ಕಾರಣ ಪ್ರತಿ ಕುಟುಂಬದವರಿಗೂ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕು. ಏಕೆಂದರೆ ಅವರೆಲ್ಲರೂ ಬಡ ಕುಟುಂಬದವರಾಗಿದ್ದಾರೆ ಮತ್ತು ಕೂಲಿಯಿಂದಲೇ ಜೀವನ ಮಾಡುವವರಾಗಿದ್ದಾರೆ.

ಅಧ್ಯಕ್ಷರು.—ಇದನ್ನೆಲ್ಲಾ ತಾವು ಬೇರೆ ಸಂದರ್ಭದಲ್ಲಿ ಮಾತನಾಡಿ.

ಶ್ರೀ ಆರ್. ಗುಂಡೂರಾವ್.—ಮಾನ್ಯ ದೇವೇಗೌಡರು ಹೇಳಿದಂತೆ ಈಗ ಈ ಸಭೆ ಸೇರದಿದ್ದರೆ ಸರ್ಕಾರದವರು ಇಂತಹ ಒಂದು ನಿರ್ಣಯ ತೆಗೆದುಕೊಳ್ಳುತ್ತಿರಲಿಲ್ಲ. ನೆನ್ನೆ ದಿವಸ ಈ ಸಭೆ ಸೇರಿದ ಮೇಲೆ ಇದರ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ. ಅದರಲ್ಲಿ ನ್ಯಾಯಾಂಗ ತನಿಖೆಗೆ ಆರ್ಡರ್ ಮಾಡುತ್ತೇವೆಂದು ಹೇಳಿದ್ದಾರೆಯೇ ಹೊರತು ನ್ಯಾಯಾಂಗ ತನಿಖೆಗೆ ಆರ್ಡರ್ ಮಾಡಿದ್ದೇವೆಂದು ಹೇಳಿಲ್ಲ. ಆದ ಕಾರಣ ಇದು ಬಹಳ ಗಂಭೀರವಾದಂಥ ಸಮಸ್ಯೆಯಾಗಿದೆ. ಇಂತಹ ಘಟನೆ ನಮ್ಮ ರಾಜ್ಯದಲ್ಲಿ ಇನ್ನು ಮುಂದೆ ಬೇರೆ ಕಡೆಗಳಲ್ಲಿ ನಡೆಯದಂತೆ ನಾವು ಕ್ರಮ ತೆಗೆದುಕೊಳ್ಳಬೇಕಾಗಿದೆ. ಯಾವ ಸ್ಥಳಗಳಲ್ಲಿಯೂ ಇಂತಹ ಘಟನೆಗಳು ನಡೆಯಬಾರದು. ಆದ್ದರಿಂದ ಇದರ ಬಗ್ಗೆ ಇಲ್ಲಿ ತಾವು ಚರ್ಚೆ ಮಾಡಲು ನಮಗೆ ಅವಕಾಶ ಮಾಡಿಕೊಡಬೇಕು. ಚರ್ಚೆಗೆ ಅವಕಾಶ ಮಾಡಿಕೊಡುವುದರ ಜೊತೆಗೆ ಈ ಸದನದ ಸದಸ್ಯರನ್ನು ಒಳಗೊಂಡಂತಹ ಒಂದು ಸಮಿತಿಯನ್ನು ಸಹ ನೇಮಕ ಮಾಡಬೇಕು.

ಆ ಸಮಿತಿಯವರು ಈ ಘಟನೆ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಒಂದು ವರದಿಯನ್ನು ತಯಾರು ಮಾಡಬೇಕು. ಮುಖ್ಯವಾಗಿ ನಾವು ಕಳುಹಿಸಿ ಕೊಟ್ಟಿರುವ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಏನೆಂದರೆ, ಇದರ ಬಗ್ಗೆ ನ್ಯಾಯಾಂಗ ತನಿಖೆಗೆ ಆರ್ಡರ್ ಮಾಡುತ್ತೇವೆ ಎಂದು; ಅದಕ್ಕೆ ಮೊದಲು ಇಲ್ಲಿ ನಮ್ಮಗಳ ಅಭಿಪ್ರಾಯವನ್ನು ಸರ್ಕಾರದವರು ತೆಗೆದುಕೊಂಡರೆ ಮುಂದೆ ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಟರ್ಮ್ಸ್ ಆಫ್ ರೆಫರೆನ್ಸ್ ಯಾವ ರೀತಿ ಇರಬೇಕೆಂಬ ಬಗ್ಗೆ ನಮ್ಮಗಳ ಅಭಿಪ್ರಾಯ ತೆಗೆದುಕೊಳ್ಳುವುದು ಒಳ್ಳೆಯದು ಆದಕಾರಣ ಮಾನ್ಯ ಅಧ್ಯಕ್ಷರು ಈ ವಿಷಯವನ್ನು ಇಲ್ಲಿಗೇ ಮೊಟಕು ಮಾಡದೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಮಾನ್ಯ ಅಧಕ್ಷರು ಇದರ ಬಗ್ಗೆ ಅತುರದ ನಿರ್ಣಯ ತೆಗೆದುಕೊಳ್ಳದೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ, ತಮ್ಮ ಕಡೆಗೆ ಕಳುಹಿಸಿಕೊಟ್ಟಿರುವ ನಿಲುವಳಿ ಸೂಚನೆಗೆ ನಾನು ಸಹ ರುಜು ಹಾಕಿದ್ದೇನೆ. ಆದಕಾರಣ ನಾನು ಎರಡು ನಿಮಿಷಗಳ ಕಾಲ ಮಾತನಾಡುತ್ತೇನೆ. ಈ ಘಟನೆಯಲ್ಲಿ ೩ ಜನರು ಸತ್ತಿದ್ದಾರೆ. ಈ ರೀತಿ ಸತ್ತವರ ಹೆಂಡತಿ ಮಕ್ಕಳು ನಮ್ಮ ಸರ್ಕಾರವನ್ನು ದೂಷಣೆ ಮಾಡುತ್ತಿದ್ದಾರೆ. ಅವರಿಗೆ ಪರಿಹಾರ ದೊರಕಿಸಿಕೊಡುವುದು ನಮ್ಮ ಕರ್ತವ್ಯವಾಗಿದೆ. ಏಕೆಂದರೆ ೫ ವರ್ಷಗಳ ಕಾಲ ನಿಮ್ಮನ್ನು ಕಾಪಾಡುತ್ತೇವೆಂದು ನಾವು ಅವರಿಗೆಲ್ಲಾ ವಾಗ್ದಾನ ಕೊಟ್ಟು ಈ ಸಭೆಗೆ ಆರಿಸಿ ಬಂದಿದ್ದೇವೆ, ಆದರೆ ಬೇಲಿಯೇ ಎದ್ದು ಹೊಲ ಮೈದರೆ ಆ ಜನರು ಯಾವ ರೀತಿ ಜೀವನ ಮಾಡಬೇಕು? ಕಾನೂನು ಪರಿಪಾಲನೆ ಮಾಡುವಂತಹ ಜನರಿಂದಲೇ ಇಂತಹ ಒಂದು ಕೆಲಸ ನಡೆದಿದೆ. ಜನರಿಗೆ ರಕ್ಷಣೆ ಕೊಡುವಂತಹ ಪೋಲೀಸಿನವರೇ ಇಂತಹ ಒಂದು ಕೃತ್ಯವನ್ನು ನಡೆಸಿದ್ದಾರೆ. ಇದು ಸರಿಯಲ್ಲವೆಂದು ಕೇಳುವುದಕ್ಕೆ ಹೋದಂಥ ಜನರ ಮೇಲೆ ಗುಂಡು ಹಾರಿಸಿದ್ದಾರೆ. ಗುಂಡೇಟಿನಿಂದ ಗಾಯಗೊಂಡಂತಹ ೬ ಜನರು ಇನ್ನೂ ಆಸ್ಪತ್ರೆಯಲ್ಲಿದ್ದಾರೆ. ಸರ್ಕಾರದ ಆಸ್ಪತ್ರೆಯಲ್ಲಿ ಈ ಜನರನ್ನು ಸೇರಿಸಲು ಸ್ಥಳಾವಕಾಶವಿಲ್ಲವೆಂದು ಖಾಸಗೀ ಆಸ್ಪತ್ರೆಯಲ್ಲಿ ಸೇರಿಸಲಾಯಿತು. ಅಲ್ಲಿ ೩ ಸಾವಿರ ರೂ.ಗಳವರೆಗೆ ಬಿಲ್ಲು ಮಾಡಿದ್ದಾರೆ, ಬಿಲ್ಲು ಹಣ ಕಟ್ಟದವರನ್ನು ಹೊರಗೆ ಹಾಕಿದ್ದಾರೆ. ಅಂತಹವರನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಯಾವುದೇ ಒಂದು ಸಮಾರಂಭ ನಡೆದರೆ ೩ ಜನ ಮಂತ್ರಿಗಳು ಹೋಗುತ್ತಾರೆ. ಆದರೆ ಈ ಜನರನ್ನು ನೋಡಲು ಯಾವ ಒಬ್ಬ ಮಂತ್ರಿಯೂ ಹೋಗಿಲ್ಲ. ನನಗೆ ಹರಿಜನರು ಮತ್ತು ಮುಸ್ಲೀಮರೇ ಹೆಚ್ಚಿನ ರೀತಿಯಲ್ಲಿ ಮತ ಕೊಟ್ಟಿದ್ದಾರೆ. ಅಂತಹ ಜನರೇ ಈ ಪ್ರಕರಣದಲ್ಲಿ ಸತ್ತಿದ್ದಾರೆ. ಇದನ್ನು ನೋಡಿ ನನಗೆ ದುಃಖವಾಗುತ್ತಿದೆ. ಆದ ಕಾರಣ ನಾನು ತಮ್ಮ ಮೂಲಕ ಸರ್ಕಾರದವನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಈ ಪ್ರಕರಣದಲ್ಲಿ ಸತ್ತ ಜನರ ಸಂಸಾರದವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು. ಅಲ್ಲಿಯವರೆಗೆ ನಾನು ಈ ಸದನದ ಮುಂದೆ ಧರಣಿ ಹೂಡುತ್ತೇನೆ.

MR. SPEAKAR.—Sufficient time has been taken on the admissibility of the Adjournment Motion. The matter may be treated as closed. As a similar matter is before the House, I with-hold my consent to the Adjournment Motion.

(At this stage several hon. members from the opposition side sat in the aisle of the House)

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೇ, ಈ ವಿಷಯದ ಮೇಲೆ ವಿವರವಾದಂಥ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡುವುದು ಒಳ್ಳೆಯದು. ಮತ್ತು ಸರ್ಕಾರ ಕೂಡ ಯಾವುದೇ ಪಕ್ಷ ರಾಜಕೀಯ ಎಂದು ನೋಡದೆ ಚರ್ಚೆಗೆ ಒಪ್ಪಿಕೊಳ್ಳಬೇಕು. ಯಾವುದೇ ಪ್ರೆಜುಡೀಸ್ ಮೇಲೆ ನಿಲ್ಲುವುದು ಬೇಡ. ಇದು ಕಾಂಗ್ರೆಸ್ (ಐ) ಅಥವಾ ಜನತಾ ಪಕ್ಷದ ಪ್ರಶ್ನೆಯಲ್ಲ ಮುಖ್ಯಮಂತ್ರಿಗಳು ಈಗಾಗಲೇ ನ್ಯಾಯಾಂಗ ತನಿಖೆಗೆ ಒಪ್ಪಿದ್ದಾರೆ. ಅದಕ್ಕೆ ಮೊದಲು ಇಲ್ಲಿ ವಿವರವಾದಂಥ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾವು ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಅವಕಾಶವಾಗುತ್ತದೆ ಮತ್ತು

ಆದರಿಂದ ಟಿಪ್ಸ್ ಆಫ್ ರೆಫರೆನ್ಸ್ ಹಾಕುವುದಕ್ಕೆ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಏಕೆಂದರೆ ಸರ್ಕಾರದ ಕಾರ್ಯಕಲಾಪಗಳನ್ನು ನಡೆಸಬೇಕಾಗಿದೆ. ಆ ಕಾರ್ಯಕಲಾಪಗಳ ಜೊತೆಗೆ ಇವತ್ತೂ ಎರಡು ಗಂಟೆಗಳ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಯಾವ ತೊಂದರೆಯೂ ಬರುವುದಿಲ್ಲ. ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ಸರ್ಕಾರಕ್ಕೆ ದೊಡ್ಡ ಬಾಧೆಯಾಗುತ್ತದೆಂದು ನಾನು ತಿಳಿದುಕೊಂಡಿಲ್ಲ ಆದಕಾರಣ ಇದರ ಚರ್ಚೆಗೆ ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಮಾನ್ಯ ದೇವೇಗೌಡರು ವಿನಂತಿ ಮಾಡಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದರು. ಅದನ್ನೇ ನಾನು ಹೇಳುವುದು. ಅದೇ ವಿನಂತಿಯನ್ನು ಆ ಕಡೆ ಇರತಕ್ಕಂಥ ಮಾನ್ಯ ಸದಸ್ಯರಿಗೆ ಮಾಡಿ ಎಂದು ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತೇವೆಂದು ಹೇಳಿ, ಇನ್ನೊಂದು ಕಡೆ ಕಾನೂನನ್ನು ಮುರಿಯತಕ್ಕಂಥ ಈ ರೀತಿ ಕೆಲಸ ಮಾಡುವುದು ಸರಿಯಲ್ಲ. ಇನ್ನೊಂದು ವಿಚಾರ ಬಹಳ ತೀವ್ರವಾದ ವಿಚಾರವೆಂದರೆ ಯಾವುದೇ ವಿಚಾರವನ್ನು ಅಡ್ಜರ್ನ್‌ಮೆಂಟ್ ಮೋಷನ್ ಮುಖಾಂತರ ಮಾಡುತ್ತೇವೆಂದು ಹೇಳಿದರೇ ಅದು ಆಗುವುದಿಲ್ಲ. ಅದಕ್ಕೆ ಈ ಸಭೆಯಲ್ಲಿ ಟೈಮ್ ತೆಗೆದುಕೊಂಡು ಮಾಡಬೇಕಾಗಿರುತ್ತದೆ. ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಂಡು ವಿಷಯವನ್ನು ಚರ್ಚೆಮಾಡುತ್ತೇವೆ ಎನ್ನುವುದರ ಬಗ್ಗೆಯೂ ರೂಲಿಂಗ್ ಕೊಟ್ಟಿದ್ದಾರೆ. ಆದರೆ ಎಷ್ಟು ಕಾರ್ಯಕಲಾಪಗಳು ನಡೆಯಬೇಕು ಎನ್ನುವುದು ಇದೆಯೋ ಕಾನೂನು ಚೌಕಟ್ಟಿನಲ್ಲಿ ಕೆಲಸಗಳು ನಡೆಯಬೇಕಾಗಿರುತ್ತದೆ ಅದನ್ನು ಮಾನ್ಯ ದೇವೇಗೌಡರು ಹೇಳಲಿ. ಸಭೆಯ ಕಾರ್ಯಕಲಾಪಗಳು ಬೇಕಾದಷ್ಟು ಇರುತ್ತದೆ. ಜನರಿಗೆ ಉಪಯುಕ್ತವಾದ ಕಾನೂನುಗಳು ಇರುತ್ತವೆ. ಅದನ್ನೇ ಕಾರ್ಯರೂಪಕ್ಕೆ ತರಲು ತಮ್ಮ ಸಹಕಾರಬೇಕು, ಸಹಾಯಬೇಕು ಎಂದು ಈ ಸಂದರ್ಭದಲ್ಲಿ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೆ ಗೌಡ —ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಮುಖ್ಯಮಂತ್ರಿಗಳು ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಸಭೆಯ ಕಾರ್ಯಕಲಾಪವನ್ನು ಮುಂದಿಟ್ಟುಕೊಂಡು ಸೂಚನೆ ಕೊಟ್ಟಿದ್ದಾರೆ. ಬೇರೆ ಯಾವುದೇ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆಯಿಲ್ಲ. ತಾವು ತಮ್ಮ ಕಾನೂನು ವ್ಯಾಪ್ತಿಯಲ್ಲಿ ಚರ್ಚೆ ತೆಗೆದುಕೊಳ್ಳುವುದಕ್ಕೆ ಈವತ್ತು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ತಮ್ಮನ್ನು ಕೇಳಿಕೊಳ್ಳುತ್ತೇನೆ ಒಂದು ನಿರ್ಣಯವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅವನ್ನು ತೀವ್ರವಾಗಿ ನೋಡಬೇಕು. ಏತಕ್ಕೆಂದರೆ ಮುಂದೆ ಪಾರ್ಲಿಮೆಂಟ್ ಚುನಾವಣೆ ನಡೆಯುವುದು ಇರುತ್ತದೆ. ಬಹುಶಃ ಮಾನ್ಯ ಗುಂಡೂರಾಯರ ಪಕ್ಷ ಸರ್ಕಾರವನ್ನು ನಡೆಸುತ್ತದೆಯೋ, ಅಥವಾ ಮಾನ್ಯ ದೇವರಾಜಅರಸ್ ನವರ ಪಕ್ಷದವರು ಸರ್ಕಾರವನ್ನು ನಡೆಸುತ್ತದೋ ಯಾರು ನಡೆಸುತ್ತಾರೋ ಎನ್ನುವುದು ಗೊತ್ತಿಲ್ಲ. ಯಾರೇ ಬರಲಿ, ಯಾವ ಪಕ್ಷವೇ ಬರಲಿ ಸಭೆಯ ಸಂಪ್ರದಾಯವನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ತೆಗೆದುಕೊಂಡು ಹೋಗಬೇಕೆನ್ನುವುದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಅದರ ಬಗ್ಗೆ ಸರ್ಕಾರದವರೂ ಸಹ ಸಹಕರಿಸುವ ಬಗ್ಗೆ ಯೋಚಿಸಬೇಕು. ಯಾವುದಾದರೂ ಒಂದು ತೀವ್ರತರವಾದ ವಿಷಯ ಬಂದಾಗ, ಈವತ್ತು ವಿರೋಧಪಕ್ಷದವರು ಏನು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅವನ್ನು ಗಮನದಲ್ಲಿಟ್ಟುಕೊಂಡು ರೂಲಿಂಗ್ ಕೊಡುವ ಬಗ್ಗೆ ತಾವು ಕೂಡ ಯೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇದನ್ನು ಮಾನ್ಯ ದೇವೇಗೌಡರೂ ಕೂಡ ಒಪ್ಪುತ್ತಾರೆಂದು ಭಾವಿಸುತ್ತೇನೆ, ಈ ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಏನು ಕಾಲವನ್ನು ಗೊತ್ತುಮಾಡಿರುತ್ತಾರೆ ಅಷ್ಟರಲ್ಲೇ ಅದನ್ನೆಲ್ಲ ಪೂರೈಸುವುದಕ್ಕೆ ಪ್ರಯತ್ನ ಮಾಡೋಣ. ಮಾತನಾಡಿದ್ದನ್ನೇ ಮತ್ತೆ ಮಾತನಾಡುತ್ತಾ ಕಾಲವನ್ನು ವ್ಯರ್ಥಮಾಡುವುದು ಬೇಡವೆಂದು ಮಾನ್ಯ ಸ್ನೇಹಿತರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮಾನ್ ದೇವೇಗೌಡರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮಾತನಾಡಿದ್ದಾರೆ ಮತ್ತೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇವೆಂದು ಹೇಳುವಾಗ ಜನಸಾಮಾನ್ಯರಿಗೆ ಅನುಕೂಲವಾಗುವಂಥ ಕಾನೂನುಗಳನ್ನು ಮಾಡಿಕೊಡಬೇಕಾಗಿದೆ. ಕಾನೂನು ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕೆಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಈವತ್ತು ಅಧಿಕಾರವನ್ನು

ನಡೆಸತಕ್ಕಂಥವರು ಕಾನೂನಿಗೆ ಅನುಗುಣವಾಗಿ ನಡೆಸಿಕೊಂಡು ಹೋಗಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಮಹಾತ್ಮಾಗಾಂಧಿ ಜಿಯವರ ಹೇಳಿದಂತೆ "if laws become intolerable, law breaking becomes a duty". ಈವತ್ತು ಕಾನೂನನ್ನು ಈ ಮನೆಯಲ್ಲಿಯಾಗಲಿ ಹೊರಗೆಯಾಗಲಿ ಸರಿಯಾಗಿ ಚಾಲನೆ ಮಾಡಿದರೆ ಕಾನೂನನ್ನು ಮುರಿಯುತಕ್ಕಂತ ಪ್ರಶ್ನೆಯೇ ಬರುವುದಿಲ್ಲ. ಇದೊಂದು ಗಂಭೀರವಾದ ವಿಷಯವಾಗಿರುವುದರಿಂದ ಅಧ್ಯಕ್ಷರು ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಕನ್‌ವರ್ಟ್ ಮಾಡಿ ಟೈಮ್ ಫಿಕ್ಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದೇನೆಂದರೆ ೫ ೧೦ ನಿಮಿಷಗಳಕಾಲ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಿ ತಾವು ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಕೂತು ಮಾತನಾಡಿ ಏನು ನಿರ್ಣಯ ಮಾಡುತ್ತೀರಿ ಅದನ್ನು ಅನೌನ್ಸ್ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

SRI D. DEVARAJ URS.—I do not want to come in the way of Speaker I have already agreed to the proposal of Sri H. D. Devegowda.

ಶ್ರೀ ಎಚ್. ಡಿ. ದೇವೇಗೌಡ.—ಇಂಥ ಒಂದು ಸಂದರ್ಭದಲ್ಲಿ ಸಭಾಧ್ಯಕ್ಷರಿಗೂ ಕೂಡ ಬಹಳ ಕಷ್ಟಕರವಾದ ಪರಿಸ್ಥಿತಿ ಇರುತ್ತದೆ. ಆದ್ದರಿಂದ ನಾನು ದಯವಿಟ್ಟು ವಿನಂತಿ ಮಾಡಿಕೊಳ್ಳುವುದೇನೆಂದರೆ ೫ ನಿಮಿಷಗಳಕಾಲ ಸಭೆಯನ್ನು ಮುಂದೂಡಿ ಅವರನ್ನು ಕರೆಸಿ ಸಮಾಲೋಚನೆ ಮಾಡಿ ಎಂದು ಹೇಳುತ್ತೇನೆ.

MR. SPEAKER.—The House stands adjourned to meet after 10 minutes.

(The House adjourned at 5-17 P.M.)

(The House re-assembled at 5 40 P.M

[MR. SPEAKER (SRI P. VENKATARAMANA) in the Chair].

ANNOUNCEMENT

MR. SPEAKER.—The matter regarding the Yadgiri incident on the 8th instant will be taken up on Saturday for two and half hours discussion. To-day and on Friday, the House will take up the Bills.

Assault of a person in the Police lock up at Bhadravathi.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸಭಾಧ್ಯಕ್ಷರೇ ನಾನೂ ಕೂಡ ಭದ್ರಾವತಿ ಪೋಲೀಸ್ ಸ್ಟೇಷನ್ ಲಾಕ್‌ಅಪ್‌ನಲ್ಲಿ ನಡೆದಿರತಕ್ಕಂಥಾ ಒಂದು ವಿಷಯದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಾನು ಈಗ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈಗ ಈ ಸದನದಲ್ಲಿರತಕ್ಕಂಥಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಅದನ್ನು ತೆಗೆದುಕೊಳ್ಳಬೇಕು ಎಂದು. ಇದು ಬಹಳ ಗಹನವಾದಂಥಾ ವಿಷಯ ಏತಕ್ಕೆಂದರೆ ಅವನು ಮುಸ್ಲಿಂ ಆಗಿದ್ದರೂ ಸಹ ಆತನು ಅಲ್ಲಿ ಸತ್ತ ಮೇಲೆ ಆ ಹೆಣವನ್ನು ಹಿಂದೂ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಿದ್ದಾರೆ. ಅಲ್ಲದೆ ಆ ಹೆಣದ ಅಂತಿಮ ದರ್ಶನ ಪಡೆಯಲು ಅವನ ಹೆಂಡತಿ, ಮಕ್ಕಳು ಮತ್ತು ತಂದೆತಾಯಿಗಳಿಗೂ ಕೂಡ ಅಲ್ಲಿರತಕ್ಕಂಥಾ ಪೋಲೀಸ್ ಇಲಾಖೆಯವರು ಒದಗಿಸಿಕೊಡಲಿಲ್ಲ. ಈ ನಿರಪರಾಧಿ ಮನುಷ್ಯ ಸಂತೆಗೆ ವ್ಯಾಪಾರಕ್ಕಾಗಿ ಬಂದಿದ್ದಾಗ ಅವನು ಕಳ್ಳ, ಕದ್ದುಕೊಂಡು ಹೋಗಿದ್ದಾನೆ ಅಂತ ಆತನನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅವನನ್ನು ಒದ್ದು ಮತ್ತು ಅವನ ಜೇಬಿನಲ್ಲಿ ಇದ್ದಂಥಾ ದುಡ್ಡನ್ನು ಕಿತ್ತುಕೊಂಡು ಹೊರಗೆ ಹೋಗು ಅನ್ನತಕ್ಕಂಥಾ ಸಂದರ್ಭದಲ್ಲಿ ಆತನು ನನ್ನ ದುಡ್ಡನ್ನು ವಾಪಸ್ಸು ಕೊಡಿ ಎಂದು ಕೇಳಿದಾಗ ಆ ಪೋಲೀಸ್ ಸ್ಟೇಷನ್‌ನಲ್ಲಿರತಕ್ಕಂಥಾ ಒಬ್ಬ ದಫೇದಾರ್ ಭೀಮರಾವ್ ಅನ್ನುವ ಮನುಷ್ಯ ಆತನನ್ನು ಒದ್ದಿದ್ದಾರೆ ಮತ್ತು ಅವನನ್ನು ಕೆಳಕ್ಕೆ ಹಾಕಿ ಬೂಟ್ಸ್ ಕಾಲಿನಲ್ಲಿ ಒದ್ದಿದ್ದಾನೆ. ಹಾಗೆ ಒದ್ದಾಗ ಆತನ ಪ್ರಾಣ ನೀಗಿದ. ಇದನ್ನು ಕಂಡಂಥಾ ಇಬ್ಬರು ವೈದ್ಯಗಳು....